ಸಾಕುಪ್ರಾಣಿ ಮೂಲದ ಸೋಂಕು ರೋಗಗಳು

ಡಾ॥ ಎಸ್ ಜೆ ನಾಗಲೋಟಮಠ
ಡಾ॥ ಪಿ ಎಸ್ ಶಂಕರ್
ಡಾ॥ ಎಮ್ ಸತ್ಯನಾರಾಯಣರಾವ್

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ 58

ಸಾಕುಪ್ರಾಣಿ ಮೂಲದ ಸೋಂಕು ರೋಗಗಳು

ಡಾ|| ಎಸ್. ಜಿ. ನಾಗಲೋಟಿಮಠ
ಡಾ|| ಪಿ. ಎಸ್. ಶಂಕರ್
ಡಾ|| ಎಮ್. ಸತ್ಯನಾರಾಯಣರಾವ್

1977

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಸಾಕುಪ್ರಾಣಿ ಮೂಲದ ಸೋಂಕು ರೋಗಗಳು (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ)
ಪ್ರಥಮ ಮುದ್ರಣ 1977

ಪುಟ xii+60 ಬೆಲೆ: ಸಾದಾಪ್ರತಿ ರೂ. 6-00 ಕ್ಯಾಲಿಕೊ ಪ್ರತಿ ರೂ. 10-00

ಪ್ರಧಾನ ಸಂಪಾದನೆ
ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು

ತಾಂತ್ರಿಕ ಪರಿಶೀಲನೆ
ಡಾ|| ಬಿ. ಎಸ್. ಕೇಶವಮೂರ್ತಿ
ಸಹ ಪ್ರಾಧ್ಯಾಪಕರು
ಪಶುವೈದ್ಯಕೀಯ ಕಾಲೇಜು

ಪರಿಷ್ಕೃತ ಬೆಲೆ
ಸಾದಾಪ್ರತಿ ರೂ. 7-50
ಕ್ಯಾಲಿಕೊಪ್ರತಿ ರೂ. 12-50

ಮುದ್ರಣ
ವೀರಭದ್ರ ಪ್ರಿಂಟರ್ಸ್
ನಂ. 8, 5ನೇ ಮೈನ್ ರೋಡ್ ಕೆ. ಪಿ. ಅಗ್ರಹಾರ, ಬೆಂಗಳೂರು-560023

ಕುಲಪತಿಗಳ ಹಾರೈಕೆ

ಇಂದಿನ ವಿಶ್ವದಲ್ಲಿನ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾ ಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತವೆ. ಈ ಕಾರ್ಯಸಾಧನೆಯಲ್ಲಿ ಕೃಷಿವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೆ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣ ಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣ ಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅದಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟು ದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಕೆ ನಡೆಯಿಸಿದ ಶಿಕ್ಷಣ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭವಾದ ಅಲ್ಪಾವಧಿಯಲ್ಲಿ ಅರ್ಧಶತ ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆ.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡುಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ದಿನಾಂಕ: 23-3-1977

ಹ. ರಾ. ಅರಕೇರಿ
ಕುಲಪತಿಗಳು

ಸಂಪಾದಕರ ಮಾತು

ಹಲವಾರು ರೋಗಗಳು ಮಾನವನಿಗೆ ವಿವಿಧ ಮೂಲಗಳಿಂದ ಬರುತ್ತವೆ. ಅವುಗಳಲ್ಲಿ ಬಹುಸಂಖ್ಯೆಯಲ್ಲಿ ಅಲ್ಲದಿದ್ದರೂ ಕೆಲವು ರೋಗಗಳು ಪ್ರಾಣಿಗಳಿಂದ ಬರುತ್ತವೆ. ಮಾನವನು ಜೀವನ ನಿರ್ವಹಣೆ ಹಾಗೂ ಮನೋರಂಜನೆಗೆ ಹಲಕೆಲವು ಪ್ರಾಣಿಗಳನ್ನು ಸಾಕಿರುತ್ತಾನೆ. ಅವುಗಳ ಮೇಲಿನ ಮಮತೆಯಿಂದ ಹಾಗೂ ಕರ್ತವ್ಯ ದೃಷ್ಟಿಯಿಂದ ಅವುಗಳ ನಿಕಟ ಒಡನಾಟ ಅನಿವಾರ್ಯವಾಗುತ್ತದೆ. ಅವುಗಳಿಗೆ ತಗುಲಿದ ಹಲವಾರು ರೋಗಗಳು ಸೋಂಕುರೋಗಗಳಾಗಿ ಅವನಿಗೂ ಅಂಟುತ್ತವೆ. ಅವುಗಳಲ್ಲಿ ಕೆಲವು ಪ್ರಾಣಾಪಾಯ ಮಾಡುವಷ್ಟು ಉಗ್ರವಾಗಿವೆ. ಇವುಗಳ ಅನೂಲಾಗ್ರವಾದ ಪರಿಚಯ ಪಶುಗಳನ್ನು ಸಾಕುವವರೆಲ್ಲರಿಗೂ ಇರುವುದು ಅವಶ್ಯವಿದೆ.

ಈ ಚಿಕ್ಕ ಗ್ರಂಥದಲ್ಲಿ ಪ್ರಾಣಿಗಳಿಂದ ಹರಡುವ 9 ರೋಗಗಳ ವಿವರಗಳನ್ನು ಮಾನವವೈದ್ಯರು ಹಾಗೂ ಪ್ರಾಧ್ಯಾಪಕರಾದ ಡಾ|| ಎಸ್. ಜೆ. ನಾಗಲೋಟಿಮಠ ಮತ್ತು ಡಾ|| ಪಿ. ಎಸ್. ಶಂಕರ್ ಅವರು, ಪಶುವೈದ್ಯರು ಹಾಗೂ ಶಿಕ್ಷಕರಾದ ಡಾ|| ಎಂ. ಸತ್ಯನಾರಾಯಣರಾವ್ ಅವರು ಸಾಮಾನ್ಯ ಓದುಗನಿಗೂ ಮನಮುಟ್ಟುವಂತೆ ವಿವರಿಸಿದ್ದಾರೆ. ಈ ಗ್ರಂಥದ ತಾಂತ್ರಿಕ ಪರಿಶೀಲನೆಯನ್ನು ಕೃಷಿ ವಿಶ್ವವಿದ್ಯಾನಿಲಯದ ಪಶುವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರಾದ ಡಾ|| ಬಿ. ಎಸ್. ಕೇಶವಮೂರ್ತಿ ಅವರು ನೆರವೇರಿಸಿದ್ದಾರೆ. ಈ ಪುಸ್ತಕದ ಒಳಹೊರ ಚಿತ್ರಗಳನ್ನು ಶ್ರೀ ಬಿ. ಪಿ. ಅಮರೇಂದ್ರಕುಮಾರ್ ಸಿದ್ಧಪಡಿಸಿದ್ದಾರೆ. ಅಚ್ಚಿಗೆ ಸಿದ್ಧಪಡಿಸುವುದರಲ್ಲಿಯೂ, ಕರಡನ್ನೋದುವುದರಲ್ಲಿಯೂ ಸಹಕರಿಸಿದವರು ನಮ್ಮ ವಿಭಾಗದ ಸಂಶೋಧನ ಸಹಾಯಕರಾದ ಶ್ರೀಮತಿ ಉಷಾಕಿರಣ್ ಅವರು. ವೀರಭದ್ರ ಪ್ರಿಂಟರ್ಸ್ ರವರು ಇದನ್ನು ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಮ್ಮ ಅನಂತ ವಂದನೆಗಳು

ಈ ಪುಸ್ತಕವನ್ನು ಪಶುವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು, ಪಶುಸಂಗೋಪಕರು, ಹೈನುವ್ಯವಸಾಯಿಗಳು ಹಾಗೂ ಇತರ ಸಾರ್ವಜನಿಕರು ಉಪಯೋಗ ಮಾಡಿಕೊಳ್ಳುವರೆಂದು ಆಶಿಸಲಾಗಿದೆ.

ಚೈತ್ರಮಾಸ ಪಿಂಗಳ ಸಂವತ್ಸರ
ಶಾಲಿವಾಹನಶಕ 1898
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕ. ಅ. ಸ. ಕಾರ್ಯದರ್ಶಿಗಳು

ಲೇಖಕರ ಮಾತು

ಅನಾದಿಕಾಲದಿಂದಲೂ ಮಾನವನು ತನ್ನ ಹಲವಾರು ಅನುಕೂಲತೆ ಮತ್ತು ಆಹಾರಕ್ಕಾಗಿ ಕೆಲವು ಪ್ರಾಣಿಗಳನ್ನು ಸಾಕುತ್ತ ಬಂದಿದ್ದಾನೆ. ಇವುಗಳಲ್ಲಿ ಸಾಮಾನ್ಯವಾದುದು ಆಕಳು, ಎಮ್ಮೆ, ಆಡು, ಕುರಿ, ನಾಯಿ, ಬೆಕ್ಕು, ಹಂದಿ, ಕುದುರೆ, ಕತ್ತೆ ಮುಂತಾದುವು. ಸಾಕುಪ್ರಾಣಿಗಳಿಂದ ಮಾನವನಿಗೆ ಅನೇಕರೀತಿಯ ಉಪಯುಕ್ತತೆಯಿದ್ದು ಆ ಪ್ರಯೋಜನಗಳು ಎಲ್ಲರಿಗೂ ತಿಳಿದಿವೆ.

ಸಾಕುಪ್ರಾಣಿಗಳೂ ಸಹ ಅನೇಕ ರೋಗಗಳಿಂದ ಬಳಲುತ್ತವೆ. ಪ್ರಾಣಿಗಳ ಬೇನೆಗಳು ಪ್ರಾಣಿಗಳಿಗೆ ಮಾತ್ರ ಸೀಮಿತ ಎಂಬ ತಿಳಿವಳಿಕೆ ಅನೇಕರಲ್ಲಿದೆ; ಸತ್ಯಸಂಗತಿ ಹಾಗಿಲ್ಲದೆ, ಹಲವಾರು ರೋಗಗಳು, ರೋಗಪೀಡಿತ ಪ್ರಾಣಿಗಳಿಂದ ಮನುಷ್ಯರಿಗೆ ತಗುಲುತ್ತವೆಂಬುದನ್ನು ವೈದ್ಯಜ್ಞಾನ ಕಳೆದ ನೂರು ವರುಷಗಳಲ್ಲಿ ಖಚಿತಪಡಿಸಿದೆ. ಮಾನವ ಇಂತಹ ರೋಗಗಳಿಂದ ಬಳಲಬಹುದಾಗಿದೆ. ಹಳ್ಳಿಗಾಡಿನಲ್ಲಿ ಪ್ರಾಣಿಗಳ ಆರೈಕೆಯನ್ನು ಕುಟುಂಬದ ಎಲ್ಲ ಸದಸ್ಯರು ಕೈಗೊಳ್ಳುವುದು ಸಾಮಾನ್ಯವಾಗಿದೆ. ಅವರು ತಮಗರಿವಿಲ್ಲದೆ ರೋಗಿಷ್ಟ ಪ್ರಾಣಿಗಳಿಂದ ರೋಗವನ್ನು ಪಡೆದು ಪಡಬಾರದ ಯಾತನೆಯನ್ನು ಪಡುತ್ತಾರೆ.

ಪ್ರಾಣಿಗಳು ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳ ದಾಳಿಗೀಡಾಗಿ ರೋಗವನ್ನು ಹೊಂದುತ್ತವೆ. ರೋಗದ ಈ ಸೋಂಕು ಇತರ ಪ್ರಾಣಿಗಳಿಗೂ ಮನುಷ್ಯರಿಗೂ ಸಾಂಕ್ರಾಮಿಕ ಜಾಡ್ಯದ ರೂಪದಲ್ಲಿ ಹರಡುತ್ತವೆ. ಇಂತಹ ರೋಗಗಳನ್ನು ಪ್ರಾಣಿಗಳು ಹೊಂದಿದಾಗ ಅವು ತೀವ್ರತರನಾದ ಗುಣಲಕ್ಷಣಗಳನ್ನು ಪ್ರಕಟಪಡಿಸಿ, ಸಮಾಜದಲ್ಲಿ ಭಯವನ್ನುಂಟುಮಾಡುತ್ತವೆ; ಉದಾಹರಣೆಗೆ ನಾಯಿಹುಚ್ಚು. ಸೋಂಕಿಗೆ ಆರೋಗ್ಯದಿಂದ ಇರುವ ಪ್ರಾಣಿಗಳು ಬ್ರುಸೆಲ್ಲ ಹಾಗೂ ಕರುಳು ಕ್ಷಯರೋಗಗಳನ್ನು ಹರಡುತ್ತವೆ.

ಮನುಷ್ಯನು ರೋಗವನ್ನು ಹೊಂದಬೇಕಾದರೆ ರೋಗಿಷ್ಟ ಪ್ರಾಣಿಗಳ ಸಂಪರ್ಕದಲ್ಲಿ ಆತ ಬರಬೇಕಾಗುವುದು. ನಾಯಿಹುಚ್ಚು ರೋಗದಲ್ಲಿ ನಾಯಿಯಿಂದ ಕಚ್ಚಿಸಿಕೊಂಡ ಘಟನೆ ಜರುಗಬೇಕಾಗುತ್ತದೆ. ಬೆಕ್ಕು ಪರಚಿಕೆಯ ರೋಗದಲ್ಲಿ ಬೆಕ್ಕಿನಿಂದ ಕಚ್ಚಿಸಿಕೊಂಡ ಇಲ್ಲವೆ ಪರಚಿಕೊಂಡ ಇತಿಹಾಸ ದೊರೆಯಬಹುದು. ಇಲ್ಲವೆ ರೋಗದ ಸೋಂಕು ಸೇರಿದ ಹಾಲು ಅಥವಾ ಹಾಲಿನ ಇತರ ತಯಾರಿಕೆಗಳ ಸೇವನೆಯ ಮೂಲಕ ರೋಗವನ್ನು (ಬ್ರುಸೆಲ್ಲ, ಕರುಳ ಕ್ಷಯ, ಗೊರಸೆ ರೋಗ) ಪಡೆಯಬಹುದು.

ಹಾಲನ್ನು ಕಾಯಿಸಿ ಬಳಸುವುದು ಸಾಮಾನ್ಯವಾದುದರಿಂದ ಕರುಳ ಕ್ಷಯದ ಮೂಲ ಕಾರಣ ದನಕ್ಷಯಾಣುವಾಗಿರುವುದು ತೀರ ಅಪರೂಪವಾಗಿದೆ. ಮಾನವಕ್ಷಯಾಣು ಶ್ವಾಸಕೋಶದಲ್ಲಿ ರೋಗವನ್ನುಂಟುಮಾಡುವಂತೆ, ದೇಹದ ಇತರ ಭಾಗಗಳಲ್ಲೂ ರೋಗವನ್ನುಂಟುಮಾಡುತ್ತವಾದ್ದರಿಂದ ಕ್ಷಯರೋಗವನ್ನು ಈ ಪುಸ್ತಕದಲ್ಲಿ ವಿವರಿಸಿಲ್ಲ.

ಕುಮರಿ ಸಿಂಬೆರೋಗ, ಗೊರಸೆರೋಗ ಇವುಗಳು ವ್ಯವಸಾಯ ಮತ್ತು ಹೈನುಗಾರಿಕೆಯ ಉದ್ಯೋಗದಲ್ಲಿ ತೊಡಗಿದ್ದು ಪ್ರಾಣಿಗಳ ಆರೈಕೆಯಲ್ಲಿ ನಿರತರಾದವರಲ್ಲಿ ಕಂಡುಬರುತ್ತವೆ. ಅದೇ ರೀತಿ ದನ, ಕುರಿಕಾಯುವವರಲ್ಲಿ, ಚರ್ಮಹದನಮಾಡುವವರಲ್ಲಿ, ಉಣ್ಣೆಯ ಕೆಲಸಗಾರರಲ್ಲಿ, ಕಸಾಯಿ ಮಾಡುವವರಲ್ಲಿ ನರಡಿಯಂತಹ ಸೋಂಕುರೋಗಗಳ ಪ್ರಮಾಣ ಹೆಚ್ಚೆಂದುತಿಳಿದುಬಂದಿದೆ.

ಇಂತಹ ಸೋಂಕುರೋಗಗಳ ಕಾರಣವಾದ ಬ್ಯಾಕ್ಟೀರಿಯ ಹಾಗೂ ವೈರಸ್ ಜೀವಾಣುಗಳು ಹರಡುವ ಬಗೆ, ಪ್ರಾಣಿ ಮತ್ತು ಮನುಷ್ಯರಲ್ಲಿ ತೋರಿಬರುವ ಲಕ್ಷಣಗಳು, ಅವುಗಳ ನಿದಾನ, ಚಿಕಿತ್ಸೆ ಮತ್ತು ಪ್ರತಿಬಂಧಕ ಕ್ರಮಗಳನ್ನು ಸಂಕ್ಷಿಪ್ತವಾಗಿ ಈ ಪುಸ್ತಕದಲ್ಲಿ ವಿವರಿಸಲಾಗಿದೆ.

ದಿನಾಂಕ : 23-3-77

ಲೇಖಕರು

ಪರಿವಿಡಿ

ಚಿತ್ರಗಳ ಪಟ್ಟಿ

ಸಾಕುಪ್ರಾಣಿ ಮೂಲದ ಸೋಂಕು ರೋಗಗಳು

1. ನಾಯಿಹುಚ್ಚು (ರೇಬಿಸ್)

ನಾಯಿಹುಚ್ಚು ಭಯಾನಕ ಸೋಂಕುರೋಗವಾಗಿದ್ದು, ಅದು ಹುಚ್ಚು ಹಿಡಿದ ನಾಯಿಗಳಿಂದ ಮನುಷ್ಯರಿಗೆ ತಗಲಬಹುದಾಗಿದೆ. ರೋಗಾಣುಗಳು ನಾಯಿಯ ಜೊಲ್ಲು ಗ್ರಂಥಿ ಮತ್ತು ಕೇಂದ್ರ ನರಮಂಡಲದಲ್ಲಿದ್ದು, ಮನುಷ್ಯನನ್ನು ಕಚ್ಚಿದಾಗ ದೇಹದೊಳಗೆ ಸೇರಿ ನರಮಂಡಲದ ಮೇಲೆ ದುಷ್ಪ್ರಭಾವ ಬೀರಿ, ಧ್ವನಿನಾಳ, ಅನ್ನನಾಳಗಳ ಸೆಡೆತವನ್ನುಂಟುಮಾಡಿ ನೀರಭಯ ಹುಟ್ಟಿಸಿ ಸಾವನ್ನುಂಟುಮಾಡುತ್ತವೆ.

ಬಹು ಪ್ರಾಚೀನ ಕಾಲದಿಂದಲೂ ನಾಯಿಹುಚ್ಚು ರೋಗ ಇದ್ದುದನ್ನು ಆಗಿನ ಬರಹಗಳು, ಉಲ್ಲೇಖಗಳು ದೃಢಪಡಿಸಿವೆ. ಪ್ರಾಚೀನ ರೋಮನ್ನರಿಗೆ, ಈಜಿಪ್ಟ್ ಜನಾಂಗದವರಿಗೆ ಈ ರೋಗ ತಿಳಿದಿತ್ತು. ಚರಕ ಸಂಹಿತೆಯಲ್ಲಿ ನಾಯಿಹುಚ್ಚು ವಿಷ ಪ್ರಭಾವದ ಬಗ್ಗೆ ಉಲ್ಲೇಖವಿದೆ. ಸುಮಾರು ಎರಡು ಸಹಸ್ರ ವರುಷಗಳ ಹಿಂದೆ ಜೀವಿಸಿದ್ದ ಅರಿಸ್ಟಾಟಲ್ ಈ ರೋಗವನ್ನು ಅಭ್ಯಸಿಸಿ ರೋಗಕಾರಕವಸ್ತು ನಾಯಿಯ ಜೊಲ್ಲಿನಿಂದ ಮಾನವನಿಗೆ ಹರಡುತ್ತದೆಂಬುದನ್ನು ಖಚಿತಪಡಿಸಿ ಆ ರೋಗಕಾರಕ ನಂಜನ್ನು ನಾಶಪಡಿಸಲು ಕಚ್ಚಿದ ಸ್ಥಳಕ್ಕೆ ಬರೆ ಕೊಡಬೇಕೆಂದು ಸೂಚಿಸಿದನು. ಅದರಿಂದಾಚೆ ಯಾವ ಮಹತ್ವದ ಸಂಶೋಧನೆಗಳೂ ಜರುಗಲಿಲ್ಲ. ಕಳೆದ ಶತಮಾನದ ಆದಿಭಾಗಗಳಲ್ಲಿ ಝಿಂಕ ಎಂಬ ತಜ್ಞ, ಪ್ರಯೋಗ ವಿಧಾನಗಳಿಂದ ಅರಿಸ್ಟಾಟಲ್ ಸೂಚಿಸಿದ ಸಂಗತಿಯನ್ನು ದೃಢಪಡಿಸಿದನು. ಆತ ಆರೋಗ್ಯವಂತ ನಾಯಿಗಳನ್ನು ತೆಗೆದುಕೊಂಡು ಅದರ ಚರ್ಮದಲ್ಲಿ ಗೀರುಗಾಯ ಮಾಡಿ ಅವುಗಳ ಮೇಲೆ ಹುಚ್ಚುನಾಯಿಯ ಜೊಲ್ಲನ್ನು ಸವರಿದನು. ಕೆಲವು ದಿನಗಳಲ್ಲಿಯೇ ಆರೋಗ್ಯದಿಂದ ಇದ್ದ ನಾಯಿಯಲ್ಲಿ ಈ ರೋಗ ತಲೆದೋರಿತು.

ಈ ತೆರನಾದ ಆಧಾರಗಳಿಂದ ಬ್ರಿಟನ್ ಮತ್ತಿತರ ಐರೋಪ್ಯ ದೇಶಗಳ ಜನರಿಗೆ ರೋಗ ಪ್ರಸಾರದ ವಿಧಾನವು ಮನವರಿಕೆಯಾಯಿತು. ಅಂದಿನಿಂದಲೇ ಆ ದೇಶಗಳಲ್ಲಿ ನಾಯಿನಿಯಂತ್ರಣ ಕಾಯ್ದೆ ಜಾರಿಯಲ್ಲಿ ಬಂದಿತು. ಈ ರೋಗದ ರೋಗಾಣುವಿನ ಬಗ್ಗೆ ಜ್ಞಾನ ಬೆಳೆಯುವ ಮುನ್ನವೇ ಹಲವಾರು ದೇಶಗಳು ಈ ರೋಗವನ್ನು ಹೊರದೂಡಿದ್ದವು.

ಕ್ರಿ. ಶ. 1881ರಲ್ಲಿ ರೌಕ್ಸ್ ಎಂಬ ತಜ್ಞರು ಹುಚ್ಚುನಾಯಿಯ ಜೊಲ್ಲನ್ನು ಮೊಲಗಳ ಮೆದುಳಿನಲ್ಲಿ ಚುಚ್ಚಿ ರೋಗವನ್ನುಂಟುಮಾಡುವ ವಿಧಾನವನ್ನು ಪ್ರಚಾರಪಡಿಸಿದರು. ಕ್ರಿ. ಶ. 1884ರಲ್ಲಿ ಫ್ರಾನ್ಸಿನ ತಜ್ಞಶ್ರೇಷ್ಠರಾದ ಲೂಯಿ ಪಾಶ್ಚರ್,


ಸೋಂಕುಹೊಂದಿದ ಪ್ರಾಣಿಯ ಮೆದುಳಿನಂಶವನ್ನು ಒಂದು ಪ್ರಾಣಿಯಿಂದ ಮತ್ತೊಂದರ ಮೆದುಳಿಗೆ, ಆ ಪ್ರಾಣಿಯ ಮೆದುಳಿನಿಂದ ಮತ್ತೊಂದು ಪ್ರಾಣಿಗೆ, ಹೀಗೆ ಒಂದರ ನಂತರ ಮತ್ತೊಂದಕ್ಕೆ ಚುಚ್ಚುತ್ತ ಸಾಗಿದಾಗ ರೋಗಾಣುವಿನ ಗುಣ ಲಕ್ಷಣಗಳಲ್ಲಿ ಉಂಟಾದ ಬದಲಾವಣೆಯನ್ನು ಕಂಡುಕೊಂಡರು. ನೈಸರ್ಗಿಕವಾಗಿರುವ ರಸ್ತೆವಿಷಕಣ (ಸ್ಟ್ರೀಟ್ ವೈರಸ್) ದೇಹವನ್ನು ಸೇರಿ ದೀರ್ಘಾವಧಿ ಮತ್ತು ಅನಿರ್ದಿಷ್ಟ ಕಾಲ ಹುದುಗಿಕೊಂಡು, ತನ್ನ ಪೀಳಿಗೆಯನ್ನು ಜೊಲ್ಲುಗ್ರಂಥಿಗಳಲ್ಲಿ ವೃದ್ಧಿಗೊಳಿಸುತ್ತದೆ. ಪುನರಪಿ ಒಂದು ಪ್ರಾಣಿಯಿಂದ ಮತ್ತೊಂದಕ್ಕೆ ಇಪ್ಪತ್ತುಬಾರಿ ಕೊಡ ಮಾಡಿದ ಮೇಲೆ ನೈಸರ್ಗಿಕವಿಷಾಣು ಸ್ಥಿರವಿಷಾಣು(ಫಿಕ್ಸ್ ವೈರಸ್) ವಾಗಿ ಮಾರ್ಪಡುತ್ತದೆ. ಅದು ಹುದುಗಿಕೊಂಡು ಬೆಳೆಯುವ ಕಾಲ ಒಂದುವಾರಕ್ಕೆ ಇಳಿಯುತ್ತದೆ. ಜೊಲ್ಲುಗ್ರಂಥಿಗಳಲ್ಲಿ ರೋಗ ಉಂಟಾಗುವುದಿಲ್ಲ. ಈ ತೆರನಾಗಿ ತನ್ನ ಗುಣಲಕ್ಷಣಗಳನ್ನು ಮಾರ್ಪಡಿಸಿಕೊಂಡ ವಿಷಾಣುವನ್ನು ರೋಗನಿರೋಧಕ ಚುಚ್ಚುಮದ್ದನ್ನು ತಯಾರಿಸಲು ಬಳಸಲಾಗುತ್ತದೆ.

ನಾಯಿಹುಚ್ಚು ವಿಷಾಣು: ಕಳೆದ ಶತಮಾನದ ಕೊನೆಯಲ್ಲಿ ಈ ರೋಗದ ಸೂಕ್ಷ್ಮಜೀವಿಯ ಇರುವಿಕೆಯನ್ನು ಕಂಡುಹಿಡಿದರೂ, ಅದರ ಗಾತ್ರ, ಆಕಾರ ಮುಂತಾದುವುಗಳ ಬಗ್ಗೆ ಈ ಶತಮಾನದ ಮಧ್ಯಭಾಗದಲ್ಲಿ ತಿಳಿಯಲಾಯಿತು. ಸೂಕ್ಷ್ಮದರ್ಶಿಗೆ ಅಗೋಚರವಾದ ಈ ವಿಷಾಣುವಿನ ಗಾತ್ರ 100 ರಿಂದ 150 ಮಿಲಿ ಮೈಕ್ರಾನುಗಳು. ಅದರ ಆಕಾರ ಗುಂಡಿನೋಪಾದಿಯಲ್ಲಿ ಇರುತ್ತದೆ. ಅದರ ಭಿತ್ತಿ ಜೇನು ಹುಟ್ಟಿನಂತಿದ್ದು ಅದರೊಳಗೆ ರೈಬೋನೂಕ್ಲಿಯಿಕ್ ಆಮ್ಲದ ವಿಷಾಣುವಸ್ತು ರಕ್ಷಿಸಲ್ಪಟ್ಟಿದೆ. ಭಿತ್ತಿಯ ಹೊರಗೆ ಕೂದಲಿನಂತಹ ಸೂಕ್ಷ್ಮತಂತುಗಳು ಹೊರ ಚಾಚಿವೆ.

ನಾಯಿಹುಚ್ಚು ವಿಷಾಣು ನೀಲಾತೀತ ಕಿರಣಗಳಿಂದ ಅಲ್ಪ ಸಮಯದಲ್ಲಿಯೇ ನಾಶಗೊಳಿಸಲ್ಪಡುತ್ತದೆ. ಅಮೋನಿಯಮ್ ಲವಣ ಮತ್ತು ಸೋಪಿನ ದ್ರಾವಣ, ಐಯೊಡಿನ್, ಈಥರ್ ಮತ್ತು ಅಸಿಟೋನ್ ಇದಕ್ಕೆ ಮಾರಕವಾಗಿವೆ.

ನೈಸರ್ಗಿಕವಾಗಿರುವ ರಸ್ತೆವಿಷಾಣು ಎಲ್ಲ ಜೀವಿಗಳಿಗೂ ಮಾರಕವಾಗಿದೆ. ಅದನ್ನೇ ಮೊಲದಿಂದ ಮೊಲಕ್ಕೆ ಚುಚ್ಚುತ್ತ ಹೋದಾಗ, ಅದರಲ್ಲಿ ಮಾನವ ರೋಗ ಕಾರಕ ಗುಣಲಕ್ಷಣ ಮಸುಕಾಗುತ್ತದೆ. ಅದನ್ನು ಆಗ ಸ್ಥಿರವಿಷಾಣುವೆಂದು ಕರೆಯಲಾಗುತ್ತದೆ. ರೋಗನಿರೋಧಕಲಸಿಕೆಯನ್ನು ಸಿದ್ಧಪಡಿಸಲು ಅಂತಹ ವಿಷಾಣುವನ್ನು ಉಪಯೋಗಿಸಲಾಗುತ್ತದೆ.

ಪ್ರಾಣಿಗಳಲ್ಲಿ ರೋಗದ ಹರಡಿಕೆ : ಈ ರೋಗಾಣು ಕೆಲವು ವನ್ಯಪ್ರಾಣಿಗಳಲ್ಲಿ ಮರಣಾಂತಿಕವಾಗಿರುವುದಿಲ್ಲ. ಅವು ಈ ಬೇನೆಯನ್ನು ಪಡೆದುಕೊಂಡೇ ಕಾಡಿನಲ್ಲಿ ಸುತ್ತುತ್ತಿರಬಹುದು. ಸಾಕಿದ ನಾಯಿ ಅಥವಾ ಬಿಡಾಡಿ ನಾಯಿಗಳು ಕಾಡಿನಲ್ಲಿ



ಚಿತ್ರ 1. ನಾಯಿಹುಚ್ಚು ರೋಗಪ್ರಸಾರದ ರೇಖಾಚಿತ್ರ

ಹೊಕ್ಕಾಗ ರೋಗಿಷ್ಠ ವನ್ಯಪ್ರಾಣಿಗಳಿಂದ ಕಚ್ಚಿಸಿಕೊಂಡು ರೋಗಾಣುವನ್ನು ಬಳುವಳಿಯ ರೂಪದಲ್ಲಿ ತರಬಹುದು. ಇಂತಹ ಪ್ರಾಣಿಗಳು ಜನವಸತಿಯಲ್ಲಿ ಹೊಕ್ಕು ಇನ್ನುಳಿದ ಪ್ರಾಣಿಗಳಿಗೆ ಹಾಗೂ ಮಾನವರಿಗೆ ರೋಗವನ್ನು ಹರಡುತ್ತವೆ.

ಕೆಲವೊಂದು ಜಾತಿಯ ತೊಗಲು ಬಾವಲಿಗಳ ಕರುಳಿನಲ್ಲಿ ಈ ವಿಷಾಣು ಯಾವ ತೊಂದರೆಯನ್ನುಂಟುಮಾಡದೆ ಜೀವಿಸಿರುತ್ತವೆ. ಅವು ಬಾವಲಿಯ ಮಲವಿಸರ್ಜನೆಯ ಕಾಲದಲ್ಲಿ ವಿಪುಲ ಸಂಖ್ಯೆಯಲ್ಲಿ ಹೊರಬರುತ್ತವೆ. ಅಲ್ಲಿಂದ ವಿಷಾಣುಗಳು ಬೇರೆ ಪ್ರಾಣಿಗಳ ಮೂಗಿನ ಮೂಲಕ ಅಥವಾ ಬಿರಿದ ಚರ್ಮ ಮತ್ತು ಲೋಳ್ಪರೆಯ ದೇಹವನ್ನು ಸೇರಬಹುದು.

ನಾಯಿಯಲ್ಲಿ ರೋಗ : ನಾಯಿಗಳಲ್ಲಿ ಈ ರೋಗ ಎರಡು ರೀತಿಯಲ್ಲಿ ಕಂಡು ಬರುತ್ತದೆ. ಅದು ತೀವ್ರ ರೂಪದಲ್ಲಿ(ಫ್ಯೂರಿಯಸ್)ಯಾಗಲಿ ಅಥವಾ ಮೂಕರೂಪ (ಡಮ್)ದಲ್ಲಿಯಾಗಲೀ ಕಾಣಬಹುದು. ವಿಷಾಣು ದೇಹವನ್ನು ಹೊಕ್ಕ ಮೇಲೆ ಅನಿರ್ದಿಷ್ಟ ಕಾಲ ಹುದುಗಿದ್ದು, ಮಿದುಳನ್ನು ಸೇರಿ, ವಿಪುಲವಾಗಿ ವೃದ್ಧಿಯಾಗಿ ಅನಂತರ ರೋಗಲಕ್ಷಣಗಳು ಕಂಡುಬರುತ್ತವೆ. ರೋಗಲಕ್ಷಣಗಳು ಕಂಡ ಹತ್ತು ದಿನಗಳಲ್ಲಿ ನಾಯಿಯು ಮರಣಹೊಂದುವುದು. ರೋಗದ ಪ್ರಾರಂಭದಲ್ಲಿ ನಾಯಿಯ ಚಿತ್ತ ವೃತ್ತಿಯಲ್ಲಿ ಬದಲಾವಣೆ ಗೋಚರಿಸಿ, ಸಿಡುಕುತನ, ತೀವ್ರತೆರನಾದ ಸಿಟ್ಟು ತೋರಿಬರುತ್ತವೆ. ಪ್ರಾರಂಭಿಕ ಹಂತದಲ್ಲಿ ಅದು ಇತರರಿಂದ ದೂರವಿರಲು ಪ್ರಯತ್ನಿಸುವುದು ; ಹುಲ್ಲು, ಕಡ್ಡಿ, ಕಟ್ಟಿಗೆಯ ತುಂಡು ಮುಂತಾದ ನಿರುಪಯುಕ್ತ ಪದಾರ್ಥಗಳನ್ನು ಶೇಖರಿಸತೊಡಗುವುದು. ಅನಂತರ ಇತರ ಪ್ರಾಣಿಗಳನ್ನು, ಮನುಷ್ಯರನ್ನು ನೆಕ್ಕತೊಡಗುವುದು.

ನಾಯಿಯಲ್ಲಿ ಜೊಲ್ಲು ವಿಪರೀತ ಬರಲಾರಂಭಿಸುವುದು ; ಗೊತ್ತುಗುರಿಯಿಲ್ಲದೆ, ಸಿಟ್ಟಿನಿಂದ ಓಡಲಾರಂಭಿಸುವುದು. ಆಗ ಅದು ಸಿಕ್ಕವರನ್ನು ಕಚ್ಚುತ್ತ, ನೆಕ್ಕುತ್ತ ಸಾಗುವುದು. ಪ್ರಾರಂಭದಲ್ಲಿ ಅದರ ದಾಹ ಹೆಚ್ಚಿ, ನೀರನ್ನು ಕುಡಿಯುವುದು. ಆದರೆ ಕೆಲಸಮಯದಲ್ಲಿಯೇ ನುಂಗುವ ಸ್ನಾಯುಗಳಲ್ಲಿ ಸೆಳೆತ ತೋರಿಬಂದು, ಅದು ಹೆಚ್ಚುತ್ತ ಹೋಗುವುದು. ಅದರಿಂದ ಪ್ರಾಣಿಗೆ ನೀರು ಕುಡಿಯಲು, ನುಂಗಲು ತೊಂದರೆ ಕಂಡು ಬರುವುದು. ಅದಕ್ಕಾಗಿಯೇ ಈ ರೋಗಕ್ಕೆ 'ನೀರಭಯ' ಎಂಬ ಹೆಸರು ದೊರೆತಿದೆ.

ರೋಗದ ತೀವ್ರತೆ ಹೆಚ್ಚಿದಂತೆ ಬಾಯಲ್ಲಿ ಜೊಲ್ಲು ಹೆಚ್ಚು ಜಿಗುಟುಗೊಂಡು ಬಾಯಿ, ಹಲ್ಲು ಮತ್ತು ಗಂಟಲಿಗೆ ಅಂಟಿಕೊಳ್ಳುವುದು. ಜೊಲ್ಲನ್ನು ಬಾಯಿಂದ ತೆಗೆಯಲು ಅದು ಮುಂಗಾಲುಗಳಿಂದ ಪ್ರಯತ್ನಿಸುತ್ತದೆ. ದವಡೆಯ ಸ್ನಾಯುಗಳ ಲಕ್ವದಿಂದ ಕೆಳದವಡೆ ಜೋತುಬೀಳುತ್ತದೆ. ಅದರ ಕೂಗು ವಿಕಾರಗೊಳ್ಳುವುದು. ಗಂಟಲಿನಲ್ಲಾದ ಬದಲಾವಣೆಯಿಂದ ನಾಯಿಯ ಧ್ವನಿ ಒಡೆದಂತಾಗುವುದು. ನಾಯಿ ಬೇರು ದನಿಯಿಂದ ಬೊಗಳುತ್ತವೆ ; ಅದು ಗುಡುಗಾಡುವ ಶಬ್ದ ಕ್ಷೀಣಗೊಳ್ಳುತ್ತ ಸಾಗಿ ಕೆಲವು ಬಾರಿ ಬೊಗಳಿದಾಗ ಶಬ್ದವೇ ಹೊರಬಾರದು. ಇದಕ್ಕೆ 'ಮೂಕನಾಯಿ'ಹುಚ್ಚು

ಎಂದು ಕರೆಯಲಾಗಿದೆ. ಈ ಬದಲಾವಣೆಗಳೊಂದಿಗೆ ನಾಯಿಯಲ್ಲಿ ಅಸಹನೆ ಹೆಚ್ಚು ಬೆಳವಣಿಗೆ ಹೊಂದುತ್ತ ಸಾಗಿ ಇತರ ಪ್ರಾಣಿಗಳ ಇರವನ್ನು ಸಹಿಸದೆ ಕಚ್ಚಲು ಪ್ರಯತ್ನಿಸುವುದು. ಅದು ನಿರ್ಲಕ್ಷತನದಿಂದ ಓಡುತ್ತ ಸಿಕ್ಕ ಪ್ರಾಣಿ, ಮನುಷ್ಯರನ್ನು ಕಚ್ಚುತ್ತ ಸಾಗುತ್ತದೆ. ಕೊನೆಗೆ ದೈಹಿಕಶಕ್ತಿ ಕ್ಷೀಣಗೊಂಡು ಮೂರ್ಛಾವಸ್ಥೆಯಲ್ಲಿ ಮರಣ ಹೊಂದುವುದು.

ನಾಯಿಹುಚ್ಚು ತಗಲಬಹುದಾದ ಪ್ರಾಣಿಗಳು: ನಾಯಿಹುಚ್ಚು ರೋಗವು ಯಾವುದೇ ಬಿಸಿರಕ್ತದ ಪ್ರಾಣಿಯಲ್ಲಿ ತಲೆದೋರಬಹುದು. ಸಾಮಾನ್ಯವಾಗಿ ಈ ರೋಗವನ್ನು ಸ್ಥೂಲವಾಗಿ ಎರಡು ತೆರನಾಗಿ ವಿಂಗಡಿಸಲಾಗಿದೆ: ವನ್ಯ ಮತ್ತು ನಗರ. ವನ್ಯಪ್ರಾಣಿಗಳಾದ ತೋಳ, ನರಿ, ಸೀಳ್ನರಿ, ಬಾವಲಿಯಲ್ಲಿ ಈ ರೋಗ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಬೀದಿಪ್ರಾಣಿಗಳಾದ ನಾಯಿ, ಅಪರೂಪವಾಗಿ ಬೆಕ್ಕು ಮತ್ತು ಆಕಳು ಈ ರೋಗವನ್ನು ಪ್ರಕಟಿಸುತ್ತವೆ. ಬೀದಿ ನಾಯಿಗಳು ವಿಪುಲ ಸಂಖ್ಯೆಯಲ್ಲಿರುವ ನಮ್ಮ ದೇಶದಲ್ಲಿ ನಾಯಿಹುಚ್ಚು ಸುಲಭವಾಗಿ ಹರಡುವ ಸಾಧ್ಯತೆಯನ್ನು ಪಡೆದಿದೆ.

ಮನುಷ್ಯರಲ್ಲಿ ನಾಯಿಹುಚ್ಚು : ಮಾನವನು ನಾಯಿಹುಚ್ಚು ರೋಗದಿಂದ ಬಳಲುತ್ತಿರುವ ಪ್ರಾಣಿಗಳಿಂದ ವಿಷಾಣುಗಳನ್ನು ಪಡೆಯುತ್ತಾನೆ. ನಾಯಿಯು ಕಚ್ಚುವುದರಿಂದ ಗಾಯವಾಗುತ್ತದೆ. ಗಾಯದ ಆ ಪ್ರದೇಶದಲ್ಲಿ ಜೊಲ್ಲು ಅಂಟಿಕೊಳ್ಳುತ್ತದೆ. ಜೊಲ್ಲಿನಲ್ಲಿ ರೋಗಾಣುಗಳು ಸಾಕಷ್ಟು ಸಂಖ್ಯೆಯಲ್ಲಿದ್ದು ಅವು ನರತಂತುಗಳ ಮೂಲಕ ಕೇಂದ್ರ ನರಮಂಡಲದತ್ತ ಸಾಗಿಹೋಗುತ್ತವೆ.

ರೋಗಾಣುಗಳು ದೇಹವನ್ನು ಸೇರಲು ದೊಡ್ಡಗಾಯಗಳೇ ಬೇಕೆಂದಿಲ್ಲ. ಚಿಕ್ಕಪುಟ್ಟಗಾಯಗಳು, ಬಿರಿದ ಚರ್ಮ ಸಾಕಾಗಬಹುದು. ಹೊಸದಾಗಿ ತರಚಲ್ಪಟ್ಟ ಚರ್ಮವನ್ನು ಕಚ್ಚುವುದರಿಂದಲ್ಲದೆ, ನೆಕ್ಕುವುದರಿಂದಲೂ ರೋಗಾಣುಗಳು ದೇಹದೊಳಗೆ ಸೇರಬಲ್ಲವು.

ರೋಗಾಣುಗಳು ಕೇಂದ್ರ ನರಮಂಡಲವನ್ನು ಸೇರಿ ಅಲ್ಲಿನ ಜೀವಕೋಶಗಳಲ್ಲಿ ಹುದುಗಿ ಕುಳಿತು ಬೆಳೆಯಲಾರಂಭಿಸುತ್ತವೆ. ಅಲ್ಲಿನ ಜೀವಕಣಗಳು ನಾಶಗೊಂಡು ತಮ್ಮ ಕಾರ್ಯ, ಕ್ರಿಯೆಯಲ್ಲಿ ವ್ಯತ್ಯಾಸವನ್ನು ತೋರ್ಪಡಿಸುತ್ತವೆ. ಅದು ರೋಗ ಲಕ್ಷಣಗಳ ಪ್ರಕಟಣೆಗೆ ಕಾರಣವಾಗುತ್ತದೆ.

ರೋಗಾಣುಗಳು ದೇಹವನ್ನು ಸೇರಿದ ಮೇಲೆ ರೋಗಲಕ್ಷಣಗಳು ಪ್ರಕಟವಾಗಲು ಹೆಚ್ಚು ಕಾಲಾವಧಿ ಬೇಕಾಗುತ್ತದೆ. ಈ ಅವಧಿಯು ರೋಗಾಣು ಪ್ರವೇಶಿಸಿದ ಸ್ಥರ

ಮತ್ತು ಅದಕ್ಕೂ ಕೇಂದ್ರನರಮಂಡಲಕ್ಕೂ ಇರುವ ಅಂತರವನ್ನು ಅವಲಂಬಿಸಿದೆ. ದೀರ್ಘಾವಧಿಕಾಲ ದೇಹದಲ್ಲಿ ರೋಗಾಣುಗಳು ಹುದುಗಿ ಕುಳಿತು ರೋಗಲಕ್ಷಣವನ್ನು ಪ್ರಕಟಪಡಿಸಲು ಒಂದೆರಡು ತಿಂಗಳುಕಾಲ ತೆಗೆದುಕೊಳ್ಳುವುದು ಸಾಮಾನ್ಯ. ಕೆಲವು ಬಾರಿ ಆ ಅವಧಿ ಒಂದು ವರುಷವಾಗಬಹುದು. ರೋಗಾಣುಗಳು ಮುಖ, ಕುತ್ತಿಗೆ, ತಲೆ, ಈ ಭಾಗಗಳಿಂದ ದೇಹವನ್ನು ಸೇರಿದ್ದರೆ ರೋಗಲಕ್ಷಣಗಳು ಕಡಮೆ ಅವಧಿಯಲ್ಲಿ ತೋರಿಬರುತ್ತವೆ. ತೋಳು, ಕೈ, ಬೆನ್ನು, ಎದೆ, ಹೊಟ್ಟೆ ಮೊದಲಾದ ಪ್ರದೇಶ ಗಳಿಂದ ದೇಹವನ್ನು ಸೇರಿದ್ದರೆ ರೋಗಲಕ್ಷಣಗಳು ಪ್ರಕಟವಾಗುವುದು ಇನ್ನೂ ತಡ ವಾಗುವುದು. ಕಾಲುಗಳ ಮೂಲಕ ಸೇರಿದ್ದರೆ ಗುಣಲಕ್ಷಣಗಳು ಪ್ರಕಟವಾಗಲು ಬಹಳ ದಿನಗಳು ಬೇಕಾಗುತ್ತವೆ. ವನ್ಯಪ್ರಾಣಿಗಳು ಕಚ್ಚಿದಾಗ ದೇಹದಲ್ಲಿನ ಗಾಯಗಳು ತೀವ್ರ ಸ್ವರೂಪದ್ದಾಗಿರುವುದರಿಂದ, ರೋಗಲಕ್ಷಣಗಳು ಪ್ರಕಟಗೊಳ್ಳಲು ಹೆಚ್ಚು ಕಾಲ ಹಿಡಿಯುವುದಿಲ್ಲ. ನಾಯಿ ಕಚ್ಚಿದ ಪ್ರದೇಶದ ಮಧ್ಯ ಬಟ್ಟೆಯಿದ್ದರೆ ಗುಣಲಕ್ಷಣ ಗಳು ಪ್ರಕಟವಾಗಲು ಹೆಚ್ಚುಸಮಯ ಬೇಕಾಗುವುದು.

ಈ ರೋಗದಿಂದ ಮರಣಹೊಂದಿದವರ ಮಿದುಳನ್ನು ಪರೀಕ್ಷಿಸಿದರೆ, ಮಿದುಳಿನ ಅನೇಕ ಭಾಗಗಳಲ್ಲಿ ರಕ್ತಸ್ರಾವ ಉಂಟಾಗಿರುವುದು ಗೋಚರಿಸುತ್ತದೆ. ನರಕೋಶ ಗಳು, ಅದರಲ್ಲೂ ಹಿಮ್ಮಿದುಳಿನಲ್ಲಿ ಊದಿಕೊಂಡಿರುತ್ತವೆ; ಕೆಲವೆಡೆ ವಿನಾಶವನ್ನು ತೋರಿಸುತ್ತವೆ. ನರದ ಕಣಗಳಲ್ಲಿ ಮುಂಡನೆಯ ವಸ್ತು–ನೆಗ್ರಿಕಣಗಳು ಗೋಚರಿ ಸುತ್ತವೆ. ಅವು ರೋಗನಿದಾನದಲ್ಲಿ ಬಹುಮುಖ್ಯ.

ರೋಗ ಲಕ್ಷಣಗಳು : ಸಾಮಾನ್ಯವಾಗಿ ಕಚ್ಚಿಸಿಕೊಂಡ ಸ್ಥಳದಲ್ಲಿ ಅಥವಾ ರೋಗಾಣು ಪ್ರವೇಶಿಸಿದ ಚರ್ಮದ ಬಿರುಕಿನಲ್ಲಿ, ರೋಗಾಣು, ಕೇಂದ್ರ ನರಮಂಡಲದಲ್ಲಿ ಹುದುಗಿ ವೃದ್ಧಿಯಾದಮೇಲೆ ವೇದನೆಯುಂಟಾಗುತ್ತದೆ. ಅದರೊಟ್ಟಿಗೆ ಆ ಪ್ರದೇಶದ ಸುತ್ತ ಉರುಪು, ಸ್ಪರ್ಶಾತಿರೇಕತೆ ಕಂಡುಬರುತ್ತದೆ. ಜೊತೆಗೆ ಜ್ವರ, ತಲೆನೋವು, ವೇಗನಾಡಿ, ಅಸ್ಥಿರತೆ, ನಿದ್ರಾಹೀನತೆ, ಅನಿಯಮಿತ ಉಸಿರಾಟ, ವೇಗ ಮಾತು ಗೋಚ ರಿಸಿ ಒಂದೆರಡು ದಿನಗಳ ಕಾಲ ತೋರಿಬರುತ್ತದೆ.

ಅನಂತರ ರೋಗಿಯು ಉದ್ರೇಕ ಸ್ಥಿತಿಯನ್ನು ತಲುಪುತ್ತಾನೆ. ರೋಗಿಯಲ್ಲಿ ವಿಪರೀತ ತಳಮಳ, ಉನ್ಮಾದಸ್ಥಿತಿಯುಂಟಾಗುತ್ತದೆ. ಉಸಿರಾಟ ಪ್ರಯಾಸಕರ ವಾಗುತ್ತದೆ. ಬಾಯಾರಿಕೆ ಹೆಚ್ಚುವುದು ನೀರನ್ನು ಕುಡಿಯಲು ಪ್ರಯತ್ನಿಸಿದಾಗ ನುಂಗುವ ಮತ್ತು ಉಸಿರಾಟದ ಸ್ನಾಯುಗಳಲ್ಲಿ ಏಕಾಏಕಿ ಸೆಡೆತ ಉಂಟಾಗುವುದು. ಸೆಡೆತಗಳು ಹಲವಾರು ಸೆಕೆಂಡುಗಳ ಕಾಲ ತೋರಿ ಕಡಮೆಯಾಗುತ್ತದೆ. ಸೆಡೆತಗಳ ನೋವಿನಿಂದ ಪಾರಾದ ರೋಗಿಯು ಭಯವಿಹ್ವಲನಾಗುತ್ತಾನೆ. ಬರಬರುತ್ತ ಉಸಿರು

ಗಟ್ಟಿಸುವ ಸೆಡೆತಗಳು ಏಕಾಏಕಿ ಉದ್ಭವಿಸುತ್ತವೆ. ನೀರಿನಿಂದ ಈ ಸ್ಥಿತಿಯನ್ನು ಪ್ರಚೋದಿಸಬಹುದು. ಕುಡಿಯುವ ನೀರಿನ ಲೋಟ ಬಾಯಿ ಸಮೀಪಕ್ಕೆ ಬಂದರೆ ತಲೆ ಹಿಂದಕ್ಕೆಳೆದುಬಿಡುವುದು. ಉಸಿರಾಟ ಕಷ್ಟದಾಯಕವಾಗುವುದು. ಬಾಯೊಳಕ್ಕೆ ಸೇರಿದ ನೀರು ಕೂಡಲೆ ಹೊರಹಾಕಲ್ಪಡುವುದು. ಕತ್ತು ಮೇಲಕ್ಕೇಳುವುದು. ಎದೆಗೂಡು ಹಿಗ್ಗುವುದು. ಕತ್ತಿನ ಸ್ನಾಯುಗಳು ಸಂಕುಚಿತಗೊಳ್ಳುವುವು. ನೀರಿನ ಶಬ್ದ, ಬೆಳಕು, ತಂಗಾಳಿ, ಇಂತಹ ಯಾವುದೇ ಪ್ರಚೋದನೆ ಸೆಡೆತವನ್ನುಂಟುಮಾಡಬಹುದು. ದನಿನಾಳದ ಸೆಡೆತದಿಂದಾಗಿ ಧ್ವನಿಯು ಬದಲುಗೊಳ್ಳುವುದು; ಉಸಿರಾಟ ತೊಂದರೆದಾಯಕವಾಗುತ್ತದೆ. ಬಾಯಿಂದ ನೊರೆಯಂತಹ ಜೊಲ್ಲು ಹೊರಬರುತ್ತದೆ. ಬಾಯಲ್ಲಿ, ಗಂಟಲಲ್ಲಿ, ಜೊಲ್ಲು ಸಂಗ್ರಹಗೊಂಡು ಅದನ್ನು ನುಂಗಲಾರದೆ ತುಟಿಯಿಂದ ಹೊರಹಾಕಲ್ಪಡುತ್ತದೆ. ರೋಗಿಯು ಬೆದರಿಕೆಯ ಭೀತಿಯಿಂದ ವಿಹ್ವಲಗೊಳ್ಳುತ್ತಾನೆ.

ಮೂರು ನಾಲ್ಕು ದಿನಗಳಲ್ಲಿ ರೋಗ ಉಲ್ಬಣಿಸಿ, ಸ್ನಾಯು ಸೆಡೆತದಿಂದ ಬೆನ್ನು ಬಿಲ್ಲಿನಂತೆ ಬಾಗುತ್ತದೆ. ಉಸಿರಾಟ ಕಷ್ಟಕರವಾಗುತ್ತದೆ. ಸೆಡೆತ ಬಂದಾಗಲೇ ರೋಗಿಯು ಉಸಿರುಗಟ್ಟಿ ಸಾವನ್ನು ಹೊಂದುವುದು. ಇಲ್ಲವೇ ಶಕ್ತಿಗುಂದಿ, ನಿಸ್ಸಹಾಯಕನಾಗಿ ಎಚ್ಚರವಿಲ್ಲದ ಸ್ಥಿತಿಯಲ್ಲಿ ಸಾವನ್ನು ಹೊಂದಬಹುದು. ರೋಗವು ಎಷ್ಟೇ ಮಾರಕವಾಗಿದ್ದರೂ ಹುಚ್ಚುನಾಯಿಯಂತೆ ಮನುಷ್ಯ ಕಚ್ಚುವುದಿಲ್ಲ. ಆದರೆ ಜೊಲ್ಲಿನಲ್ಲಿ ವಿಷಾಣುವಿರುವುದು ಸಾಧ್ಯ. ರೋಗದ ಗುಣಲಕ್ಷಣಗಳು ಪ್ರಕಟವಾದಮೇಲೆ ಸಾವು ನಿಶ್ಚಿತ.

ಚಿಕಿತ್ಸೆ : ರೋಗವು ನಾಯಿಹುಚ್ಚು ಎಂದು ಖಚಿತವಾದರೆ ರೋಗಿಯನ್ನು ರೋಗದಿಂದ ಸಾವು ಮುಕ್ತಗೊಳಿಸುವುದೇ ವಿನಃ ಯಾವ ಶರನಾದ ಚಿಕಿತ್ಸೆಯೂ ಗುಣಪಡಿಸುವುದಿಲ್ಲ. ಉಪಚಾರದ ವಿಧಾನಗಳೆಲ್ಲವೂ ಕೇವಲ ರೋಗಿಯನ್ನು ಸಾಂತ್ವನಗೊಳಿಸಲು ಅಥವಾ ಬೇರೆ ಅಡ್ಡ ಪರಿಣಾಮಗಳನ್ನು ದೂರ ಮಾಡುವಲ್ಲಿ ಕೆಲಮಟ್ಟಿನ ಸಹಾಯಕ್ಕಾಗಿವೆ. ಗುಣಲಕ್ಷಣಗಳು ಪ್ರಕಟವಾದ ವಾರಾಂತ್ಯದಲ್ಲಿ ರೋಗಿಯು ಮರಣ ಹೊಂದುತ್ತಾನೆ.

ಈ ರೋಗ ಬಾರದಂತೆ ತಡೆಗಟ್ಟಲು ಸಾಧ್ಯವಿರುವುದರಿಂದ ನಾಯಿಯ ಕಡಿತವನ್ನು ಅಲಕ್ಷಿಸದೆ ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆಗೆ ಒಳಪಡಬೇಕು.

ಪ್ರತಿಬಂಧಕೋಪಾಯ : ರೋಗವನ್ನು ಬೆಳೆಯಗೊಡದಂತೆ ಮಾಡುವಲ್ಲಿ ಪ್ರತಿಬಂಧಕೋಪಾಯಗಳು ತುಂಬ ಉಪಯುಕ್ತವಾಗಿವೆ. ಅದರ ಮೂಲೋದ್ದೇಶ ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಆದಷ್ಟು ಬೇಗನೆ ಉದ್ದೀಪನಗೊಳಿಸುವುದೇ

ಆಗಿದೆ. ದೇಹದಲ್ಲಿ ನಿರೋಧಕ ಶಕ್ತಿಯು ರೋಗಾಣು ರೋಗಿಯ ನರಮಂಡಲವನ್ನು ತಲುಪುವ ಮೊದಲೇ ಪ್ರಬಲವಾದರೆ ವ್ಯಕ್ತಿಯು ರೋಗದ ದವಡೆಯಿಂದ ಪಾರಾಗುವನು.

ಇಂದು ಹೆಚ್ಚಾಗಿ ಉಪಯೋಗಿಸಲ್ಪಡುವ ಲಸಿಕೆಯೆಂದರೆ ಸೆಂಪಲ್ ವ್ಯಾಕ್ಸಿನ್. ಪ್ರಾಣಿಗಳ ಮೆದುಳಿನಲ್ಲಿ ಪುನರಪಿ ಚುಚ್ಚುತ್ತ ಮಂಕುಗೊಳಿಸಿದ ವಿಷಾಣುವನ್ನು ಮೆದುಳಿನಿಂದ ಹೊರತೆಗೆದು ಫಿನಾಲ್‌ನಲ್ಲಿ ಮಿಶ್ರಗೊಳಿಸಿ ಸ್ಥಿರಪಡಿಸಿದ ನಿರ್ಜೀವ ವಿಷಾಣು ಲಸಿಕೆಯಿದು. ಈ ಲಸಿಕೆಯನ್ನು ಎರಡು ವಾರ ಕೊಡಬೇಕು. ಈ ಲಸಿಕೆಯು ಕ್ವಚಿತ್ತಾಗಿ ಚುಚ್ಚುಗೆ ಪಡೆದ ವ್ಯಕ್ತಿಯ ಮೆದುಳಿನ ಮೇಲೆ ಹಾನಿಕಾರಕ ಪ್ರಭಾವ ಬೀರಿ ಅಲ್ಲಿ ಪ್ರತಿರೋಧ ಕಣಗಳನ್ನು ಉತ್ಪಾದಿಸಿ ಮೆದುಳಿನ ಕಾರ್ಯಶಕ್ತಿಯನ್ನು ಕುಂದಿಸಬಹುದಾಗಿದೆ. ಎಲ್ಲೋ ಕೆಲವು ಬಾರಿ ಉಂಟಾಗುವ ಈ ವಿಪರೀತ ಪ್ರತಿಕ್ರಿಯೆಯನ್ನು ಲಕ್ಷಿಸಿ, ನಾಯಿಹುಚ್ಚು ರೋಗ ಬೆಳೆಯಬಹುದಾದ ಸಂಭವ ಇದ್ದ ವ್ಯಕ್ತಿಗೆ ಮಾತ್ರ ಚುಚ್ಚು ಲಸಿಕೆಯನ್ನು ಕೊಡಲಾಗುವುದು. ಮೆದುಳ ಮೇಲಿನ ದುಷ್ಪರಿಣಾಮಗಳು ಉಂಟಾಗದಂತೆ ಮಾಡಲು ಈ ವಿಷಾಣುಗಳನ್ನು ಬೆಳೆಯಲು ಭ್ರೂಣಾವಸ್ಥೆಯ ಕೋಳಿ ಮತ್ತು ಬಾತುಮೊಟ್ಟೆಗಳನ್ನು ಬಳಸಲಾಗಿದೆ. ಈ ಲಸಿಕೆಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಉಪಯೋಗದಲ್ಲಿದ್ದರೂ, ನಮ್ಮ ದೇಶದಲ್ಲಿಹೆಚ್ಚು ಪ್ರಚಲಿತವಾಗಿಲ್ಲ ಆದರೆ ಈ ಲಸಿಕೆಯು ಸೆಂಪಲ್ ವ್ಯಾಕ್ಸಿನಿನಷ್ಟು ಪರಿಣಾಮಕಾರಿಯಾಗಿಲ್ಲವೆಂದು ಅನೇಕರ ಅಭಿಮತ.

ದೇಹದಲ್ಲಿ ಸಕ್ರಿಯವಾಗಿ ನಿರೋಧಕ ಶಕ್ತಿಯನ್ನು ಬೆಳೆಸುವ ಈ ವ್ಯಾಕ್ಸಿನ್ ಅಲ್ಲದೆ, ಆ ಶಕ್ತಿಯನ್ನು ಪರೋಕ್ಷವಾಗಿ ಕೊಡುವ ವಿಧಾನವೂ ಬಳಕೆಯಲ್ಲಿ ಬಂದಿದೆ. ಕುದುರೆಗಳಿಗೆ ನಾಯಿಹುಚ್ಚು ರೋಗಕ್ಕೆ ಸಂಬಂಧಿಸಿದ ವ್ಯಾಕ್ಸಿನ್ನನ್ನು ಪದೇಪದೇ ಚುಚ್ಚಿದ ನಂತರ, ಆ ಪ್ರಾಣಿಗಳ ರಕ್ತದಲ್ಲಿ ರೋಧ ವಸ್ತುಗಳ ಪ್ರಮಾಣ ಹೆಚ್ಚುವುದು. ಆಗ ಕುದುರೆಗಳ ರಕ್ತವನ್ನು ಹೊರತೆಗೆದು ಅವುಗಳ ರಸವನ್ನು ಬೇರ್ಪಡಿಸಿದಾಗ, ಅದರಲ್ಲಿ ರೋಧವಸ್ತುಗಳು ಹೆಚ್ಚು ಪ್ರಮಾಣದಲ್ಲಿ ಸಂಗ್ರಹಗೊಂಡಿರುತ್ತವೆ. ಹುಚ್ಚು ನಾಯಿಯಿಂದ ಕಚ್ಚಿಸಿಕೊಂಡ ವ್ಯಕ್ತಿಯಲ್ಲಿ ರೋಧವಸ್ತುಗಳ ತಯಾರಿಕೆಯು ಪ್ರಾರಂಭವಾಗುವವರೆಗೂ, ನಿರೋಧಕ ಶಕ್ತಿಯನ್ನು ಕೊಡಲು ಈ ಚುಚ್ಚುರಸಿಕೆಯನ್ನು ಕೊಡಲಾಗುವುದು. ಅದರಲ್ಲಿದ್ದ ಕುದುರೆಯ ರೋಧವಸ್ತುಗಳು ವಿಷಾಣುಗಳೊಡನೆ ಹೋರಾಡುತ್ತವೆ. ಅದರಿಂದ ವ್ಯಕ್ತಿಯು ರೋಗದ ಹಿಡಿತಕ್ಕೆ ಸಿಕ್ಕದಂತೆ ಪಾರು ಮಾಡುವ ಸಾಧ್ಯತೆಯಿದೆ. ದೇಹದಲ್ಲಿ ಇಂತಹ ರಸಿಕೆಯ ಬಳಕೆಯು ಒಗ್ಗದಿರುವಿಕೆಯನ್ನು ಉಂಟುಮಾಡಬಹುದಾದುದರಿಂದ ಅದರ ಬಳಕೆಯಲ್ಲಿ ಜಾಗರೂಕತೆಯನ್ನು ವಹಿಸಬೇಕು.

ನಾಯಿಹುಚ್ಚು ರೋಗದಿಂದ ರಕ್ಷಿಸಲು ಕ್ರಿ. ಶ. 1960ರಲ್ಲಿ ಜಾಗತಿಕ ಆರೋಗ್ಯ ಸಂಸ್ಥೆಯ ತಜ್ಞರು ಕೆಲವು ಸಲಹೆಗಳನ್ನು ನೀಡಿದರು. ಅವು ಕೆಳಗಿನಂತಿವೆ:

1) ನಾಯಿಹುಚ್ಚು ರೋಗ ನಿರೋಧಕ ಲಸಿಕೆಯಿಂದ ಉಪಚರಿಸಲ್ಪಡದಿದ್ದ ವ್ಯಕ್ತಿಯನ್ನು ರೋಗನಾಯಿಯು ಅನೇಕ ಸ್ಥಳಗಳಲ್ಲಿ ಅಥವಾ ಉಗ್ರವಾಗಿ ಕಚ್ಚಿದ್ದರೆ ಆ ವ್ಯಕ್ತಿಗೆ ನಾಯಿಹುಚ್ಚು ಚುಚ್ಚುರಸಿಕೆಯನ್ನು ತಕ್ಷಣ ಕೊಡಬೇಕು. ಅನಂತರ ಕನಿಷ್ಠ 10 ಸೆಂಪಲ್ ಲಸಿಕೆಯನ್ನು ನೀಡಬೇಕು.

2) ಒಂದು ವೇಳೆ ನಾಯಿಯಿಂದ ಕಚ್ಚಿಸಿಕೊಂಡ ವ್ಯಕ್ತಿಯು ಏಳುದಿನಗಳ ಮೇಲೆ ಕಂಡದ್ದಾದರೆ ಆತನಿಗೆ ಚುಚ್ಚುರಸಿಕೆ ನಿರುಪಯುಕ್ತ. ಆಗ 14 ಸೆಂಪಲ್ ಲಸಿಕೆಗಳನ್ನು ಚುಚ್ಚಬೇಕು.

3) 15 ವರುಷಗಳಿಂದೀಚೆಗೆ ಈ ರೋಗದ ಬಗ್ಗೆ ಪೂರ್ಣ ಉಪಚಾರಕ್ಕೊಳಗಾಗಿದ್ದು ವ್ಯಕ್ತಿಯು ಮತ್ತೆ ರೋಗದ ಸಂಪರ್ಕದಲ್ಲಿ ಬಂದರೆ ಕೇವಲ ಎರಡು ಸೆಂಪಲ್ ಲಸಿಕೆಗಳನ್ನು ವಾರಕ್ಕೊಂದರಂತೆ ಕೊಟ್ಟರೆ ಸಾಕು. ಪೂರ್ಣ ಉಪಚಾರಕ್ಕೊಳಗಾಗಿದ್ದ ಅವಧಿ 15 ವರುಷಗಳಿಗಿಂತ ಹೆಚ್ಚಾಗಿದ್ದರೆ ವ್ಯಕ್ತಿಗೆ 14 ಸೆಂಪಲ್ ಲಸಿಕೆಗಳನ್ನು ಚುಚ್ಚಬೇಕು.

4) ಪದೇಪದೇ ಈ ರೋಗದ ಪ್ರಾಣಿಗಳ ಸಂಪರ್ಕದಲ್ಲಿ ಬರುವ ವ್ಯಕ್ತಿಗಳಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ತಿಂಗಳಿಗೊಂದರಂತೆ ಐದು ತಿಂಗಳು ಸೆಂಪಲ್ ಲಸಿಕೆಗಳನ್ನು ಚುಚ್ಚಬೇಕು. ಅನಂತರ ಪ್ರತಿ ವರುಷ ಅಥವಾ ಎರಡು ವರುಷಗಳಿಗೊಮ್ಮೆ ಒಂದೊಂದು ಲಸಿಕೆಯನ್ನು ಚುಚ್ಚಿಸಿಕೊಳ್ಳಬೇಕು.

ರೋಗ ನಿಯಂತ್ರಣ: ನಾಯಿಹುಚ್ಚು ರೋಗದ ನಿಯಂತ್ರಣವು ಕೇವಲ ಲಸಿಕೆ ಅಥವಾ ಉಪಚಾರದಿಂದ ಆಗಲಾರದು. ಅದನ್ನು ಕೇವಲ ಸಾಮಾನ್ಯ ತಿಳಿವಳಿಕೆ ಹಾಗೂ ಸಂಘಟನೆಗಳ ಆಧಾರದ ಮೇಲೆ ನಿಯಂತ್ರಿಸಬಹುದು. ಅನೇಕ ಪಾಶ್ಚಿಮಾತ್ಯ ದೇಶಗಳಲ್ಲಿ ಈ ರೋಗದ ನಿಯಂತ್ರಣವು ರೋಗದ ಬಗ್ಗೆ ಇನ್ನೂ ಹೆಚ್ಚು ತಿಳಿವಳಿಕೆ ಯಿಲ್ಲದಿದ್ದಾಗಲೇ ಸಾಧ್ಯವಾಯಿತು. ಬಿಡಾಡಿ ನಾಯಿಗಳು ಅಥವಾ ಬೀದಿ ನಾಯಿಗಳು ರೋಗವನ್ನು ಹರಡುವ ಮೂಲಗಳಾಗಿವೆ. ಅವುಗಳಿಂದಲೇ ರೋಗವು ಸಾಕುನಾಯಿ ಅಥವಾ ಪ್ರಾಣಿಗಳಿಗೆ ಮತ್ತು ಮಾನವರಿಗೆ ತಗಲುವುದು. ಬೀದಿನಾಯಿಗಳಿಲ್ಲದಿದ್ದರೆ ರೋಗದ ಮೂಲವೇ ಇಲ್ಲವೆಂದು ಅರ್ಥ. ವನ್ಯಪ್ರಾಣಿಗಳು ರೋಗಕ್ಕೆ ಮತ್ತೊಂದು ಕಾರಣವಾಗಿದ್ದರೂ, ಅವುಗಳೊಡನೆ ಬರುವ ಸಂಪರ್ಕ ಕಡಮೆಯಾದುದರಿಂದ ಅವುಗಳ ಬಗ್ಗೆ ಅಷ್ಟು ಮಹತ್ವ ನೀಡುವ ಅಗತ್ಯವಿಲ್ಲ.

ಈ ರೋಗದ ನಿಯಂತ್ರಣ ನಿಯಮಗಳು ಬಹಳ ಕಾಲದಿಂದ ನಿಶ್ಚಿತಗೊಂಡಿವೆ. ಅವುಗಳೆಂದರೆ, ಎಲ್ಲ ಬೀದಿನಾಯಿಗಳನ್ನು ಕೊಂದು ಹಾಕುವುದು. ಎಲ್ಲ ಸಾಕುನಾಯಿಗಳನ್ನು ನೋಂದಾಯಿಸಿ, ನಿರ್ದಿಷ್ಟ ಆಜ್ಞಾಪತ್ರವನ್ನು ಪಡೆಯಬೇಕು. ಆ ರೀತಿಯ ಲೈಸನ್ಸ್ ಕೊಡುವಾಗ ನಾಯಿಗಳಿಗೆ ರೋಗ ನಿರೋಧಕ ಚುಚ್ಚುಮದ್ದನ್ನು ಚುಚ್ಚಬೇಕು. ನಾಯಿಗಳನ್ನು ಕೊಲ್ಲಬೇಕಾದರೆ ವಿಷಗುಳಿಗೆ ಆಹಾರವನ್ನು ನೀಡುವುದು ಪ್ರಚಲಿತವಿದೆ.

ಜನಸಾಮಾನ್ಯರಿಗೆ ಸಲಹೆಗಳು : ಭಾರತದಲ್ಲಿ ನಾಯಿಹುಚ್ಚು ಸಾಕಷ್ಟು ಪ್ರಮಾಣದಲ್ಲಿದೆ. ಅವುಗಳ ಸಂಪರ್ಕಹೊಂದುವ ನಮ್ಮೆಲ್ಲರಿಗೆ ರೋಗತಗುಲುವ ಭಯವಿದೆ. ನಾಯಿ, ಮತ್ತು ಬೆಕ್ಕು ಇವುಗಳನ್ನು ಸಾಕಿದವರು. ಅವುಗಳೊಡನೆ ಆಟವಾಡಿದ ಮೇಲೆ ಕೈ, ಕಾಲು, ಮುಖವನ್ನು ಸೋಪು ಹಚ್ಚಿ ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಈ ರೋಗದ ವಿಷಾಣುಗಳು ಗಾಯಗೊಳ್ಳದ ಚರ್ಮದ ಮೂಲಕ ದೇಹವನ್ನು ಸೇರಲಾರವು. ಆದರೂ ಮೂಗು, ಕಣ್ಣು, ಬಾಯಿಲೋಳ್ಪರೆಯ ಮೂಲಕ ಒಳ ಸೇರಬಹುದಾದುದರಿಂದ ಈ ರೀತಿ ದೇಹದ ಭಾಗಗಳನ್ನು ಚೆನ್ನಾಗಿ ತೊಳೆಯುವುದರಿಂದ ದೇಹಕ್ಕೆ ಅಂಟಿಕೊಂಡ ವಿಷಾಣುಗಳು ದೂರವಾಗುವುವು.

ಒಂದುವೇಳೆ ನಾಯಿ ಯಾರನ್ನಾದರೂ ಕಚ್ಚಿದರೆ ಇಲ್ಲವೆ ಗಾಯಗೊಂಡ ಸ್ಥಳವನ್ನು ನೆಕ್ಕಿದರೂ ಸಹ ಸೂಕ್ತ ಉಪಾಯಗಳನ್ನು ಅನುಸರಿಸಬೇಕು. ಸಾಮಾನ್ಯವಾಗಿ ಸೋಂಕು ಪಡೆದ ನಾಯಿಯು ರೋಗಲಕ್ಷಣ ಪ್ರಾರಂಭವಾದ ಆರುದಿನಗಳಿಗಿಂತಲೂ ಹೆಚ್ಚು ಕಾಲ ಬದುಕಿ ಉಳಿಯಬಾರದು; ಅಲ್ಲದೆ ಹುಚ್ಚುನಾಯಿ ಗುಣಲಕ್ಷಣಗಳ ಪ್ರಕಟವಾಗುವ ನಾಲ್ಕು ದಿನಗಳ ಮುಂಚೆಯಿಂದಲೇ ರೋಗಾಣುಗಳು ಜೊಲ್ಲಿನಿಂದ ಗೋಚರಿಸುತ್ತವೆ. ಇಂತಹ ಪ್ರಸಂಗಗಳಲ್ಲಿ ಸಂಶಯಾಸ್ಪದ ನಾಯಿಯನ್ನು ಕಟ್ಟಿಹಾಕಿ 10 ದಿನಗಳು ವೀಕ್ಷಣೆಗೊಳಪಡಿಸಬೇಕು.

ನಾಯಿ ಕಚ್ಚಿದ ಅಥವಾ ನೆಕ್ಕಿದ ಭಾಗವನ್ನು ಸೋಪು ಹಚ್ಚಿ ಚೆನ್ನಾಗಿ ತೊಳೆಯಬೇಕು. ಗಾಯವನ್ನು ಸಂಪೂರ್ಣವಾಗಿ ತೆರೆದಿಟ್ಟಿರಬೇಕು. ಕಚ್ಚಿದ ಭಾಗದಿಂದ ನಂಜು ಒಳಸೇರದಂತೆ ಮಾಡಲು, ಆ ಪ್ರದೇಶಕ್ಕಿಂತಲೂ ಮೇಲೆ ಪಟ್ಟಿಯೊಂದನ್ನು ಮೇಲೆ ರಕ್ತ ಪ್ರವಹಿಸದಂತೆ ಬಿಗಿದು, ನಂಜು ಸೇರ್ಪಟ್ಟ ರಕ್ತ ಹೊರಕ್ಕೆ ಹರಿದುಹೋಗುವಂತೆ ಮಾಡಬೇಕು. ಅನಂತರ ಆ ಸ್ಥಳದಲ್ಲಿ, ಪರ್ಮಾಂಗನೇಟ್ ದ್ರಾವಕವನ್ನು ಸುರಿಯಬೇಕು. ಹಲ್ಲುಗುರುತಿನ ಗಾಯಗಳನ್ನು ಫೀನಾಲ್ ದ್ರಾವಕದಿಂದ ಸುಡಬೇಕು. ಈ ವಿಧಾನಗಳನ್ನೆಲ್ಲ ನಾಯಿಯಿಂದ ಕಚ್ಚಿಸಿಕೊಂಡ ಎರಡು ಘಂಟೆಗಳ ಅವಧಿಯಲ್ಲಿ ವ್ಯಕ್ತಿ ಬಂದರೆ ಮಾಡಲುಸಾಧ್ಯ. ಅನಂತರ ಒಂದುದಿನ ಬಿಟ್ಟು ಬಂದರೂ ಈ ವಿಧಾನಗಳನ್ನು ಅನುಸರಿಸಬಹುದು.

ನಾಯಿ ಅಥವಾ ವನ್ಯಪ್ರಾಣಿ ತಲೆ, ಮುಖ, ಕತ್ತು, ಈ ಭಾಗಗಳಲ್ಲಿ ಕಚ್ಚಿದ್ದರೆ ಅಥವಾ ಇತರ ಸ್ಥಳಗಳಲ್ಲಿ ತೀವ್ರ ಸ್ವರೂಪದ ಗಾಯಗಳಾಗಿದ್ದರೆ ಸೆಂಪಲ್ ಲಸಿಕೆಯನ್ನು ಕೂಡಲೇ ಕೊಡಬೇಕು. ಮೊಟ್ಟೆಯ ಬಿಳುಪಿನ ಮೇಲೆ ತಳಿಯೆಬ್ಬಿಸಿ, ಅನಂತರ ಶಕ್ತಿಗುಂದಿಸಿದ ವಿಷಾಣುಗಳನ್ನು ದಿನವೂ ಚರ್ಮದಡಿ ಹೊಕ್ಕಳ ಸುತ್ತ ಹದಿನಾಲ್ಕು ದಿನಗಳ ಪರ್ಯಂತರ ಕೊಡಬೇಕು. ಅನಂತರ ಒಂದು ಮತ್ತು ಎರಡು ವಾರ ಬಿಟ್ಟು ಈ ಲಸಿಕೆಯನ್ನು ನಿರೋಧಕ ಶಕ್ತಿಯ ಬೆಳವಣಿಗೆಗೆ ಚಾಲನೆ ನೀಡಲು ಎರಡುಬಾರಿ ಕೊಡಬೇಕು. ರೋಧಜನಕ ವಸ್ತುಗಳು ವಿಪುಲವಾಗಿರುವ ರಕ್ತರಸದ ರಸಿಕೆಯನ್ನು ಕಚ್ಚಿದ ಎರಡು ದಿನಗಳಲ್ಲೇ ಕೊಡಬೇಕು. ಈ ವಿಧಾನಗಳು ಕೆಲವೊಂದು ವ್ಯಕ್ತಿಗಳಲ್ಲಿ ವಿಪರೀತ ಪ್ರತಿಕ್ರಿಯೆಯನ್ನು ಉಂಟು ಮಾಡಬಹುದಾದ್ದರಿಂದ ನಿರ್ದಿಷ್ಟ ಸೂಚನೆಗಳಿಲ್ಲದೆ ಅವುಗಳನ್ನು ಕೊಡುವುದಿಲ್ಲ.

ಕಚ್ಚಿದ ಪ್ರಾಣಿ ಕಳೆದುಹೋದ ಸಂದರ್ಭದಲ್ಲಿ, ಇಲ್ಲವೆ ಆ ಪ್ರಾಣಿಯನ್ನು ಕೊಂದು ಹಾಕಿದ್ದರೆ ಅಥವಾ ಕಚ್ಚಿದ ಪ್ರಾಣಿ ವೀಕ್ಷಣಾಅವಧಿಯಲ್ಲಿ ಹುಚ್ಚುತನದ ಲಕ್ಷಣಗಳನ್ನು ತೋರ್ಪಡಿಸಿದರೆ ಇಲ್ಲವೇ ಅನೇಕ ವ್ಯಕ್ತಿಗಳನ್ನು ಅದು ಕಚ್ಚಿದರೆ ಅಥವಾ ವನ್ಯಪ್ರಾಣಿ ಕಚ್ಚಿದರೆ ಚುಚ್ಚುಲಸಿಕೆಯನ್ನು 14 ದಿನಗಳ ಕಾಲ ಕೊಡಬೇಕು.

ಒಂದುವೇಳೆ ಕಚ್ಚಿದ ಪ್ರಾಣಿ ಸಾಕಿದ್ದಾದರೆ ಅದನ್ನು ಹತ್ತುದಿನಗಳಕಾಲ ವೀಕ್ಷಣೆಗೊಳಪಡಿಸಬೇಕು. ಅದರಿಂದ ಆದ ಗಾಯಗಳು ತೀವ್ರ ಸ್ವರೂಪದ್ದಾಗಿದ್ದರೆ ಆ ಅವಧಿಯಲ್ಲಿ ದಿನಕ್ಕೊಂದರಂತೆ ಸೆಂಪಲ್ ಲಸಿಕೆಗಳನ್ನು ಕೊಡಬೇಕು. 10 ದಿನಗಳ ವೀಕ್ಷಣಾ ಅವಧಿಯಲ್ಲಿ ನಾಯಿ ಬದುಕುಳಿದರೆ ಲಸಿಕೆ ಕೊಡುಗೆಯನ್ನು ನಿಲ್ಲಿಸಬೇಕು.

ಅನೇಕಸಲ ಈ ರೋಗವು ಆಕಳು, ಎಮ್ಮೆ, ಆಡು, ಕುರಿ ಮುಂತಾದ ಹೈನು ಪ್ರಾಣಿಗಳಲ್ಲಿ ಕಾಣುವುದು. ಆಗ ರೋಗಾಣುಗಳು ಹಾಲಿನ ಮುಖಾಂತರ ವಿಸರ್ಜಿಸಲ್ಪಡಬಹುದು. ಇಂತಹ ಹಾಲನ್ನು ಸರಿಯಾಗಿ ಕಾಯಿಸದೆ ಬಳಸಿದರೆ ರೋಗಾಣುಗಳು ಲೋಳ್ಪರೆಯ ಮೂಲಕ ದೇಹವನ್ನು ಸೇರಿ ರೋಗ ಪ್ರಸಾರ ಮಾಡುವ ಸಾಧ್ಯತೆಯಿದೆ. ಇಂತಹ ಪ್ರಸಂಗಗಳ ಬಗ್ಗೆ ಹೆಚ್ಚು ಜಾಗರೂಕರಾಗಿರುವುದು ಅತ್ಯಗತ್ಯ.

ನಾಯಿ ಕಡಿತದಿಂದ ಕಚ್ಚಿಸಿಕೊಂಡವರೆಲ್ಲ ಸಾಯುವುದಿಲ್ಲ. ಆದರೆ ಒಮ್ಮೆ ಗುಣಲಕ್ಷಣಗಳು ಪ್ರಕಟವಾದಮೇಲೆ ಅದು ಸಾವಿನಲ್ಲಿ ಪರ್ಯವಸಾನಗೊಳ್ಳುವುದು. ಆದ್ದರಿಂದ ಕಚ್ಚಿಸಿಕೊಂಡ ವ್ಯಕ್ತಿ ತನ್ನ ದೇಹದಲ್ಲಿ ಈ ಭೀಕರ ವಿಷಾಣುವಿನ ಎದುರು ರೋಗನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುವತ್ತ ತನ್ನ ಗಮನ ಹರಿಸಿ ಯೋಗ್ಯ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.

2. ಬ್ರುಸೆಲ್ಲರೋಗ


ಈ ರೋಗವು ಶತಮಾನಗಳಿಂದ ಮಾನವನನ್ನು ಮತ್ತು ಸಾಕು ಪ್ರಾಣಿಗಳನ್ನು ಪೀಡಿಸುತ್ತ ಬಂದಿದೆ. ಬ್ರಿಟಿಷ್ ಸೇನಾಪಡೆ ಮಾಲ್ಟಾದ್ವೀಪದಲ್ಲಿದ್ದಾಗ ಅಲ್ಲಿನ ನಿವಾಸಿಗಳು ಮತ್ತು ಸೈನಿಕರು ವಿಶಿಷ್ಟ ರೀತಿಯ ಜ್ವರವೊಂದರಿಂದ ನರಳುತ್ತಿದ್ದರು. ಈ ದ್ವೀಪದಲ್ಲಿ ಮೊದಲು ತೋರಿಬಂದ ಈ ರೋಗಕ್ಕೆ ಮಾಲ್ಟಾಜ್ವರವೆಂದು ಕರೆಯಲಾಯಿತು.

ಈ ರೋಗದ ಕಾರಣವನ್ನು ಅಭ್ಯಸಿಸಲು ಬ್ರಿಟಿಷ್ ಸೇನಾವೈದ್ಯ ಡೇವಿಡ್ ಬ್ರೂಸ್ ಆ ದ್ವೀಪಕ್ಕೆ ಬಂದು ಕ್ರಿ.ಶ. 1886ರಲ್ಲಿ ಈ ರೋಗದಿಂದ ನರಳಿ ಮರಣ ಹೊಂದಿದ. ಸೈನಿಕನ ತೊರಳೆಯಲ್ಲಿ ರೋಗಾಣುವನ್ನು ಕಂಡುಹಿಡಿದು, ಮರುವರುಷ ಅವನ್ನು ಸಾರದ್ರವ್ಯದಲ್ಲಿ ಬೆಳೆದರು. ವಿಶೇಷ ರೀತಿಯ ಜ್ವರವೊಂದರ ಕಾರಣವನ್ನು ಪತ್ತೆ ಹಚ್ಚಿದ ಬ್ರೂಸರ ಸ್ಮರಣಾರ್ಥ ಮಾಲ್ಟಾ ಜ್ವರವನ್ನು 'ಬ್ರುಸೆಲ್ಲ ರೋಗ' ಎಂದು ಕರೆಯಲಾಯಿತು. ಅನಂತರದ ಸಂಶೋಧನೆಯು ಈ ರೋಗದ ವಿವಿಧ ರೂಪಗಳನ್ನು ತಿಳಿಯುವಲ್ಲಿ ಸಹಾಯಕವಾಯಿತು.

ರೋಗದ ಕಾರಣ : ಬ್ರುಸೆಲ್ಲ ರೋಗದ ಕಾರಣ ಬ್ರುಸೆಲ್ಲ ರೋಗಾಣು. ಚಿಕ್ಕ ತುಂಡಿನಂತೆ ಬಹುಸೂಕ್ಷ್ಮವಾಗಿರುವ ಈ ಏಕಾಣುಜೀವಿ ಗ್ರಾಮ್‌ವರ್ಣ ಲೇಪನ ಪಡೆಯುವುದಿಲ್ಲ. ಅದಕ್ಕೆ ಚಲನಶಕ್ತಿಯಿಲ್ಲ; ಶಾಖದ ಪ್ರಭಾವಕ್ಕೊಳಪಟ್ಟಾಗ ಜೀವಾಣು ಒಂದೆರಡು ನಿಮಿಷಗಳಲ್ಲಿ ಮರಣ ಹೊಂದುವುದಾದರೂ, ತಂಪು ವಾತಾವರಣದಲ್ಲಿ ಬಹುದಿನಗಳವರೆಗೆ ಜೀವಂತವಾಗಿರಬಲ್ಲದು. ಸಾರದ್ರವ್ಯವಲ್ಲಿ, ಜೀವಾಣು ತಳಿ ತುಂಬ ನಿಧಾನವಾಗಿ ಬೆಳವಣಿಗೆ ಹೊಂದುತ್ತದೆ.

ಈ ಜೀವಾಣು ಮೂರು ತೆರನಾದ ಪ್ರಭೇದಗಳನ್ನು ಹೊಂದಿದ್ದು ಅವು ಮೂರು ಬೇರೆ ಬೇರೆ ತೆರನಾದ ಪ್ರಾಣಿಗಳನ್ನು ಹೆಚ್ಚಾಗಿ ಪೀಡಿಸುವುದಾಗಿ ತೋರಿದೆ. 'ಬ್ರುಸೆಲ್ಲ ಮೆಲಿಟೆನ್ಸಿಸ್' ಆಡು, ಕುರಿಗಳಲ್ಲಿ; 'ಬ್ರುಸೆಲ್ಲ ಅಬಾರ್ಟಸ್ (ಬೋವಿಸ್)' ದನಗಳಲ್ಲಿ; 'ಬ್ರುಸೆಲ್ಲ ಅಬಾರ್ಟಸ್ ಸೂಯಿಸ್ ಹಂದಿಗಳಲ್ಲಿ' ರೋಗವನ್ನುಂಟುಮಾಡುತ್ತವೆ. ಜೀವಾಣು ಪ್ರಭೇದಗಳು ಒಂದು ಗುಂಪಿನ ಪ್ರಾಣಿಗಳಲ್ಲಿ ತೀವ್ರಸ್ವರೂಪದ ರೋಗವನ್ನುಂಟುಮಾಡಿದರೂ, ಇನ್ನಿತರ ಪ್ರಾಣಿಗಳಲ್ಲೂ ರೋಗವನ್ನುಂಟುಮಾಡುವ ಶಕ್ತಿಯನ್ನು ಪಡೆದಿವೆ. ಮಾನವರಲ್ಲಿ ಮೂರು ಪ್ರಭೇದಗಳು ರೋಗವನ್ನು ಉತ್ಪಾದಿಸಬಲ್ಲವು. ಇತ್ತೀಚಿನ ವರದಿಗಳ ಪ್ರಕಾರ ಮೇಲೆ ವಿವರಿಸಿದ ಮೂರು ಪ್ರಭೇದಗಳಲ್ಲದೆ

'ಬ್ರುಸೆಲ್ಲ ಕ್ಯಾನಿಸ್' (ನಾಯಿ ಬ್ರುಸೆಲ್ಲ) ಎಂಬುದೂ ಸಹ ಮಾನವರಿಗೆ ಸೋಂಕುಕಾರಿ ಎಂದು ಕಂಡುಬಂದಿದೆ. ಮೂರು ಜೀವಾಣು ಪ್ರಭೇದಗಳನ್ನು, ಅವು ನೋಡಲು ಒಂದೇತೆರನಾಗಿ ಗೋಚರಿಸಿದರೂ, ಅವುಗಳು ಬೆಳವಣಿಗೆಯ ಕಾಲದಲ್ಲಿ ತೋರ್ಪಡಿಸುವ ಗುಣಲಕ್ಷಣವನ್ನವಲಂಬಿಸಿ ವಿಂಗಡಿಸಲಾಗುತ್ತದೆ.



ಚಿತ್ರ 2. ಬ್ರುಸೆಲ್ಲರೋಗ ಪ್ರಸಾರದ ರೇಖಾಚಿತ್ರ

ಪ್ರಾಣಿಗಳಲ್ಲಿ ರೋಗ : ಬ್ರುಸೆಲ್ಲ ರೋಗವು ಮುಖ್ಯವಾಗಿ ಹಸು, ಕುರಿ, ಮೇಕೆ ಮತ್ತು ಹಂದಿಗಳಲ್ಲಿ ತೋರಿಬರುವ ರೋಗ. ಹಾಫ್‌ಕಿನ್ ಸಂಶೋಧನಾ

ಕೇಂದ್ರ(ಮುಂಬಯಿ)ದಲ್ಲಿರುವ ಡಾ॥ ಸಂತರ ಸಂಶೋಧನೆಯ ಫಲವಾಗಿ ನಾಯಿಗಳೂ ಸಹ ಈ ರೋಗದಿಂದ ಬಳಲುತ್ತವೆಂಬುದು ತಿಳಿದುಬಂದಿದೆ. ರೋಗಿಷ್ಠ ಪ್ರಾಣಿಯಿಂದ ಇತರ ಪ್ರಾಣಿಗಳು ಮತ್ತು ಮನುಷ್ಯರು ರೋಗವನ್ನು ಪಡೆಯುತ್ತಾರೆ. ಈ ಬೇನೆ ಯಿಂದ ಬಳಲುತ್ತಿರುವ ಪ್ರಾಣಿಗಳು ಯಾವುದೇ ಗುಣಲಕ್ಷಣಗಳನ್ನು ತೋರ್ಪಡಿಸದೆ ಇರಬಹುದು. ಇಲ್ಲದೆ ಜ್ವರ, ಕೆಚ್ಚಲಲ್ಲಿ ನೋವು, ಕೀಲುರಿತ ತೋರ್ಪಡಿಸಬಹುದು. ರೋಗಿಷ್ಠ ಪ್ರಾಣಿಗಳು ಕಡಮೆ ಹಾಲು ಕರೆಯಬಹುದು; ಇಲ್ಲವೆ ಪದೇ ಪದೇ ಕಂದ ಹಾಕಬಹುದು.

ರೋಗಿಷ್ಠ ಪ್ರಾಣಿಗಳು ರೋಗಾಣುಗಳನ್ನು ಹಲವಾರು ವಿಧಗಳಲ್ಲಿ ವಿಸರ್ಜಿಸು ತ್ತವೆ. ರೋಗಾಣುಗಳು ಹಾಲಿನ ಮುಖಾಂತರ, ಕಂದಹಾಕುವಾಗ ಯೋನಿಸ್ರವಿಕೆ ಹಾಗೂ ಮಾಸದಲ್ಲಿ ವಿಸರ್ಜನೆಗೊಳ್ಳುತ್ತವೆ

ಮನುಷ್ಯರಲ್ಲಿ ರೋಗ ಹರಡುವ ಬಗೆ: ಬ್ರುಸೆಲ್ಲ ಬೇನೆಯು ಮನುಷ್ಯ ರಲ್ಲಿ ಹರಡುವ ವಿಧಾನ ಪ್ರಾಣಿಗಳಲ್ಲಿ ಉಂಟಾಗುವ ರೋಗ ಮತ್ತು ಸ್ಥಳೀಯ ಸನ್ನಿ ವೇಶವನ್ನವಲಂಬಿಸಿದೆ. ಹಿಂದೆ ಹಾಲನ್ನು ಕಾಯಿಸದೆ ಕುಡಿಯುವ ರೂಢಿಯಿದ್ದಾಗ ಹಾಲು ರೋಗವನ್ನು ಹರಡುವ ಮುಖ್ಯ ವಾಹನವಾಗಿದ್ದಿತು. ಹಾಲನ್ನು ಕಾಯಿಸಿ ಕುಡಿಯುವುದು ಸಾರ್ವತ್ರಿಕವಾಗಿರುವುದರಿಂದ ಆ ರೀತಿಯಾಗಿ ರೋಗ ಪ್ರಸಾರವಾಗು ವುದು ಕಡಮೆಯಾಗುತ್ತಿದೆ. ಆದರೂ ಸೋಂಕು ಸೇರಿದ ಹಾಲಿನ ತಯಾರಿಕೆಗಳು ರೋಗಿಷ್ಠ ಪ್ರಾಣಿಗಳಿಂದ ದೊರಕಿಸಿದ ಮಾಂಸ ರೋಗವನ್ನು ಹರಡುತ್ತವೆ. ರೋಗಿಷ್ಠ ಪ್ರಾಣಿಗಳು ಸ್ನಾಯು, ಈಲಿ, ತೊರಳೆ ಮತ್ತು ಮಾಂಸದ ತಿರುಳಿನಲ್ಲಿ ರೋಗಾಣು ಗಳು ವಿಪುಲವಾಗಿರುವುದರಿಂದ, ಕಟುಕರಲ್ಲಿ ಚರ್ಮದಲ್ಲಿನ ಗಾಯಗಳ ಮೂಲಕ ರೋಗಾಣುಗಳು ದೇಹದೊಳಗೆ ಸೇರಬಹುದು. ದನಗಳ ಸೂಲಗಿತ್ತಿತನ ಮಾಡು ವವರಲ್ಲಿ, ರೋಗಿಷ್ಠ ಪ್ರಾಣಿಗಳು ಹಾಗೂ ಅವುಗಳು ವಿಸರ್ಜಿಸುವ ವಸ್ತುಗಳ ಸಂಪರ್ಕದಲ್ಲಿ ಬರುವವರಲ್ಲಿ, ಹೈನುಗಾರಿಕೆಯ ಉದ್ಯೋಗದಲ್ಲಿರುವವರಲ್ಲಿ ಈ ರೋಗ ದೇಹವನ್ನು ಸೇರುವ ಪ್ರಸಂಗಗಳು ವಿಪುಲವಾಗಿವೆ.

ಈ ಜೀವಾಣುಗಳು ತುಟಿ, ಮೂಗಿನ ಲೋಳ್ಪರೆಯ ಬಿರುಕುಗಳ ಮೂಲಕ ವಾಗಿಯೂ ದೇಹವನ್ನು ಪ್ರವೇಶಿಸುತ್ತವೆ. ರೋಗಿಷ್ಠ ಪ್ರಾಣಿಗಳು ಕಂದ ಹಾಕಿದಾಗ ಅಥವಾ ಮರಿ ಹಾಕಿದಾಗ ಹೊರಬರುವ ಮಾಸ, ಉಲ್ಬದ್ರವದಲ್ಲಿ ರೋಗಾಣುಗಳು ಅಸಂಖ್ಯ ಸಂಖ್ಯೆಯಲ್ಲಿರುತ್ತವೆ ಇಂಥ ಪದಾರ್ಥಗಳು ದಕ್ಕೆಯಲ್ಲಿ ಬಿದ್ದಾಗ ಅಲ್ಲಿ ನೆಲ ಕಲ್ಮಶಗೊಳ್ಳುವುದು. ಅಲ್ಲಿ ರೋಗಾಣುಗಳು ಅನೇಕ ದಿನಗಳ ಪರ್ಯಂತ ಜೀವಿಸಿರಬಲ್ಲವು. ಮುಂದೆ ಆ ಪ್ರದೇಶವನ್ನು ಕಸಗುಡಿಸುವಾಗ, ರೋಗಾಣುಗಳು

ಅಲ್ಲಿನ ಧೂಳ್ಕಣದೊಡನೆ ಮೂಗನ್ನು ಸೇರಿ ಅಲ್ಲಿನ ಲೋಳ್ಪರೆಯ ಮೂಲಕ ಒಳ ಪ್ರವೇಶಿಸುತ್ತವೆ.

ರೋಗದ ಬೆಳವಣಿಗೆ : ಆಹಾರಪಾನೀಯಗಳ ಮೂಲಕವಾಗಿ ಪಚನಾಂಗವನ್ನು ಸೇರುವ ರೋಗಾಣುಗಳು ಕರುಳನ್ನು ಸೇರಿ ಅದರ ಭಿತ್ತಿಯಲ್ಲಿ ಉರಿಯೂತವನ್ನು ಉಂಟುಮಾಡುವುವು. ಬೇಗನೆ ಅಲ್ಲಿನ ಹಾಲ್ರಸಗ್ರಂಥಿಗಳನ್ನು ತಲುಪಿ ರೋಗಾಣುಗಳು ಅಗಣಿತ ಸಂಖ್ಯೆಯಲ್ಲಿ ಬೆಳವಣಿಗೆಯನ್ನು ಹೊಂದುತ್ತವೆ; ರಕ್ತಪ್ರವಾಹದ ಮೂಲಕ ದೇಹಾದ್ಯಂತ ಪ್ರಸರಿಸಿ ಹಾಲ್ರಸ ಗ್ರಂಥಿಗಳು ಮೂಳೆಯ ತಿರುಳು, ಈಲಿ ಮತ್ತು ತೊರಳೆಯಲ್ಲಿ ತಮ್ಮ ಸಂಖ್ಯಾಭಿವೃದ್ಧಿಯನ್ನು ಮಾಡುವುದಲ್ಲದೆ ರಕ್ತವನ್ನು ಪುನರಪಿ ಪ್ರವೇಶಿಸುತ್ತ ದೇಹಾದ್ಯಂತ ಪ್ರಸರಿಸುತ್ತವೆ. ಒಬ್ಬೊಬ್ಬರಲ್ಲಿ ಒಂದೊಂದು ಪಿಂಡದಲ್ಲಿ ನೆಲೆಯೂರಿ ನಿಂತು ರೋಗಲಕ್ಷಣಗಳನ್ನು ಪ್ರಕಟಿಸುತ್ತವೆ. ನವಿರ್ಜಾಲೋಳ್ಪರೆಯ ಕಣಗಳು ವಿಪುಲ ಸಂಖ್ಯೆಯಲ್ಲಿ ಬೆಳೆದು ಊತಕಗಳಲ್ಲಿ ಗಂಟು ಕಟ್ಟುತ್ತವೆ.

ರೋಗಲಕ್ಷಣಗಳು : ರೋಗಾಣುಗಳು ದೇಹವನ್ನು ಸೇರಿದ ವಾರಾಂತ್ಯದಲ್ಲಿ ರೋಗಿಯ ದೈಹಿಕ ಅಸ್ವಸ್ಥತೆಯ ಲಕ್ಷಣಗಳಾಗಿ ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ತಲೆನೋವು, ಸಿಡಿಮಿಡಿಗೊಳ್ಳುವಿಕೆ ಇವುಗಳನ್ನು ತೋರಿಸುತ್ತ ರೋಗ ನಿಧಾನವಾಗಿ ಬೆಳವಣಿಗೆ ಹೊಂದುವುದು. ಕೆಲವರ ರೋಗವು ಉಗ್ರರೂಪಧರಿಸಿ ಏಕಾಏಕಿ ಜ್ವರ, ತಲೆನೋವು ಮೈಕೈನೋವು ಮೊದಲಾದುವನ್ನು ತೋರ್ಪಡಿಸಿ ರೋಗಿಯು ಕೂಡಲೇ ಹಾಸಿಗೆ ಹಿಡಿಯುವಂತೆ ಮಾಡುತ್ತದೆ. ನಿಧಾನವಾಗಿ ರೋಗಲಕ್ಷಣ ತೋರ್ಪಡಿಸುವ ವ್ಯಕ್ತಿಯಲ್ಲಿ ಜ್ವರದ ಬಾಧೆ ಕಂಡುಬರುತ್ತದೆ. ಜ್ವರದ ವಿನ್ಯಾಸ ಸತತವಾಗಿ ಒಂದೇ ಮಟ್ಟದಲ್ಲಿರಬಹುದು. ಇಲ್ಲವೆ ಬಂದು ಹೋಗಿಮಾಡಬಹುದು. ಕೆಲವರಲ್ಲಿ ನಾಲ್ಕಾರು ದಿನ ಜ್ವರ ಬಂದು ಅನಂತರ ಮಾಯವಾಗಿ ಮತ್ತೆ ತಲೆದೋರಬಹುದು. ಹೀಗೆ ಅನಿರ್ದಿಷ್ಟ ರೀತಿಯಲ್ಲಿ ಜ್ವರ ಅಲೆಯಲೆಯಂತೆ ಬರುತ್ತಿದ್ದ ಕಾರಣ ರೋಗವನ್ನು 'ಬಳಕುವ ಜ್ವರ' ಎಂದೂ ಕರೆಯಲಾಗುತ್ತಿದ್ದಿತು. ರಕ್ತದಲ್ಲಿ ರೋಗಾಣುಗಳು ಇದ್ದ ಕಾಲದಲ್ಲಿ ಜ್ವರ ಸಾಮಾನ್ಯವಾಗಿ ತೋರಿಬರುತ್ತದೆ. ರೋಗಾಣುಗಳು ರಕ್ತದಲ್ಲಿ ಕಡಮೆಯಾಗಿ, ಇತರ ಅಂಶಗಳನ್ನು ಸೇರಿದಾಗ ಜ್ವರವೂ ಕಡಮೆಯಾಗುತ್ತದೆ. ಅನೇಕರಲ್ಲಿ ಜ್ವರ ಒಂದುವಾರದಿಂದ ಬರುತ್ತಿದ್ದರೂ ದೈಹಿಕ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ತೋರಿಬರದಿರಬಹುದು. ಅವರು ಉದ್ಯೋಗದಲ್ಲಿ ಇನ್ನೂ ನಿರತರಾಗಿರಬಹುದು. ರೋಗ ಉಲ್ಬಣಿಸಿದ ಮೇಲೆ ಹಾಸಿಗೆ ಹಿಡಿಯುತ್ತಾರೆ.

ರೋಗದ ಇತರ ಲಕ್ಷಣಗಳಲ್ಲಿ ಕೀಲುನೋವು ಮಹತ್ವದ್ದು. ಸೊಂಟ ನೋವು, ಕತ್ತಿನ ಸ್ನಾಯುಗಳಲ್ಲಿ ನೋವು ತೋರಿಬರುತ್ತದೆ. ಚರ್ಮ ಬಿಳಿಚಿಕೊಳ್ಳುತ್ತದೆ; ವಿಷ

ರೀತ ಬೆವರು ತೋರಿಬರುತ್ತದೆ. ಅನೇಕರು ಮಂಡಿ, ಭುಜ, ಮೊಳಕೈ ಮೊದಲಾದ ಕೀಲುಗಳಲ್ಲಿ ನೋವನ್ನು ಹೊಂದುತ್ತಾರೆ. ಹಾಲ್ರಸ ಗ್ರಂಥಿಗಳು ಉರಿತದಿಂದ ದೊಡ್ಡದಾಗಿ ಗೆಜ್ಜೆ, ಬಗಲಿನಲ್ಲಿ ಎದ್ದು ತೋರುತ್ತವೆ. ಈಲಿ ಮತ್ತು ತೊರಳೆ ದೊಡ ದಾಗುತ್ತವೆ. ಚರ್ಮದಡಿ ಸಣ್ಣ ಸಣ್ಣ ಗಂಟುಗಳು ತೋರಿಬರಬಹುದು. ಹೃದಯದ ಕಾರ್ಯದಲ್ಲಿ ವ್ಯತ್ಯಯ, ನರಮಿಡಿತ, ಮಿದುಳ ಉರಿತ, ಈ ಲಕ್ಷಣಗಳು, ರಕ್ತಹೀನತೆ ತೋರಿಬರಬಹುದು.

ರೋಗ ಉಗ್ರತೆಯು ಮೂರು ವಾರಗಳಿಂದ ಮೂರು ತಿಂಗಳವರೆಗೆ ಉಳಿಯ ಬಹುದು. ಕೆಲವರಲ್ಲಿ ಜ್ವರ ಇಳಿದು ಪ್ರಕೃತಿ ಸುಧಾರಿಸುತ್ತದೆ; ಇನ್ನು ಕೆಲವರಲ್ಲಿ ರೋಗ ಮರುಕಳಿಸಬಹುದು. ಕೆಲವರು ರೋಗದಿಂದ ಹಿಂಡಿ ಹಿಪ್ಪೆಯಾಗುತ್ತಾರೆ.

ರೋಗ ಬಂದಾಗ ರಕ್ತದಲ್ಲಿ ಬಿಳ್ಕಣಗಳ ಸಂಖ್ಯೆ ಇಳಿಮುಖವಾಗುವುದು ; ರಕ್ತ ತಳಸೇರುವಿಕೆಯು ವೇಗಗೊಳ್ಳುತ್ತದೆ. ಕಬ್ಬಿಣ ಕೊರತೆಯು ರಕ್ತಹೀನತೆ ಮತ್ತು ಇಳುವರಿಗೊಂಡ ಕಿರುಫಲಕಗಳ ಸಂಖ್ಯೆ ರೋಗ ಬಂದಾಗ್ಗೆ ತೋರಿಬರುವ ಇತರ ವ್ಯತ್ಯಯಗಳು.

ರೋಗನಿದಾನ: ಅಲೆಯಂತಹ ಜ್ವರ, ಚಳಿ, ಪದೇಪದೇ ಮೈ ಬೆವರುವಿಕೆ, ಈಲಿ, ತೊರಳೆಯ ಗಾತ್ರಹೆಚ್ಚಳ, ಬಗಲು, ಹಿಂದಲೆ, ಮೊಳಕೈ ಬಳಿಯ ಹಾಲ್ರಸ ಗ್ರಂಥಿಗಳ ಗಂಟು, ಕೀಲುನೋವು ರೋಗದ ಇರುವನ್ನು ನಿರ್ಧರಿಸಲು ಸಹಾಯಕ. ಹಲವಾರು ರೂಪಗಳಲ್ಲಿ ರೋಗವು ಪ್ರಕಟಗೊಳ್ಳಬಹುದಾದ್ದರಿಂದ ಅನೇಕಬಾರಿ ರೋಗ ನಿದಾನ ಸಮಸ್ಯಾತ್ಮಕವಾಗಬಲ್ಲದು. ಹೈನುಗಾರಿಕೆಯ ಉದ್ಯೋಗಗಳಲ್ಲಿ ತೊಡಗಿರು ವವರಲ್ಲಿ ಈ ರೋಗವು ಇತರರಿಗಿಂತ ಹೆಚ್ಚಾಗಿ ತೋರಿಬರಬಹುದಾದುದರಿಂದ ಮತ್ತು ಬ್ರುಸೆಲ್ಲ ರೋಗವು ಸಾಮಾನ್ಯವಾಗಿ ಗೋಚರಿಸುವ ಪ್ರದೇಶದಿಂದ ವ್ಯಕ್ತಿ ಬರುತ್ತಿದ್ದರೆ ಆ ಅಂಶಗಳು ರೋಗನಿದಾನಕ್ಕೆ ಪರೋಕ್ಷ ಪುರಾವೆಗಳನ್ನೊದಗಿಸುವುವು.

ಬ್ರುಸೆಲ್ಲ ರೋಗಲಕ್ಷಣಗಳು ವಿಷಮಜ್ವರ, ಮಲೇರಿಯಾ, ಕ್ಷಯ ಹಾಗೂ ಶೀತ ಸ್ರಾವ ಜ್ವರಗಳನ್ನು ಹೋಲುವುದರಿಂದ ಆ ರೋಗಗಳ ಲಕ್ಷಣಗಳೇನಾದರೂ ರೋಗಿ ಯಲ್ಲಿ ತೋರಿಬರುತ್ತವೇನೋ ಎಂಬುದನ್ನು ಗಮನದಲ್ಲಿರಿಸಬೇಕು. ರೋಗಿಯಲ್ಲಿ ಬ್ರುಸೆಲ್ಲ ರೋಗ ಬೆಳವಣಿಗೆ ಹೊಂದಿದಾಗ, ಅತನ ರಕ್ತರಸದಲ್ಲಿ ಬ್ರುಸೆಲ್ಲ ರೋಧಕಗಳ ಇರುವಿಕೆಯನ್ನು ಕಂಡುಕೊಳ್ಳಬಹುದು. ರೋಗಿಯ ಚರ್ಮದ ಮೇಲೆ ಬ್ರುಸೆಲ್ಲಿನ್ ವಸ್ತು ಚುಚ್ಚುಗೆ, ರಕ್ತದಲ್ಲಿನ ರೋಗಾಣುಗಳು ತಳಿಯೆಬ್ಬಿಸುವಿಕೆ ಇತರ ಪ್ರಯೋಗ ಶಾಲೆಯ ಪರೀಕ್ಷೆಗಳು.

ಚಿಕಿತ್ಸೆ : ರೋಗನಿದಾನ, ಚಿಕಿತ್ಸೆಯಿಂದ ರೋಗದ ಮುನ್ನೋಟ ಸಮರ್ಪಕ. ಈ ರೋಗಕ್ಕೆ ಜೀವಾಣುರೋಧಕಗಳು ಸೂಕ್ತ ಔಷಧಗಳಾಗಿವೆ. ಸ್ಟ್ರೆಪ್ಟೋಮೈಸಿನ್ ಮತ್ತು ಟೆಟ್ರಾಸೈಕ್ಲಿನ್, ಸ್ಟ್ರೆಪ್ಟೋಮೈಸಿನ್ ಮತ್ತು ಕ್ಲೋರಾಂಫೆನಿಕಾಲ್ ಅಥವಾ ಸ್ಟ್ರೆಪ್ಟೋಮೈಸಿನ್ ಮತ್ತು ಸಲ್ಫಾಡೈಯಾಜಿನ್ ಜೋಡಿಗಳು ಚಿಕಿತ್ಸೆಯಲ್ಲಿ ಉತ್ತಮವೆಂದು ಕಂಡುಬಂದಿದೆ. ಸ್ಟ್ರೆಪ್ಟೋಮೈಸಿನ್ ದಿನಕ್ಕೆ ಒಂದು ಗ್ರಾಂನಂತೆ ಚುಚ್ಚುಗೆಯ ರೂಪದಲ್ಲಿ, ಟೆಟ್ರಾಸೈಕ್ಲಿನ್ ಅಥವಾ ಕ್ಲೋರಾಂಫೆನಿಕಾಲ್ ಒಂದು ಒಂದೂವರೆ ಗ್ರಾಂನಷ್ಟು, ಇಲ್ಲವೆ ಸಲ್ಫಾಡೈಯಾಜಿನ್ ಮೂರು ನಾಲ್ಕು ಗ್ರಾಂ ಪ್ರಮಾಣದಲ್ಲಿ ಕೊಡಬೇಕು. ಈ ಚಿಕಿತ್ಸೆಯನ್ನು ಮೂರುವಾರಗಳ ಪರ್ಯಂತ ಮಾಡುವುದರಿಂದ ರೋಗಿಗಳು ಸಂಪೂರ್ಣವಾಗಿ ಗುಣಮುಖರಾಗುವರು.

ಪ್ರತಿಬಂಧ : ಬ್ರುಸೆಲ್ಲ ರೋಗವು ಮನುಷ್ಯರಿಗೆ ಹಬ್ಬದಂತೆ ಮಾಡಬೇಕಾದರೆ ಈ ರೋಗವನ್ನು ಪ್ರಾಣಿಗಳಲ್ಲಿ ನಿರ್ಮೂಲನೆ ಮಾಡಬೇಕು. ಬೇರೆ ಬೇರೆ ದೇಶಗಳಲ್ಲಿ ವಿವಿಧ ವಿಧಾನಗಳನ್ನು ಆ ಕಾರ್ಯದಲ್ಲಿ ಅಳವಡಿಸಿಕೊಂಡಿದ್ದಾರೆ. ರೋಗಿಷ್ಠ ಪ್ರಾಣಿಗಳನ್ನು ಕೊಂದು ಹಾಕುವುದು, ನಿರೋಗಿ ಪ್ರಾಣಿಗಳಿಗೆ ರೋಗಬಾರದಂತೆ ಚುಚ್ಚು ಲಸಿಕೆ ಕೊಡುವುದು ರೋಗದ ಹರಡಿಕೆಯನ್ನು ತಡೆಗಟ್ಟುವಲ್ಲಿ ಬಹುಮುಖ್ಯ.

ಹಾಲು ಮತ್ತು ಹೈನದ ಪದಾರ್ಥಗಳ ಮೂಲದಿಂದ ರೋಗಹರಡಿಕೆಯನ್ನು ತಡೆಗಟ್ಟುವಲ್ಲಿ ಕುದಿಸಿದ ಅಥವಾ ಸಂಸ್ಕರಿಸಿದ ಹಾಲಿನ ಬಳಕೆ ತುಂಬ ಉಪಯುಕ್ತ. ಸೋಂಕು ಸೇರ್ಪಡೆಯಾದ ಮಾಂಸ ಭೋಜನದಿಂದ ಬರುಬಹುದಾದ ರೋಗವನ್ನು ಸರಿಯಾಗಿ ಬೇಯಿಸಿದ ಮಾಂಸವನ್ನು ತೆಗೆದುಕೊಳ್ಳುವುದರಿಂದರೋಗ ಬಾರದಂತೆ ಮಾಡಬಹುದು. ದನಗಳ ಸೂಲಗಿತ್ತಿಯ ಕಾರ್ಯನಿರ್ವಹಿಸುವವರಲ್ಲಿ ಸಂಪರ್ಕದಿಂದ ರೋಗ ಲಭಿಸಬಹುದಾದುದರಿಂದ ಅವರು ಕೈಚೀಲಗಳನ್ನು ಹಾಕಿಕೊಳ್ಳಬೇಕು. ಅದೇರೀತಿ ಕಸಾಯಿಖಾನೆ ಕೆಲಸಗಾರರು ಮಾಂಸವನ್ನು ಮುಟ್ಟುವಾಗ ಕೈಚೀಲಗಳನ್ನು ಧರಿಸಬೇಕು.

3. ನೆರಡಿಬೇನೆ

ತೀವ್ರ ತೆರನಾದ ಸಾಂಕ್ರಾಮಿಕ ನೆರಡಿಬೇನೆಯು ಚರ್ಮದಲ್ಲಿ ಕುರುಗಳ ರೂಪದಲ್ಲಿ ಪ್ರಕಟಿಸಿಕೊಳ್ಳುತ್ತದಲ್ಲದೆ, ವಿಷಾರಿ ಗುಣಲಕ್ಷಣಗಳನ್ನು ತೋರ್ಪಡಿಸಬಹುದು. ಈ ಸೋಂಕು ಶ್ವಾಸಕೋಶ ಮತ್ತು ಕರುಳಿನಲ್ಲೂ ಸಹ ಗುಣಲಕ್ಷಣಗಳನ್ನು ಪ್ರಕಟಿಸುತ್ತದೆ.

ಇಂಗ್ಲೀಷಿನಲ್ಲಿ 'ಅಂಥ್ರಾಕ್ಸ್' ಎಂಬ ಹೆಸರಿನಿಂದ ಕರೆಯುವ ಈ ರೋಗಕ್ಕೆ 'ಇದ್ದಿಲುಬೇನೆ' ಎಂಬ ಅರ್ಥವಿದೆ. ರೋಗದಲ್ಲಿ ತೋರಿಬರುವ ಹುಣ್ಣಿನ ಹಕ್ಕಳೆ ಕಪ್ಪಗೆ ಇದ್ದಿಲಿನಂತೆ ಇರುವುದೇ ಅದಕ್ಕೆ ಕಾರಣ. ಸಸ್ಯಾಹಾರಿಪ್ರಾಣಿಗಳಾದ ಕುರಿ, ಆಡು, ದನ, ಕುದುರೆ, ಇವುಗಳು ರೋಗಕ್ಕೆ ತುತ್ತಾಗುತ್ತವೆ. ಆಕಸ್ಮಿಕವಾಗಿ ರೋಗವು ಮಾನವರಿಗೂ ಅಂಟಬಹುದಾಗಿದೆ.

ಅನೇಕ ವರುಷಗಳಿಂದ ಪ್ರಾಣಿ ಹಾಗೂ ಮಾನವರನ್ನು ಪೀಡಿಸುತ್ತ ಬಂದಿರುವ ಈ ರೋಗವು ಜೀವಾಣುವೊಂದರಿಂದ ಉಂಟಾಗುತ್ತದೆಂಬುವನ್ನು ಕ್ರಿ.ಶ. 1849ರಲ್ಲಿ ಕಂಡು ಹಿಡಿಯಲ್ಪಟ್ಟಿತು. ಸೋಂಕುರೋಗಗಳು ಜೀವಾಣುಗಳಿಂದ ಬರುತ್ತದೆಂಬುದರ ಪ್ರಥಮ ಉದಾಹರಣೆ ಅದಾಗಿದೆ. ಜರ್ಮನಿಯ ರಾಬರ್ಟ್‌ಕಾಕ್ ಕ್ರಿ. ಶ. 1877ರಲ್ಲಿ ನೆರಡಿರೋಗಾಣುವನ್ನು ಖಚಿತವಾಗಿ ತೋರಿಸಿಕೊಟ್ಟರಲ್ಲದೆ, ಅದನ್ನು ಕೃತ್ರಿಮಸಾರ ದ್ರವ್ಯದಲ್ಲಿ ಬೆಳೆದರು. ಹಾಗೆ ತಳಿಯೆಬ್ಬಿಸಿದ ರೋಗಾಣುಗಳನ್ನು ಕೆಲವು ಪ್ರಾಣಿಗಳಲ್ಲಿ (ಮೊಲ) ಚುಚ್ಚಿ ಅವುಗಳಲ್ಲಿ ನೆರಡಿಬೇನೆಯನ್ನು ಉಂಟುಮಾಡಿದರು. ಈ ಪ್ರಯೋಗವು ರೋಗವನ್ನುಂಟುಮಾಡುವುದರಲ್ಲಿ ಜೀವಾಣುಗಳ ವಿಶಿಷ್ಟ ಪಾತ್ರವನ್ನು ತಿಳಿಯುವಲ್ಲಿ ಬಹುದೊಡ್ಡ ಮೈಲಿಗಲ್ಲಾಗಿದೆ. ದುಷ್ಟ ಶಕ್ತಿಗಳ ಪ್ರಭಾವದಿಂದ ರೋಗ ಬರುತ್ತದೆಂಬ (ತಿಳಿವಳಿಕೆಯನ್ನು) ಮೂಢ ನಂಬಿಕೆಯನ್ನು ಹೊಡೆದಟ್ಟುವಲ್ಲಿ ಈ ಪ್ರಯೋಗವು ಯಶಸ್ವಿಯಾಯಿತು.

ಜಗತ್ತಿನಾದ್ಯಂತ ಹರಡಿದ್ದ ನೆರಡಿರೋಗದ ಹಾವಳಿ ಈಗ ಬಹಳಷ್ಟು ಕಡಿಮೆಯಾಗಿದ್ದರೂ, ನಮ್ಮ ರಾಜ್ಯದಲ್ಲಿ ಆಗಾಗ್ಗೆ ಅಲ್ಲಲ್ಲಿ (ಮಲೆನಾಡು ಮತ್ತಿತರಕಡೆ) ಗೋಚರಿಸಿದ ಉದಾಹರಣೆಗಳಿವೆ.

ರೋಗಾಣು : ನೆರಡಿಬೇನೆಯ ಕಾರಣ ಚಲನಶಕ್ತಿಯಿಲ್ಲದ, ಗ್ರಾಮ್‌ವರ್ಣ ಪಡೆಯುವ ಏಕಾಣುಜೀವಿ ಬಾಸಿಲ್ಲಸ್ ಅಂಥ್ರಾಸಿಸ್. ಅದು ದೊಡ್ಡ ಗಾತ್ರಹೊಂದಿದ

ಜೀವಾಣುಗಳಲ್ಲೊಂದಾಗಿದ್ದು 5 ರಿಂದ 10 ಮೈಕ್ರಾನ್ ಉದ್ದ ಒಂದು ಮೈಕ್ರಾನ್ ದಪ್ಪನಾಗಿದೆ. ಸಾರದ್ರವ್ಯದಲ್ಲಿ ಬೆಳೆದಾಗ ಅವು ಒಂದರ ತುದಿಯಿಂದ ಮತ್ತೊಂದು ಅಂಟಿಕೊಂಡು ಕಬ್ಬಿನ ಗಣಿಕೆಯಂತೆ ಕಾಣುತ್ತವೆ.


ದೇಹದಿಂದ ರೋಗಾಣು ಹೊರಗೆ ಪ್ರತಿಕೂಲ ಸನ್ನಿವೇಶಗಳಲ್ಲಿ ಹಾಗೂ ಆಮ್ಲಜನಕದ ಸಮ್ಮುಖದಲ್ಲಿ, ರೋಗಾಣುವಿನ ಮಧ್ಯೆ ಒಂದು ಬೀಜಕಣ ಗೋಚರಿಸುವುದು. ಈ ಬೀಜಕಣದ ಗಾತ್ರವು ದಂಡಾಣುವಿನ ದಪ್ಪಳತೆಗಿಂತ ಕಡಮೆ. ಬೀಜಕಣ ಬಲಿತಂತೆ ದಂಡಾಣುವಿನ ಇತರ ಭಾಗವು ನಶಿಸಿಹೋಗುವುದು. ಜೀವಾಣು ಬಿಸಿಲು, ಶಾಖ, ನಂಜುನಾಶಕ ವಸ್ತುಗಳ ಪ್ರಭಾವಕ್ಕೊಳಗಾಗಿ ನಾಶಹೊಂದುತ್ತದಾದರೂ, ಬೀಜಕಣದ ಮೇಲೆ ಅವು ಯಾವ ಪ್ರಭಾವವನ್ನೂ ಬೀರುವುದಿಲ್ಲ. ಹತ್ತು ನಿಮಿಷಗಳಕಾಲ ನೀರನ್ನು ಕುದಿಸುವುದರಿಂದ ಬೀಜಕಣಗಳು ನಾಶಹೊಂದಬಹುದು. ಆದರೆ ಅವು ನೆಲದಲ್ಲಿ, ಪ್ರಾಣಿಗಳಿಂದ ಸಿದ್ಧಪಡಿಸಿದ ವಸ್ತುಗಳಲ್ಲಿ ಅನೇಕ ವರುಷಗಳಕಾಲ ಬದುಕಿ ಉಳಿಯುತ್ತವೆ. ಬೀಜಕಣಕ್ಕೆ ಅನುಕೂಲ ಪರಿಸರ ದೊರೆತರೆ ಅದು ಪುನಃ ದಂಡಾಣುವಿನ ರೂಪದಲ್ಲಿ, ಪರಿವರ್ತನೆಗೊಂಡು ಬೆಳೆಯತೊಡಗುವುದು.

ರೋಗಪ್ರಸಾರ : ನೆರಡಿರೋಗಕ್ಕೆ ಪ್ರಾಣಿಗಳೇ ಮುಖ್ಯ ಮೂಲ. ದನ ಹಾಗೂ ಕುರಿಗಳು ರೋಗದಿಂದ ಬಳಲುತ್ತಿರುವಾಗ ಅಸಂಖ್ಯ ರೋಗಾಣುಗಳು ಅವುಗಳಿಂದ ವಿಸರ್ಜಿಸಲ್ಪಡುತ್ತಿರುತ್ತವೆ. ಹೊರಬಿದ್ದ ರೋಗಾಣುಗಳು ಬೀಜಕಣವಾಗಿ ಪರಿವರ್ತನೆಗೊಂಡು ಪ್ರಾಣಿಯ ಚರ್ಮ, ಕೂದಲು, ಉಣ್ಣೆ ಮೊದಲಾದವುಗಳನ್ನು ಕಲ್ಮಶಗೊಳಿಸುವುವು. ಅಲ್ಲದೆ ಪ್ರಾಣಿಗಳ ತ್ಯಾಜ್ಯವಸ್ತುಗಳು ಸುತ್ತಲಿನ ಹುಲ್ಲು, ನೀರನ್ನು ಕಲ್ಮಶಗೊಳಿಸುತ್ತವೆ.

ಹುಲ್ಲು, ಪ್ರಾಣಿಯಚರ್ಮ ಅಥವಾ ಉಣ್ಣೆಯ ಮೇಲಿರುವ ಬೀಜಕಣವು ಅನೇಕ ವರುಷಗಳವರೆಗೆ ಸಹಜವಾಗಿ ಉಳಿದು ರೋಗ ಪ್ರಸಾರದ ಅವಕಾಶವನ್ನು ಮಾಡಿಕೊಡುತ್ತದೆ. ನಿರೋಗಿಯಾದ ಮತ್ತೊಂದು ಪ್ರಾಣಿಯು ಮೇಯುತ್ತ ಬೀಜಕಣಗಳಿದ್ದ ತಾಣಕ್ಕೆ ಬಂದು ಕಲ್ಮಶಗೊಂಡ ಹುಲ್ಲನ್ನು ತಿಂದರೆ ರೋಗಪ್ರಸಾರವಾದಂತೆಯೇ.

ಮಾನವರು ಬೀಜಕಣಗಳಿಂದ ಮಲಿನಗೊಂಡ ಚರ್ಮ, ಉಣ್ಣೆ, ಕೂದಲು ಮುಂತಾದವುಗಳನ್ನು ಉಪಯೋಗಿಸುವಾಗ ರೋಗವನ್ನು ಪಡೆಯುವುದು ಸಾಧ್ಯವಿದೆ. ರೋಗವು ದನ ಹಾಗೂ ಕುರಿ ಕಾಯುವವರಲ್ಲಿ ಮತ್ತು ಚರ್ಮ, ಉಣ್ಣೆ, ಕೂದಲು ಹದಮಾಡುವ ಉದ್ಯಮಗಳಲ್ಲಿ ನಿರತರಾಗಿರುವವರಲ್ಲಿ, ಕಟುಕರಲ್ಲಿ ಮತ್ತು ಪಶುವೈದ್ಯರಲ್ಲಿ ಈ ರೋಗ ಕಂಡುಬರಬಹುದಾಗಿದೆ. ಇನ್ನು ಕೆಲವರಲ್ಲಿ ಪರೋಕ್ಷವಾಗಿ ಸೋಂಕು

ಸೇರಿದ ಚರ್ಮ, ಉಣ್ಣೆ ಹಾಗೂ ಕೂದಲುಗಳನ್ನು ಅಥವಾ ಅವುಗಳಿಂದ ಸಿದ್ಧಪಡಿಸಿದ ವಸ್ತುಗಳನ್ನು ಉಪಯೋಗಿಸುವಾಗ ರೋಗವು ಬರಬಹುದು. ನೊಣಗಳು ರೋಗ ಪೀಡಿತ ಪ್ರಾಣಿಯನ್ನು ಕಡಿದು ಮತ್ತೆ ನಿರೋಗಿಪ್ರಾಣಿ ಅಥವಾ ಮನುಷ್ಯರನ್ನು ಕಡಿದರೆ ಅವರೂ ರೋಗಕ್ಕೆ ತುತ್ತಾಗುತ್ತಾರೆ.



ಚಿತ್ರ 3. ನೆರಡಿಬೇನೆ ರೋಗ ಪ್ರಸಾರ

ಬೀಜಕಣಗಳು ಧೂಳುಕಣಗಳೊಡನೆ ಸೇರಿ ಅದರ ಉಚ್ಛ್ವಾಸನೆಯಿಂದ ಅಥವಾ ಕಲುಷಿತಗೊಂಡ ಆಹಾರ, ಪಾನೀಯಗಳ ಸೇವನೆಯಿಂದ ಕರುಳನ್ನು ಸೇರಬಹುದು. ನೇರ ಸಂಪರ್ಕದಿಂದ ವ್ಯಕ್ತಿಯ ಚರ್ಮದಲ್ಲಿನ ತರಚಿಕೆ, ಸೀರುಗಾಯಗಳ ಮೂಲಕ ಒಳಸೇರಬಹುದು. ರೋಗಾಣು ದೇಹದಲ್ಲಿ ಸೇರುವ ಮಾರ್ಗವನ್ನು ಅವಲಂಬಿಸಿ ಬೇರೆಬೇರೆ ತೆರನಾದ ನೆರಡಿರೋಗ ಗೋಚರಿಸುತ್ತದೆ. ಅವುಗಳಲ್ಲಿ ಚರ್ಮ, ಶ್ವಾಸ ಕೋಶ ಮತ್ತು ಕರುಳಿನ ನೆರಡಿರೂಪಗಳು ಮುಖ್ಯವಾದವುಗಳಾಗಿವೆ.

ರೋಗದಿಂದ ಬಳಲುವ ಮಾನವರಿಂದ ಕೂಡಾ ಕೆಲವುಬಾರಿ ರೋಗಪ್ರಸಾರ ವಾಗುವುದು ಸಾಧ್ಯವಿದೆ. ಆದರೆ ಇದು ತೀರ ಕ್ವಚಿತವೆಂಬುದು ಸಮಾಧಾನ ತರುವ ಸಂಗತಿ. ರೋಗಿಯು ಪುಪ್ಪುಸದ ನೆರಡಿಬೇನೆಯಿಂದ ಬಳಲುತ್ತಿರುವಾಗ, ಕಫದಲ್ಲಿ

ಅಸಂಖ್ಯ ರೋಗಾಣುಗಳು ವಿಸರ್ಜಿಸಲ್ಪಡುತ್ತವೆ. ರೋಗಿಯು ಕೆಮ್ಮುವಾಗ ಹೊರ ಬೀಳುವ ಕಫದ ತುಂತುರಿನಲ್ಲಿ ರೋಗಾಣುಗಳು ಗೋಚರಿಸುವುದರಿಂದ ಅಂತಹ ಕಲುಷಿತ ಗಾಳಿಯ ಸೇವನೆಯಿಂದ ವ್ಯಕ್ತಿಯಲ್ಲಿ ಪುಪ್ಪುಸ ನೆರಡಿಬೇನೆ ಉಂಟಾಗುತ್ತದೆ.

ರೋಗಾಣುವಿನ ಬೀಜಕಣವು ದೇಹವನ್ನು ಸೇರಿದ ಎರಡು ಮೂರುದಿನಗಳಲ್ಲಿ ರೋಗಲಕ್ಷಣಗಳು ಮೂಡುತ್ತವೆ.

ಚರ್ಮದನೆರಡಿ : ಸಾಮಾನ್ಯವಾಗಿ ಬೀಜಕಣವು ಚರ್ಮದಲ್ಲಿನ ಸೀರುಗಾಯ ಅಥವಾ ಬಿರುಕುಗಳಲ್ಲಿ ನುಸುಳಬಹುದು. ಪರಿಸರದ ಪ್ರಭಾವಕ್ಕೆ ಒಳಗಾಗಬಹುದಾದ ಮುಖ, ಕತ್ತು, ಮುಂದೋಳು, ಕೈ ಇಂತಹ ಪ್ರದೇಶದ ಚರ್ಮದ ಮೂಲಕ ಬೀಜ ಕಣಗಳು ಒಳಸೇರುತ್ತವೆ. ಅಲ್ಲಿ ಬೀಜಕಣವು ತನ್ನ ರೂಪದಿಂದ ಹೊರಬಂದು ದಂಡಾಣುವಾಗಿ ಬೆಳವಣಿಗೆಯನ್ನು ಹೊಂದುತ್ತವೆ. ತನ್ನ ಸುತ್ತಲಿನ ಅನುಕೂಲ ಪರಿಸ್ಥಿತಿಯ ಲಾಭಪಡೆದು ಅವಳಿ ಸೀಳುವಿಕೆಯ ವಿಧಾನದಿಂದ ತಮ್ಮ ಸಂಖ್ಯಾಭಿವೃದ್ಧಿಯನ್ನು ಮಾಡುತ್ತವೆ. ರೋಗಾಣುಗಳ ಬೆಳವಣಿಗೆಯ ಕಾಲದಲ್ಲುಂಟಾಗುವ ವಿಷಾರಿ ಸ್ರವಿಕೆಗಳು ಸುತ್ತಲಿನ ಜೀವಕಣಗಳಮೇಲೆ ತಮ್ಮ ದುಷ್ಪ್ರಭಾವವನ್ನು ಬೀರುತ್ತವೆ.

ಪ್ರಾರಂಭದಲ್ಲಿ ಚರ್ಮದಮೇಲೆ ಚಿಕ್ಕದಾದ ಕೆಂಪು ಚುಕ್ಕೆ ಕಂಡುಬಂದು ಅದು ಕ್ರಮೇಣ ಬೆಳೆದು, ಉಬ್ಬಿದ ಗಂಟಾಗುವುದು. ಅದರ ಮಧ್ಯೆ ಗುಳ್ಳೆಯೊಂದು ರೂಪುಗೊಳ್ಳುತ್ತದೆ ; ಸುತ್ತಣ ಚರ್ಮ ಕೆಂಪಾಗಿ ಬಾವನ್ನು ತೋರ್ಪಡಿಸುತ್ತದೆ. ಆ ಪ್ರದೇಶದಲ್ಲಿ ನೋವಿಲ್ಲದೆ ಕೇವಲ ತುರಿಕೆಯಷ್ಟೇ ಗೋಚರಿಸುವುದು. ಈ ಗುಳ್ಳೆಯ ಸುತ್ತ ಉಂಗುರದಂತೆ ಚಿಕ್ಕಚಿಕ್ಕ ಗುಳ್ಳೆಗಳು ಉದ್ಭವಿಸುವುವು. ಈ ಗುಳ್ಳೆಗಳಲ್ಲಿ ಕೀವು ಸೇರಿಕೊಳ್ಳುವುದಿಲ್ಲ. ಚರ್ಮದಲ್ಲಿ ಈ ಬದಲಾವಣೆಗಳು ತೋರಿಬರುತ್ತಿರುವಾಗ ಆ ಪ್ರದೇಶದಿಂದ ಹೊರಬರುವ ಹಾಲ್ರಸನಾಳಗಳು ಉರಿತದ ಲಕ್ಷಣ ತೋರಿಸಿ, ಅವು ಅಂತ್ಯಗೊಳ್ಳುವ ಹಾಲ್ರಸ ಗ್ರಂಥಿಗಳಲ್ಲಿ ಬಾವನ್ನುಂಟುಮಾಡುತ್ತವೆ. ಅನಂತರ ಮೂಲ ಗುಳ್ಳೆಯ ಮಧ್ಯದಲ್ಲಿನ ಜೀವಕಣಗಳು ನಾಶವಾಗುತ್ತ ಕರಗುತ್ತವೆ. ಆ ಹುಣ್ಣಿನ ಮೇಲಿನ ಪಕ್ಕಳೆ ಕಪ್ಪಾಗಿ ಇದ್ದಿಲಿನಂತೆ ತೋರಿಬರುತ್ತದೆ. ಅದರಿಂದಾಗಿಯೇ ಇದ್ದಿಲುರೋಗ ಎಂಬ ಹೆಸರು ಈ ರೋಗಕ್ಕೆ ದೊರೆತಿದೆ.

ರೋಗವು ತೀವ್ರವಾಗಿದ್ದಾಗ ಈ ಗುಳ್ಳೆಗಳ ಸುತ್ತಣ ಪ್ರದೇಶದಲ್ಲಿನ ಬಾವು ಹೆಚ್ಚಾಗಿ ಗೋಚರಿಸುತ್ತದೆ. ಅದು ಭಯಾನಕವಾಗಿ ತೋರಿಬಂದರೂ ಅಲ್ಲಿ ನೋವಿನ ಬಾಧೆ ಏನೂ ಕಾಣಿಸದು. ಮಾರಕ ಕುರು ಎಂಬ ಹೆಸರಿದ್ದರೂ ಇತರ ಕೀವುಗುಳ್ಳೆಗಳಂತೆ ನೋವನ್ನು ತೋರ್ಪಡಿಸುವುದಿಲ್ಲ.

ನೆರಡಿಹುಣ್ಣು ವಾಸಿಯಾಗುತ್ತಾ ಬಂದಂತೆ ರೋಗಿಯಲ್ಲಿ ನಿರೋಧಕ ವ್ಯಕ್ತಿಯ ಬೆಳವಣಿಗೆಯುಂಟಾಗುತ್ತದೆ. ಹುಣ್ಣು ಮಾಯ್ದ ಮೇಲೆ ಆ ಸ್ಥಳದಲ್ಲಿ ಸುಕ್ಕುಗಟ್ಟಿದ ಕಲೆ ಉಳಿಯುವುದು.

ಪುಪ್ಪುಸದ ನೆರಡಿ : 'ಉಣ್ಣೆಗಾರರ ರೋಗ' ಎಂದು ಹೆಸರು ಪಡೆದ ಪುಪ್ಪುಸದ ನೆರಡಿ ಅತ್ಯಂತ ಮಾರಕವಾದ ಬೇನೆ. ನೆರಡಿ ಬೀಜಕಣಗಳು ಇಲ್ಲವೆ ದಂಡಾಣುಜೀವಿಗಳು ಧೂಳು ಕಣಗಳಲ್ಲಿ ಮಿಶ್ರವಾಗಿ ಇಲ್ಲವೆ ಕೆಮ್ಮಿ ಬರುವ ಉಗುಳಿನ ತುಂತುರಿನಲ್ಲಿ ಸೇರ್ಪಡೆಯಾಗಿ ಗಾಳಿಯ ಮೂಲಕ ಉಸಿರಾಟಮಂಡಲವನ್ನು ಸೇರಿ ಅಲ್ಲಿ ರೋಗೋತ್ಪತ್ತಿಯನ್ನು ಮಾಡುತ್ತವೆ.

ಪುಪ್ಪುಸದಲ್ಲಿ ನೆರಡಿದಂಡಾಣುಗಳು ಬೆಳೆಯತೊಡಗಿದಂತೆ ಅಲ್ಲಿ ತಮ್ಮ ವಿಷಸ್ರವಿಕೆಯನ್ನು ಸುತ್ತಣ ಊತಕಗಳಲ್ಲಿ ಸ್ರವಿಸುತ್ತವೆ. ಇದರಿಂದ ಶ್ವಾಸನಾಳಗಳಲ್ಲಿ ಉರಿಯೂತ ಉಂಟಾಗಿ ಜ್ವರ, ಕೆಮ್ಮು, ರಕ್ತ, ಕಫ ಮತ್ತು ಉಬ್ಬಸ ತಲೆದೋರುತ್ತವೆ. ರೋಗಿಯ ಕಫದಲ್ಲಿ ನೆರಡಿರೋಗಾಣುಗಳು ವಿಪುಲ ಸಂಖ್ಯೆಯಲ್ಲಿ ಗೋಚರಿಸುತ್ತವೆ. ರೋಗವು ಬಲಿತು ರಕ್ತನಾಳಾಂತರವಾಗಿ ರೋಗಾಣು ದೇಹಾದ್ಯಂತ ಪಸರಿಸಿ ಸಾವಿಗೆ ಕಾರಣವಾಗುತ್ತದೆ.

ಕರುಳನೆರಡಿ : ತೀರ ಅಪರೂಪವಾದ ಈ ರೋಗರೂಪವು ರೋಗಾಣು ಸೋಂಕುಸೇರಿದ ಆಹಾರ ಮತ್ತು ಪಾನೀಯಗಳ ಹಾಗೂ ಸೋಂಕು ಹೊಂದಿದ ಪ್ರಾಣಿಯ ಮಾಂಸ ಸೇವನೆಯಿಂದ ನೆರಡಿರೋಗಾಣುಗಳು ಕರುಳ ಲೋಳ್ಪರೆಯನ್ನು ಸೇರಿ ಬೆಳವಣಿಗೆ ಹೊಂದುತ್ತವೆ. ಅವು ಹೊರಹಾಕುವ ವಿಷಸ್ರವಿಕೆಯು ಕರುಳ ಲೋಳ್ಪರೆಯಮೇಲೆ ಪ್ರಭಾವಬೀರಿ ಅಲ್ಲಿನ ಜೀವಕಣಗಳ ಅನುವಳಿಕೆಯನ್ನುಂಟು ಮಾಡುತ್ತದೆ. ರೋಗಿಯು ವಾಂತಿ, ಭೇದಿಯ ಗುಣಲಕ್ಷಣಗಳನ್ನು ತೋರ್ಪಡಿಸುತ್ತಾನೆ. ಭೇದಿಯು ರಕ್ತ ಮಿಶ್ರಿತ ನೀರಿನಂತೆ ತೋರುವುದು. ಒಡಲಿನಲ್ಲಿ ವಿಪರೀತ ನೋವು, ಪಿತ್ತಮಿಶ್ರಿತ ವಾಂತಿ, ಸುಸ್ತು ಮತ್ತು ವಿಷಣ್ಣತೆ, ರೋಗಾಣುಗಳು ರಕ್ತದಲ್ಲಿ ಸೇರಿಕೊಂಡು ಸಾವನ್ನುಂಟುಮಾಡಬಹುದು.

ರೋಗನಿದಾನ : ನೆರಡಿರೋಗವನ್ನು ಗುರುತಿಸುವಲ್ಲಿ ರೋಗಲಕ್ಷಣಗಳು ಮತ್ತು ರೋಗಿಯ ಉದ್ಯೋಗ ಸಹಾಯವಾಗಿದೆ. ಸ್ರವಿಕೆಯಲ್ಲಿ ದಂಡಾಣುಜೀವಿಗಳ ಇರುವಿಕೆ, ರೋಗದ ಕಾರಣವನ್ನು ಖಚಿತಪಡಿಸುತ್ತದೆ. ನೆರಡಿಹುಣ್ಣಿನ ಸುತ್ತಲೂ ಇರುವ ಗುಳ್ಳೆಗಳಲ್ಲಿನ ದ್ರವ ಇಲ್ಲವೆ ಕಫವನ್ನು ಗಾಜಿನ ಫಲಕದ ಮೇಲೆ ಹರಡಿ ಗ್ರಾಮ್‌ವರ್ಣಲೇಪನ ನೀಡಿ ಈ ಜೀವಿಗಳನ್ನು ಪತ್ತೆಹಚ್ಚಬೇಕು; ಸಾರದ್ರವ್ಯದ ಮೇಲೆ ರೋಗಾಣುಗಳನ್ನು ಬೆಳೆಯಬಹುದು.

ಪ್ರಾಣಿಗಳಲ್ಲಿನ ಬೇನೆಯನ್ನು ಗುರುತಿಸದೇ ಉಳಿದರೆ ನೆರಡಿರೋಗವು ಮಾನವರಲ್ಲಿ ಪ್ರಸಾರಗೊಳ್ಳಲು ಅವಕಾಶವಿರುವುದು. ಅವು ತೋರ್ಪಡಿಸುವ ಜ್ವರ, ವಿಷಣ್ಣತೆ, ರೋಗನಿದಾನ ಮಾಡುವಲ್ಲಿ ಸಹಾಯಕ. ಏಕಾಏಕಿ ಸಾಯುವ ಪ್ರಾಣಿಗಳನ್ನೂ ಸತ್ತ ಪ್ರಾಣಿಗಳ ಮೂಗಿನಹೊಳ್ಳೆ, ಗುದದ್ವಾರ ಇತ್ಯಾದಿಯಿಂದ ಹೆಪ್ಪುಗಟ್ಟಿದ ಕಪ್ಪುಬಣ್ಣದ ರಕ್ತ ಸ್ರಾವವಾಗುತ್ತಿದ್ದು, ಹೊಟ್ಟೆ ಉಬ್ಬರಿಸಿದ ಪ್ರಾಣಿಗಳನ್ನೂ ಸಂಶಯಾತ್ಮಕ ದೃಷ್ಟಿಯಿಂದ ಕಾಣಬೇಕು. ಇಂತಹವು ಅನೇಕವಾಗಿ ನೆರಡಿಬೇನೆಗೆ ತುತ್ತಾಗಿರುತ್ತವೆ. ಅವುಗಳ ರಕ್ತದಲ್ಲಿ ದಂಡಾಣುಜೀವಿಗಳು ವಿಪುಲ ಸಂಖ್ಯೆಯಲ್ಲಿರುತ್ತವೆ. ಸತ್ತಪ್ರಾಣಿಯ ರಕ್ತವನ್ನು ಸಹ ಪರೀಕ್ಷಿಸಿ ದಂಡಾಣುಜೀವಿಗಳ ಇರುವಿಕೆಯನ್ನು ದೃಢಪಡಿಸಿಕೊಳ್ಳಬಹುದು.

ಚಿಕಿತ್ಸೆ: ರೋಗಾಣುಗಳು ಪೆನಿಸಿಲಿನ್ ಹಾಗೂ ಸ್ಟ್ರೆಪ್ಟೋಮೈಸಿನ್ ಜೀವಿರೋಧಕ ಮದ್ದುಗಳಿಂದ ಬೇಗನೆ ನಾಶಗೊಳಿಸಲ್ಪಡುತ್ತವೆ. ಅವುಗಳನ್ನು ರೋಗವನ್ನು ಗುರುತಿಸಿದ ಕೂಡಲೇ ಕೊಡಬೇಕು. ಟೆಟ್ರಾಸೈಕ್ಲಿನ್ ಮತ್ತು ಕ್ಲೋರಾಂಫೆನಿಕಾಲ್ ಸಹ ನೆರಡಿ ಜೀವಾಣುಗಳ ಮೇಲೆ ಪ್ರಭಾವವನ್ನು ಬೀರುತ್ತವೆ.

ರೋಗಿಯನ್ನು ಇತರರ ಸಂಪರ್ಕದಿಂದ ದೂರವಿರಿಸಬೇಕು. ರೋಗಿಯಿದ್ದ ಕೊಠಡಿಯನ್ನು ಸ್ವಚ್ಛವಾಗಿ ತೊಳೆದು ನಂಜುರೋಧಕವನ್ನು ಸಿಂಪಡಿಸಬೇಕು. ಚರ್ಮದ ಮೇಲಿನ ಕುರುಗಳಮೇಲೆ ಪಟ್ಟಿ ಕಟ್ಟಿ ಅವು ಮಾಯಲು ಅವಕಾಶ ಕೊಡಬೇಕು. ರೋಗಿಯ ಶುಶ್ರೂಷೆ ಮಾಡುವವರು ಮತ್ತು ಇತರ ಪರಿಚಾರಕರು ಮುಖವಾಡ ಮತ್ತು ಗವಸಣಿಗೆಗಳನ್ನು ಧರಿಸಬೇಕು.

ಪ್ರತಿಬಂಧ: ನೆರಡಿಬೇನೆಯು ಮಾನವರಿಗೆ ಪ್ರಾಣಿಗಳಿಂದ ಬರುತ್ತದೆ. ಆದುದರಿಂದ ಆ ರೋಗ ಮಾನವರಲ್ಲಿ ಹರಡದಂತಾಗಬೇಕಾದರೆ ಪ್ರಾಣಿಗಳಲ್ಲಿ ಆ ರೋಗ ಬರದಂತೆ ನೋಡಬೇಕು. ನೆರಡಿಬೇನೆಯಿಂದ ಮರಣಹೊಂದಿದ ಪ್ರಾಣಿಯ ದೇಹವನ್ನು ಚರ್ಮ ಮಾಂಸಗಳಿಂದಾಗಲೀ, ವೈದ್ಯಕೀಯ ಪರೀಕ್ಷೆಗಾಗಲೀ ಛಿದ್ರಿಸಬಾರದು. ಇಲ್ಲದಿದ್ದಲ್ಲಿ ದೇಹದಿಂದ ಜೀವಾಣುಗಳು ಹೊರಬಿದ್ದು ಕೂಡಲೇ ಬೀಜಾಣುಗಳಾಗಿ ಪರಿವರ್ತಿಸಿ ಅನೇಕ ವರ್ಷಗಳಕಾಲ ಅಲ್ಲಿನ ಪರಿಸರವನ್ನು ಕಲುಷಿತಗೊಳಿಸಿ ಇತರ ಪ್ರಾಣಿಗಳ ದೇಹವನ್ನು ಹುಗಿಯದೆ ಸುಡುವುದು ಬಹುಮುಖ್ಯ. ಇಲ್ಲದಿದ್ದರೆ ಆಳವಾದ ಗುಣಿಯನ್ನು ತೆಗೆದು ದೇಹದ ಸುತ್ತಲೂ ಸುಣ್ಣವನ್ನು ಸುರಿದು ಹೂಳಬೇಕು. ಇದರಿಂದ ದೇಹದಲ್ಲಿದ್ದ ನೆರಡಿರೋಗಾಣುಗಳು ಪ್ರಸರಣಗೊಳ್ಳದಂತಾಗುತ್ತದೆ.

ಪ್ರಾಣಿಗಳಲ್ಲಿ ರೋಗಬರದಂತೆ ಚುಚ್ಚುಲಸಿಕೆಯನ್ನು ಕೊಡಬೇಕು. ನೆರಡಿ ಜೀವಾಣುಗಳನ್ನು ಅವುಗಳಿಗೆ ಒಗ್ಗದ ವಾತಾವರಣದಲ್ಲಿ ಬೆಳೆದಾಗ ಅವು ತಮ್ಮ ರೋಗ

ಕಾರಕ ಗುಣಗಳನ್ನು ಕಳೆದುಕೊಂಡರೂ, ರೋಗನಿರೋಧಜನಕ ಶಕ್ತಿಯನ್ನು ಉಳಿಸಿಕೊಂಡಿರುತ್ತವೆ. ಅಂತಹ ರೋಗಾಣುಗಳನ್ನು ದೇಹದಲ್ಲಿ ಚುಚ್ಚುವುದರಿಂದ ಅವು ರೋಗನಿರೋಧಕ ಶಕ್ತಿಯನ್ನು ಬೆಳೆಸುತ್ತವೆ. ಈ ರೋಗಕ್ಕೆ ಈಡಾಗಬಲ್ಲ ಸಾಧ್ಯತೆಯನ್ನು ಹೊಂದಿದ ವ್ಯಕ್ತಿಗಳಿಗೆ ಚುಚ್ಚು ಲಸಿಕೆಯನ್ನು ನೀಡಿ ನಿರೋಧಕ ಶಕ್ತಿಯನ್ನು ಬೆಳೆಸಬಹುದು.

ಪ್ರಾಣಿಗಳ ಚರ್ಮ, ಉಣ್ಣೆ, ಕೂದಲು, ಇವುಗಳಲ್ಲಿ ನೇರಡಿಸೋಂಕು ಇರುವುದನ್ನು ಪರಿಶೀಲಿಸಿ ಅವುಗಳ ಸೋಂಕು ನಾಶಕ ವಸ್ತುಗಳನ್ನು ಪ್ರಭಾವಕ್ಕೊಳಪಡಿಸಬೇಕು.

4. ಗೊರಸೆರೋಗ

ಮನುಷ್ಯರಲ್ಲಿ ತೀರ ಅಪರೂಪವಾದ ಈ ರೋಗವು, ದನಕರುಗಳ ಮೂಲಕ ಲಭಿಸುತ್ತದೆ. ಆಗ ರೋಗಿಯು ಜ್ವರದ ಬಾಧೆಹೊಂದಿ, ಬಾಯಿ ಮತ್ತು ಉಗುರಿನ ಸುತ್ತ ನೀರ್ಗುಳ್ಳೆಗಳನ್ನು ಪ್ರಕಟಿಸುತ್ತಾನೆ.


ರೋಗ ಹೊಂದಿದ ಪ್ರಾಣಿಗಳಲ್ಲೂ ಸಹ, ಅವುಗಳ ಗೊರಸು ಮತ್ತು ಬಾಯಿ ಸುತ್ತ ನೀರ್ಗುಳ್ಳೆಗಳು ಗೋಚರಿಸುವುದನ್ನು ತೀರ ಪ್ರಾಚೀನಕಾಲದಿಂದಲೂ, ಗುರುತಿಸಲ್ಪಟ್ಟಿದೆ. ಕಾಲು ಮತ್ತು ಬಾಯಿರೋಗ 'ಫುಟ್ ಅಂಡ್ ಮೌಥ್ ಡಿಸೀಸ್' ಎಂದು ಇಂಗ್ಲೀಷ್‌ನಲ್ಲಿ ಕರೆಯಲ್ಪಡುವ ಈ ರೋಗ ಹಳ್ಳಿಗಾಡಿನಲ್ಲಿ ಗೊರಸೆರೋಗವೆಂದೂ ಪ್ರಚಲಿತವಿದೆ.

ರೋಗಾಣು : ಗೊರಸೆರೋಗವನ್ನು ಉಂಟುಮಾಡುವ ರೋಗಾಣು, ಪ್ರಾಣಿಗಳು ಮತ್ತು ಮನುಷ್ಯರಲ್ಲಿ ರೋಗವನ್ನುಂಟುಮಾಡುವ ವೈರಸ್(ವಿಷಾಣು)ಗಳಲ್ಲಿಯೇ ತೀರ ಚಿಕ್ಕದಾದ ವೈರಸ್‌ಗಳಲ್ಲೊಂದು ಡರ್ಮಾಫಿಲಸ್ ಪೆಕೊರಿಸ್. ಅದರಲ್ಲಿ ಬೇರೆ ಬೇರೆ ತೆರನಾದ ಏಳು ಜಾತಿಗಳಿವೆ. ಕೋನಾಕೃತಿಯನ್ನು ಹೊಂದಿದ ಈ ವಿಷಾಣುವಿನ ಗಾತ್ರ ಕೇವಲ 20 ಮಿಲಿ ಮೈಕ್ರಾನ್. ಅದು ಪರಿಸರದಲ್ಲಿ ನಿರ್ನಾಮಗೊಳ್ಳದೆ ದೀರ್ಘಾವಧಿ ಕಾಲ ಉಳಿಯಬಲ್ಲದು. ಒಣಗುವಿಕೆ, ತಂಪಾಗುವಿಕೆ, ಅದರ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ.

ರೋಗಪ್ರಸಾರ : ದನಕರುಗಳಲ್ಲಿ ತೀವ್ರತೆರನಾದ ಸಾಂಕ್ರಾಮಿಕ ರೋಗವನ್ನು ಈ ವಿಷಾಣು ಉಂಟುಮಾಡುತ್ತದೆ. ಕೆಲವುಬಾರಿ ಕುರಿ, ಆಡು, ಹಂದಿ ಮತ್ತು ಒಂಟೆಗಳಲ್ಲಿ ರೋಗ ಗೋಚರಿಸಬಹುದು. ಈ ಪ್ರಾಣಿಗಳ ಎಲ್ಲ ವಯಸ್ಸಿನಲ್ಲಿಯೂ ರೋಗವು ವಿಶೇಷವಾಗಿ ಕಾಣ ಸಿಕ್ಕುವುದು. ಗೊರಸೆರೋಗವು ತೀವ್ರತೆರನಾದ ಸೋಂಕು ಜಾಡ್ಯವಾಗಿದ್ದು, ಅದು ರೋಗದಿಂದ ಬಳಲುತ್ತಿರುವ ಪ್ರಾಣಿಗಳಿಂದ ಇತರ ಪ್ರಾಣಿಗಳಿಗೆ ಹರಡುತ್ತದೆ.

ವಿಷಾಣು ಗೊರಸಿನ ಸುತ್ತಣ ಚರ್ಮ, ಕೆಚ್ಚಲು ಮತ್ತು ಬಾಯಿಸುತ್ತಲೂ ಲೋಳ್ಪರೆ, ಮೂಗಿನ ಹೊಳ್ಳೆ, ವಸಡು,ತುಟಿಯ ಮೇಲ್ಪದರಿನ ಕಣಗಳಲ್ಲಿ ಹುದುಗಿರುತ್ತದಾದರೂ, ಅದು ರಕ್ತದ ಮೂಲಕ ದೇಹಾದ್ಯಂತ ಪಸರಿಸುತ್ತದೆ. ಆದರಿಂದಾಗಿ ವಿಷಾಣುಗಳು ರೋಗಿಷ್ಠ ಪ್ರಾಣಿಗಳ ಸಗಣಿ, ಹಿಕ್ಕೆ, ಮೂತ್ರ, ಜೊಲ್ಲು ಮತ್ತು

ಹಾಲಿನ ಮೂಲಕ ವಿಸರ್ಜಿಸಲ್ಪಡುತ್ತವೆ. ಅಲ್ಲದೆ ರೋಗದ ಫಲವಾಗಿ ಉಂಟಾದ ನೀರ್ಗುಳ್ಳೆಗಳು ಒಡೆದಾಗ, ಅವು ವಿಪುಲಸಂಖ್ಯೆಯಲ್ಲಿ ಹೊರಹಾಕಲ್ಪಡುತ್ತವೆ. ಆದರಿಂದ ಮಲಿನಗೊಂಡ ಮೇವು, ಕುಡಿಯುವನೀರು ರೋಗಪ್ರಸಾರಕ್ಕೆ ಕಾರಣೀಭೂತವಾಗುತ್ತವೆ ಈ ತೆರನಾಗಿ ಕಲ್ಮಶಗೊಂಡ ಹಕ್ಕೆಯ ಮೂಲಕನಾಗಿ ಇತರ ದನಕರುಗಳು ರೋಗವನ್ನು ತಡೆಯುತ್ತವೆ. ಮನುಷ್ಯ ಪ್ರಾಣಿಗಳು ಹಾಲು ಮತ್ತು ಕೆಲ ಬಾರಿ ಮಾಂಸವನ್ನು ಸೇವಿಸುವುದರ ಮೂಲಕ ರೋಗವನ್ನು ಹೊಂದಬಹುದು; ಇಲ್ಲವೆ ರೋಗಿಷ್ಠ ಪ್ರಾಣಿಗಳ ಆರೈಕೆ ಮಾಡುವಾಗ ಸೋಂಕು ಹೊಂದಿದ ದ್ರವಿಕೆಗಳು ದೇಹದಲ್ಲಿನ ಗೀರು ಗಾಯ, ತರಚಿಕೆಗಳ ಮೂಲಕ ಒಳಸೇರಬಹುದು.



ಚಿತ್ರ 4. ಮುಖ ಮತ್ತು ಕಾಲಿನಮೇಲೆ ಗೋಚರಿಸಿ ರೋಗದ ಚಿಹ್ನೆಗಳು

ರೋಗದ ಬೆಳವಣಿಗೆ: ಹಾಲಿನೊಡನೆ ಸೋಂಕು ಒಳಸೇರಿದಾಗ, ಈ ವಿಷಾಣು ಬಾಯಿಲೋಳ್ಪರೆಯಲ್ಲಿ ಬೆಳವಣಿಗೆಯನ್ನು ಹೊಂದುವುದು; ಗೀರುಗಾಯಗಳ ಮೂಲಕ ಅದು ಒಳಹೊಕ್ಕಾಗ, ಆ ಪ್ರದೇಶದಲ್ಲಿ ತನ್ನ ಬೆಳವಣಿಗೆಯನ್ನು ತೋರಿಸುವುದು. ಅಲ್ಲಿ ಗುಳ್ಳೆಯೊಂದು ಗೋಚರಿಸಿ, ಅದರಲ್ಲಿ ನೀರಿನಂತಹ ದ್ರವ ಸಂಗ್ರಹಗೊಳ್ಳುತ್ತದೆ. ಅದರ ಬೆಳವಣಿಗೆಯೊಂದಿಗೆ ವಿಷಾಣುಗಳು ರಕ್ತ ಪ್ರವಾಹದಲ್ಲಿ ಸೇರ್ಪಡೆಗೊಂಡು ದೇಹಾದ್ಯಂತ ಪ್ರಸರಣಗೊಳ್ಳುತ್ತವಾದರೂ, ಅವು ಬಾಯಿ, ಪಾದ ಮತ್ತು ಹಸ್ತದಬೆರಳತುದಿಯಲ್ಲಿ ಸೀಮಿತಗೊಂಡು, ದೇಹಸೇರಿದ ಮೂರುದಿನಗಳಲ್ಲಿ ರೋಗಲಕ್ಷಣಗಳನ್ನು ಪ್ರಕಟಿಸುತ್ತವೆ.

ರೋಗಲಕ್ಷಣ : ರೋಗಲಕ್ಷಣಗಳು ಏಕಾಏಕಿಯಾಗಿ ಗೋಚರಿಸುತ್ತವೆ. ಚಳಿಯಿಂದ ಪ್ರಾರಂಭವಾದ ಜ್ವರ, ಸುಸ್ತು, ತಲೆನೋವು, ಮೈಕೈನೋವು, ತುರಿಕೆ ಮೊದಲ ಲಕ್ಷಣಗಳು. ಅನಂತರ ಕೆಲದಿನಗಳಲ್ಲಿಯೇ ಬಾಯಿಸುತ್ತಣ ಚರ್ಮ ದಲ್ಲಿ ಉರಿತ ತೋರಿ ಗುಳ್ಳೆಗಳು ಗೋಚರಿಸುತ್ತವೆ. ಪ್ರಾರಂಭದಲ್ಲಿ ಚಿಕ್ಕಗಾತ್ರದ ಗುಳ್ಳೆಗಳು ದೊಡ್ಡದಾಗಿ ಬೆಳೆದು ನೀರಿನಿಂದ ತುಂಬಲ್ಪಡುತ್ತವೆ. ಅವು ಅನಂತರ ಒಡೆದು ಹುಣ್ಣಾಗುತ್ತವೆ. ಬಾಯೊಳಗಿನ ಮತ್ತು ಗಂಟಲಿನ ಗುಳ್ಳೆಗಳು ಆಹಾರ ವನ್ನು ಸೇವಿಸುವಾಗ ವೇದನೆಯನ್ನುಂಟುಮಾಡುತ್ತವೆ. ಗಟ್ಟಿಯಾದ ಆಹಾರವನ್ನು ಜಗಿಯುವಾಗ, ಖಾರ ಮತ್ತು ಮಸಾಲೆವಸ್ತುಗಳನ್ನು ತಿನ್ನುವಾಗ ಹೆಚ್ಚು ನೋವುಂಟಾಗುವುದು. ಹೆಚ್ಚು ಪ್ರಮಾಣದಲ್ಲಿ ಒಸರುವ ಜೊಲ್ಲು ನುಂಗಲ್ಪಡದೆ ಬಾಯಿಂದ ಹೊರಬರುತ್ತದೆ. ಹುಣ್ಣುಗಳಿಂದ ಸುಲಭವಾಗಿ ರಕ್ತೋದ್ರೇಕವಾಗ ಬಹುದು. ಜ್ವರವು ರೋಗಲಕ್ಷಣಗಳು ಪ್ರಕಟವಾದ ನಾಲ್ಕಾರುದಿನಗಳಲ್ಲಿ ಕಡಮೆ ಯಾಗುವುದು. ಹುಣ್ಣುಗಳು 2-3 ವಾರಗಳಲ್ಲಿ ಯಾವ ಕುರುಹನ್ನೂ ಉಳಿಸದೆ ತಂತಾನೇ ಗುಣಹೊಂದುತ್ತವೆ. ಈ ರೋಗವು ತಂತಾನೇ ನಿಲುಗಡೆ ಹೊಂದುವ ಶಕ್ತಿಯನ್ನು ಪಡೆದಿದೆ.

ರೋಗನಿದಾನ : ಅಪರೂಪವಾದ ಈ ರೋಗವನ್ನು ಗುರುತಿಸುವಲ್ಲಿ ರೋಗ ಲಕ್ಷಣಗಳಲ್ಲದೆ, ವ್ಯಕ್ತಿಯಪರಿಸರ, ಪ್ರಾಣಿಗಳ ಸಂಪರ್ಕದ ಬಗ್ಗೆ ವಿವರವನ್ನು ಪಡೆಯು ವುದು ಅಗತ್ಯ. ಪ್ರಾಣಿಗಳ ಆರೈಕೆಯಲ್ಲಿ ನಿರತರಾಗಿರುವವರಲ್ಲಿ, ತಾವು ನೋಡಿ ಕೊಳ್ಳುವ ದನಕರು, ಕುರಿಗಳಲ್ಲಿ ಗೊರಸರೋಗದ ಇರುವಿಕೆಯ ಬಗ್ಗೆ ತಿಳಿದುಕೊಳ್ಳ ಬೇಕು. ರೋಗ ಉಂಟಾದಾಗ ರಕ್ತದಲ್ಲಿ ಬಿಳ್ಕಣಗಳ ಸಂಖ್ಯೆ ಕಡಮೆಯಾಗುತ್ತದೆ; ಕೆಂಪಾನುರಾಗಿಕ ಬಿಳ್ಕಣಗಳು ಸಂಪೂರ್ಣವಾಗಿ ಮಾಯವಾಗುತ್ತವೆ. ನೀರ್ಗುಳ್ಳೆ ಯಲ್ಲಿನ ದ್ರವವನ್ನು ಗಿನಿಪಿಗ್(ಇಲಿಯಂತಹ ಒಂದು ಜಾತಿಯ ಪ್ರಾಣಿ)ನ ಕಾಲಡಿ ಚುಚ್ಚಿ ವಿಷಾಣುವನ್ನು ಬೆಳೆಸಬಹುದು. ರೋಗದಿಂದ ಚೇತರಿಸಿಕೊಳ್ಳುವಾಗ ರೋಗಿಯ ರಕ್ತದಲ್ಲಿ ಗೊರಸೆರೋಗ ವಿಷಾಣುವಿನ ರೋಧಿಕಣಗಳು ಹೆಚ್ಚುಗೊಳ್ಳುತ್ತಿರು ವುದನ್ನು ತೋರಿಸಬಹುದು.

ಈ ರೋಗವನ್ನು ಹೋಲುವ ಬಾಯುಹುಗುಳಿನಲ್ಲಿ ನೀರ್ಗುಳ್ಳೆಗಳು ಒಡೆದಾಗ ತೀರ ಆಳವಾದ ಹುಣ್ಣುಂಟಾಗುವುದು; ಅದರ ಮೇಲೆ ಬಿಳಿಪರೆ ಮುಚ್ಚುವುದು. ಅಲ್ಲಿ ಜೊಲ್ಲುಸ್ರವಿಕೆ ವಿಶೇಷವಾಗಿರುವುದಿಲ್ಲ.

ಚಿಕಿತ್ಸೆ : ದೈಹಿಕವಾಗಿ ತೀವ್ರತರ ಗುಣಲಕ್ಷಣಗಳನ್ನು ವ್ಯಕ್ತಿ ತೋರ್ಪಡಿ ಸಿದರೂ, ಅದರಿಂದ ಎರಡುಮೂರು ವಾರಗಳಲ್ಲಿ ಸಂಪೂರ್ಣವಾಗಿ ಚೇತರಿಸುತ್ತಾನೆ. ರೋಗದಿಂದ ದೇಹದಮೇಲೆ ಯಾವ ಮಾರಕ ಪರಿಣಾಮಗಳು ಗೋಚರಿಸುವುದಿಲ್ಲ.

ಈ ರೋಗದ ಮೇಲೆ ಪ್ರಭಾವವನ್ನು ಬೀರುವ ಖಚಿತವಾದ ಯಾವ ಮದ್ದೂ ಇಲ್ಲ ಕೆಲವುಬಾರಿ ಟೆಟ್ರಾಸೈಕ್ಲಿನ್‌ಗಳು ಉಪಯುಕ್ತವೆಂದು ತೋರಿಬಂದಿವೆ. ರೋಗ ಬೇರ್ಪಡಿಸುವ ಗುಣಲಕ್ಷಣಗಳನ್ನು ನಿವಾರಿಸುವ ಉಪಚಾರವನ್ನು ಕೈಗೊಳ್ಳಬೇಕು.


ಬಾಯೊಳಗಿನ ಹುಣ್ಣು ಉಲ್ಬಣಗೊಳ್ಳದಿರಲು ಸುಲಭವಾಗಿ ಪಚನವಾಗಬಲ್ಲ ಅರೆದ್ರವರೂಪೀ ಆಹಾರವನ್ನು ಆಗಾಗ್ಗೆ ಕೊಡಬೇಕು. ತಲೆನೋವು, ಮೈಕೈನೊವು ಇವುಗಳನ್ನು ನೋವು ಶಮನಕಾರಕ ಔಷಧಗಳು ಹೋಗಲಾಡಿಸುವುವು. ಬಾಯಿಯ ವ್ರಣದ ಚಿಕಿತ್ಸೆಗೆ ಶೇ. 1ರ ಪೊಟ್ಯಾಸಿಯಂ ಪರಮಾಂಗನೇಟ್ ದ್ರಾವಕದಿಂದ ಮುಕ್ಕಳಿಸಬೇಕು. ಚರ್ಮದ ಹುಣ್ಣುಗಳಿಗೆ ಶೇ. 0.5ರ ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣವನ್ನು ಹಚ್ಚಬೇಕು.

ಪ್ರತಿಬಂಧ: ಹಾಲನ್ನು 'ಕಾಯಿಸಿ ಕುಡಿಯುವುದು ಈ ರೋಗದ ಆಗಮನವನ್ನು ತಡೆಗಟ್ಟುವಲ್ಲಿನ ಮೊದಲ ಉಪಾಯ ಪ್ರಾಣಿಗಳ ಆರೈಕೆಯನ್ನು ಮಾಡುವವರು ಗೊರಸೆರೋಗದಿಂದ ಬಳಲುವ ಪ್ರಾಣಿಗಳ ಬಗ್ಗೆ ವಿಶೇಷ ಕಾಳಜಿವಹಿಸಬೇಕು. ದನದ ಕೊಟ್ಟಿಗೆಯನ್ನು ಸ್ವಚ್ಛವಾಗಿರಿಸಬೇಕು. ಮೇಲಾಗಿ ರೋಗದ ವಿರುದ್ಧ ರಕ್ಷಣಾ ಲಸಿಕೆಯನ್ನು ಸಂಪರ್ಕಪಡೆದ ಇತರ ಪ್ರಾಣಿಗಳಿಗೆ ಕೊಡಿಸಬೇಕು. ಪ್ರಾಣಿಗಳ ಯೋಗಕ್ಷೇಮ ನೋಡಿಕೊಳ್ಳುವ ವ್ಯಕ್ತಿಗಳು ತಮ್ಮ ಕೈಕಾಲುಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ರೋಗಿಷ್ಠ ಪ್ರಾಣಿಗಳನ್ನು ನೋಡುವಾಗ ಸೋಂಕು ತಗುಲದಂತೆ ಕೈಚೀಲಗಳನ್ನು, ಪಾದರಕ್ಷೆಗಳನ್ನು ಧರಿಸಬೇಕು.

5. ಕುದುರೆ ಸಿಂಬಳರೋಗ

ಕುದುರೆಯ ಸಂಪರ್ಕದಿಂದ ಇದು ತೀಕ್ಷ್ಣ ಸಾಂಕ್ರಾಮಿಕ ರೋಗವಾಗಿ ದೇಹಾದ್ಯಂತ ದದ್ದುಗಟ್ಟಿ ಕೀವುಗುಳ್ಳೆಗಳು ಉದ್ಭವಿಸಬಹುದಾಗಿದೆ. ಶಟ್ಟು ನೆಗಡಿಯೆಂದು ಕರೆಯಲ್ಪಡುವ ಕುದುರೆ ಸಿಂಬಳರೋಗ ಕುದುರೆಗಳಲ್ಲಿ ಉಂಟಾಗುವುದನ್ನು ಕ್ರಿಸ್ತ ಪೂರ್ವ ಕಾಲಮಾನದಿಂದಲೇ ಗುರುತಿಸಲ್ಪಟ್ಟಿದೆ. ಆಗ ಪ್ರವಾಸ ಹಾಗೂ ಯುದ್ಧ ಕಾಲದಲ್ಲಿ ಕುದುರೆಗಳನ್ನು ವಾಹನಗಳಾಗಿ ಬಳಸುತ್ತಿದ್ದುದರಿಂದ ಈ ರೋಗ ವಿಪುಲವಾಗಿ ಕಾಣಸಿಗುತ್ತಿದ್ದಿತು. ಈಗ ಕುದುರೆಯ ಬಳಕೆ ಕಡಮೆಯಾಗಿದ್ದು ರೋಗ ಗೋಚರಿಸುವುದು ತೀರ ಅಪರೂಪವಾಗಿದೆ.

ರೋಗಾಣು : ಕುದುರೆ ಸಿಂಬಳರೋಗವು ಮ್ಯಾಲಿಯೋ ಮೈಸಿಸ್‌ಮ್ಯಾಲೀ ಎಂಬ ರೋಗಾಣುವಿನಿಂದ ಉಂಟಾಗುತ್ತದೆ. ಆ ರೋಗಾಣು ಚಲನಶಕ್ತಿಯಿಲ್ಲದ ಕಿರಿಪಾದ ಗಾಳಿಜೀವಿ. ಅದು ಗ್ರಾಮ್‌ವರ್ಣಲೇಪನ ಪಡೆಯದು. ರೋಗಾಣುವನ್ನು ಪ್ರಯೋಗಶಾಲೆಯ ಸಾರದ್ರವ್ಯದಲ್ಲಿ ಬೆಳೆಸಬಹುದು.



ಚಿತ್ರ 5. ಕುದುರೆಸಿಂಬಳರೋಗದ ಹರಡಿಕೆ

ರೋಗಪ್ರಸಾರ: ರೋಗಾಣುವಿನ ಮುಖ್ಯಮೂಲ ರೋಗಿಷ್ಠ ಕುದುರೆ. ಅದರಿಂದ ಹೊರಬರುವ ಸಿಂಬಳ, ಮೂತ್ರ ಮತ್ತು ಕೀವಿನ ಒಸರಿಕೆಯ ಮೂಲಕ

ವಾಗಿ ರೋಗಾಣುಗಳು ದೇಹದಿಂದ ವಿಸರ್ಜನೆಗೊಳ್ಳುತ್ತವೆ. ರೋಗವು ಶ್ವಾಸಕೋಶದಲ್ಲಿ ರೂಪುಗೊಂಡಿದ್ದರೆ ಪ್ರಾಣಿಯ ಕಫದಲ್ಲಿ ರೋಗಾಣುಗಳು ಗೋಚರಿಸುತ್ತವೆ. ಒಂದು ಕುದುರೆಯಿಂದ ಮತ್ತೊಂದು ಕುದುರೆಗೆ ಹರಡುವ ಈ ಸಾಂಸರ್ಗಿಕರೋಗ ಕೆಲವು ಬಾರಿ ಕತ್ತೆ, ಹೇಸರಗತ್ತೆಗಳಲ್ಲಿ ಉಂಟಾಗಬಹುದು.

ರೋಗಿಷ್ಠ ಕುದುರೆಯ ನೇರ ಸಂಸರ್ಗದಿಂದಾಗಿ, ಅವರಲ್ಲೂ ಕುದುರೆಗಳ ಪಾಲನೆಯಲ್ಲಿ ನಿರತರಾಗಿರುವವರಲ್ಲಿ, ಕುದುರೆಯ ಒಸರಿಕೆಯ ಸಂಪರ್ಕವನ್ನು ಹೊಂದುವ ಪ್ರಯೋಗಶಾಲೆಯ ಕೆಲಸಗಾರರಲ್ಲಿ, ಅಪರೂಪವಾಗಿ ಈ ರೋಗ ತಲೆದೋರಬಹುದು. ಚರ್ಮ ಮತ್ತು ಲೋಳ್ಪರೆಯಲ್ಲಿನ ತರಚಿಕೆ, ಗೀರುಗಾಯಗಳ ಮೂಲಕ ಇಲ್ಲವೆ ಧೂಳುಕಣಗಳ ತುಂತುರಿನ ಮೂಲಕವಾಗಿ ರೋಗಾಣುಗಳು ದೇಹವನ್ನು ಸೇರಬಹುದು. ಕುದುರೆಗಳ ಪಾಲನೆಯಲ್ಲಿ ನಿರತರಾಗಿರುವವರಲ್ಲಿ ರೋಗ ಅಪರೂಪವಾಗಿ ತೋರಿಬರುವುದರಿಂದ ಇದನ್ನು ಉದ್ಯೋಗ ರೋಗವೆಂದು ಪರಿಗಣಿಸಲಾಗಿದೆ. ರೋಗದಿಂದ ಬಳಲುವ ವ್ಯಕ್ತಿಗಳು ರೋಗಾಣುಗಳನ್ನು ತಮ್ಮ ಸಿಂಬಳದಲ್ಲಿ ಇಲ್ಲವೇ ಕೀವುಗುಳ್ಳೆಗಳ ಒಸರಿಕೆಯಲ್ಲಿ ವಿಸರ್ಜಿಸಿ ರೋಗ ಪ್ರಸರಣಕ್ಕೆ ಕಾರಣೀಭೂತರಾಗಬಹುದು.

ರೋಗದ ಬೆಳವಣಿಗೆ: ದೇಹವನ್ನು ಚರ್ಮ, ಲೋಳ್ಪರೆ ಇಲ್ಲವೆ ಉಸಿರಾಟ ಮಂಡಲದ ಮೂಲಕ ಒಳಸೇರಿದ ರೋಗಾಣುಗಳು, ಆ ಸ್ಥಳದಲ್ಲಿ ವೃದ್ಧಿ ಹೊಂದಿ ತಮ್ಮ ಸಂಖ್ಯೆಯನ್ನು ವಿಪುಲಗೊಳಿಸುತ್ತವೆ. ಆಗ ರೋಗಾಣುಗಳು ರಕ್ತಪ್ರವಾಹದಲ್ಲಿ ಸೇರ್ಪಡೆಹೊಂದಿ ದೇಹದ ಬೇರೆ ಬೇರೆ ಅಂಗ ಭಾಗಗಳನ್ನು ತಲುಪಿ ಅಲ್ಲಿ ಉರಿಯೂತವನ್ನುಂಟುಮಾಡುತ್ತವೆ. ಆಗ ಚರ್ಮದ, ಲೋಳ್ಪರೆಯಲ್ಲಿ ಉರಿಯೂತ, ಬಾವು, ಗಂಟುಗಳು ತೋರಿಬರುತ್ತವೆ. ಮೂಗಿನಹೊಳ್ಳೆ, ಬಾಯುಂಗುಳು, ಗಂಟಲು ಮತ್ತು ಚರ್ಮದ ಪ್ರದೇಶ ಕೆಂಪಡರಿ ದದ್ದು(ಗಂಟು)ಗಳಿಂದ ನೋವನ್ನು ಹೊಂದುತ್ತವೆ. ಕೆಲವೊಂದು ದದ್ದು(ಗಂಟು)ಗಳು ಕೀವು ತುಂಬಿಕೊಂಡು ಕೀವುಗುಳ್ಳೆಗಳಾಗಿ, ಹುರುಗಳಾಗಿ, ಅನಂತರ ಒಡೆದು ಕೀವು ಸೋರಿಸುತ್ತವೆ.

ಶ್ವಾಸಕೋಶ, ಕೀಲುಗಳು, ಮೂಳೆ, ಮೆದುಳುಪೊರೆಯಲ್ಲಿ ಉರಿಯೂತ ತೋರಿಬರಬಹುದು. ಈಲಿ ಮತ್ತು ತೊರಳೆ ಉರಿಯೂತದಿಂದ ದೊಡ್ಡದಾಗುತ್ತವೆ. ರೋಗವು ತೀಕ್ಷ್ಣ ರೂಪದಲ್ಲಿ ಪ್ರಕಟವಾದಾಗ ಅದು ದೇಹದ ಉಳಿವಿಕೆಗೆ ಮಾರಕವಾಗಿ ಪರಿಣಮಿಸಬಹುದು; ಇಲ್ಲವೆ ನಿಧಾನಗತಿಯ ಬೆಳವಣಿಗೆಯನ್ನು ಹೊಂದಿ ದೈಹಿಕ ಬಲಹೀನತೆಗೆ ಕಾರಣವಾಗಿ, ದೈಹಿಕ ಕ್ಷೀಣತೆಯನ್ನುಂಟುಮಾಡಬಹುದು.

ಗುಣಲಕ್ಷಣಗಳು : ಜೀವಾಣುಗಳು ಅನೇಕದಿನ, ವಾರಗಳ ಪರ್ಯಂತ ದೇಹದಲ್ಲಿ ಹುದುಗಿ ಕುಳಿತು ರೋಗವನ್ನು ಏಕಾಏಕಿ ಪ್ರಕಟಿಸಿ ವೇಗಗತಿಯಿಂದ ಬೆಳವಣಿಗೆ ಹೊಂದಬಹುದು. ಆಗ ದೇಹದಲ್ಲಿ ಚಳಿಯಿಂದ ಕೂಡಿದ ಜ್ವರ, ತೀವ್ರ ತೆರನಾದ ಬಲಹೀನತೆ, ತಲೆನೋವು, ಬೆನ್ನುನೋವು, ಸುಸ್ತು ಗೋಚರಿಸುತ್ತವೆ. ಜೀವಾಣುಗಳು ಒಳಸೇರಿದ ಚರ್ಮದ ಪ್ರದೇಶದಲ್ಲಿ ದದ್ದು(ಗಂಟು)ಗಳು ಕಂಡುಬರುತ್ತವೆ. ಅಲ್ಲಿ ನೋವಿನಿಂದ ಕೂಡಿದ ಹುಣ್ಣು ಉಂಟಾಗುವುದು. ಅಲ್ಲಿಂದ ರೋಗಾಣು ಹಾಲ್ರಸನಾಳಗಳ ಮೂಲಕ ಸಮೀಪದ ಹಾಲ್ರಸಗ್ರಂಥಿಗಳಿಗೆ ಹರಡಿ ಅವುಗಳನ್ನು ದೊಡ್ಡವನ್ನಾಗಿಸುತ್ತವೆ. ಅಲ್ಲಿಂದ ಹಾಲ್ರಸನಾಳ ಮತ್ತು ರಕ್ತನಾಳಗಳ ಮೂಲಕ ರೋಗಾಣುಗಳು ದೇಹಾದ್ಯಂತ ಪ್ರಸರಣಗೊಳ್ಳುತ್ತವೆ.

ಹಾಲ್ರಸನಾಳಗಳ ಮೂಲಕ, ಚರ್ಮದಡಿ, ಲೋಳ್ಪರೆಯಡಿ, ಸ್ನಾಯು, ಪುಪ್ಪುಸ ಮೊದಲಾದ ಅಂಗಭಾಗಗಳಲ್ಲಿ ಸಾವಿರಕಣದಂತಹ ಗಂಟುಗಳು ಗೋಚರಿಸಿ, ಅನಂತರ ಅವು ಒಂದಕ್ಕೊಂದು ಸೇರ್ಪಡೆಯಾಗುತ್ತವೆ; ಅವುಗಳ ಕೇಂದ್ರ ಗಿಣ್ಣುಗೊಂಡು ನಾಳವನ್ನು ತೋರಿಸಿ ಹುಣ್ಣಾಗುತ್ತವೆ. ಅಲ್ಲಿಂದ ಕೀವುಗಾಲುವೆಗಳ ಮೂಲಕ ತಮ್ಮ ಒಸರಿಕೆಯನ್ನು ಹೊರಹಾಕುತ್ತವೆ. ಅಂತೆಯೇ ಮೂಗಿನಹೊಳ್ಳೆ, ಅಲ್ಲಿನ ಮೆದು ಪೊರೆ ಹುಣ್ಣಾಗಿ ಕೀವನ್ನು ಹೊರಹಾಕುವುದು. ಈ ತೆರನಾಗಿ ಹುಣ್ಣುಗಳಿಂದ ಕೀವುಸೋರುತ್ತಾ ವ್ಯಕ್ತಿಯು ಕ್ಷೀಣಗೊಂಡು, ದೈಹಿಕಶಕ್ತಿ ಕಳೆದುಕೊಳ್ಳುವನು.

ಮುನ್ನೋಟ : ರೋಗಿಯು ಮೂಗಿನಿಂದ ಕೀವುರಕ್ತಮಿಶ್ರಿತ ಸಿಂಬಳ, ಹುಣ್ಣುಗಳಿಂದ ಕೀವುಒಸರಿಕೆ, ಮೇಲಣ ಉಸಿರುನಾಳದಲ್ಲಿ ಹುಣ್ಣುಗಳನ್ನು ತೋರ್ಪಡಿಸಿದ ಒಂದರಿಂದ ಮೂರುವಾರಗಳ ಅವಧಿಯಲ್ಲಿ ಅನೇಕರು ಸಾವನ್ನಪ್ಪುವರು. ರೋಗಾಣುಗಳು ಪ್ರಬಲ ಶಕ್ತಿಯಿಂದ ಉಸಿರ್ನಾಳದ ಮೂಲಕ ಶ್ವಾಸಕೋಶವನ್ನು ಪ್ರವೇಶಿಸಿ ಅಲ್ಲಿ ಉರಿಯೂತವನ್ನುಂಟುಮಾಡಿ ನ್ಯುಮೋನಿಯದಂತೆ ರೋಗವನ್ನು ತೋರ್ಪಡಿಸಬಹುದು.

ನಿದಾನ : ಕೀವು ಒಸರಿಕೆ ಮತ್ತು ಕೆಲವುಬಾರಿ ಕಪ್ಪಕ್ಕೆ ವರ್ಣಲೇಪನ ಕೊಟ್ಟು ರೋಗಾಣುಗಳನ್ನು ಗುರುತಿಸಬಹುದು. ಅವುಗಳನ್ನು ಪ್ರಯೋಗಶಾಲೆಯ ಸಾರದ್ರವ್ಯ(ಮಾಧ್ಯಮ)ದ ಮೇಲೆ ಬೆಳೆಯಬಹುದು. ರೋಗಹೊಂದಿದ ವ್ಯಕ್ತಿಯಲ್ಲಿ ಒಂದುವಾರದ ನಂತರ ಒಗ್ಗದಿರುವಿಕೆ ಬೆಳವಣಿಗೆಹೊಂದುವುದನ್ನು ..ಚರ್ಮಪರೀಕ್ಷೆಯಿಂದ ಗುರುತಿಸಿ ತಿಳಿಯಬಹುದು. ರಕ್ತದಲ್ಲಿ ಬಿಳ್ಕಣಗಳ ಸಂಖ್ಯೆ ಕೆಳಗಿಳಿದಿರುತ್ತದೆ.

ಚಿಕಿತ್ಸೆ : ಈ ರೋಗಾಣುಗಳ ಮೇಲೆ ಸಲ್ಫಾನೇಮೈಡ್, ಟೆಟ್ರಾಸೈಕ್ಲಿನ್, ಸ್ಟ್ರೆಪ್ಟೋಮೈಸಿನ್ ಪ್ರಭಾವವನ್ನು ಬೀರುತ್ತವೆಂದು ತಿಳಿಯಲಾಗಿದೆ. ಅವುಗಳ ಫಲ

ಶ್ರುತಿಯ ಬಗ್ಗೆ ಖಚಿತ ಅಭಿಪ್ರಾಯವಿಲ್ಲ. ಅನೇಕರಲ್ಲಿ ರೋಗವು ಮಾರಕವಾಗಿ ಮರಣವನ್ನುಂಟುಮಾಡುತ್ತದೆ. ರೋಗಾಣುಗಳನ್ನು ನಾಶಪಡಿಸುವ ಮದ್ದುಗಳು ಬಳಕೆಗೆ ಬಂದಿಲ್ಲವಾದುದರಿಂದ ಉಪಚಾರವೆಲ್ಲ ರೋಗಲಕ್ಷಣಗಳನ್ನು ಶಮನಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ.

ಪ್ರತಿಬಂಧ : ರೋಗಿಯ ಶುಶ್ರೂಷೆಯಲ್ಲಿ ನಿರತರಾಗಿರುವವರು ವಿಶೇಷ ಕಾಳಜಿ ವಹಿಸಬೇಕು. ರೋಗಿಯಿಂದ ವಿಸರ್ಜಿತವಾಗುವ ಕೀವು, ಸಿಂಬಳ ಮೊದಲಾದುವನ್ನು ನಂಜುನಾಶಕದ್ರವದಲ್ಲಿ ಮಿಶ್ರಮಾಡಿ ತ್ಯಜಿಸಬೇಕು. ಸ್ರವಿಕೆಯಿಂದ ಕಲ್ಮಷಗೊಂಡ ಹತ್ತಿ, ಬಟ್ಟೆ ಮೊದಲಾದುವುಗಳನ್ನು ಸುಟ್ಟು ನಾಶಪಡಿಸಬೇಕು. ಕೈಗಳಲ್ಲಿ ಗಾಯ ಹೊಂದಿದವರು ಆ ವಸ್ತುಗಳನ್ನು ಮುಟ್ಟಬಾರದು. ರೋಗಾಣುಗಳು ಉಸಿರಿನ ಮೂಲಕ ಶ್ವಾಸಕೋಶವನ್ನು ಸೇರದಂತೆ ಮುಖವಾಡವನ್ನು ಧರಿಸಬೇಕು.

ರೋಗವು ಮನುಷ್ಯರಲ್ಲಿ ಉಂಟಾಗದಂತೆ ಮಾಡಲು ಈ ರೋಗದಿಂದ ಕುದುರೆಗಳು ಬರಲದಂತೆ ನೋಡಿಕೊಳ್ಳಬೇಕಾದುದು ಮುಖ್ಯ. ಆಗಾಗ್ಗೆ ಕುದುರೆಗಳನ್ನು ಪಶುವೈದ್ಯರ ಪರೀಕ್ಷೆಗೆ ಒಳಪಡಿಸಬೇಕು. ಕುದುರೆಯಲ್ಲೇನಾದರೂ ರೋಗದ ಸುಳಿವು ತೋರಿಬಂದರೆ ಆ ಪ್ರಾಣಿಯನ್ನು ಪರೀಕ್ಷೆಗಳಿಗೆ ಗುರಿಪಡಿಸಿ ರೋಗದ ಇರುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ರೋಗದ ಇರುವಿಕೆ ದೃಢಪಟ್ಟರೆ, ರೋಗಾಣುಗಳನ್ನು ನಾಶಪಡಿಸುವ ಯಾವ ನಿರ್ದಿಷ್ಟ ಮದ್ದು ದೊರೆತಿಲ್ಲದಿರುವುದರಿಂದ ಪ್ರಾಣಿಯನ್ನು ಕೊಲ್ಲುವುದೊಂದೇ ಮಾರ್ಗ. ಯಾವುದೇ ಒಂದು ಮದ್ದನ್ನು ಪ್ರಯೋಗಿಸುತ್ತ ರೋಗ ಪ್ರಸಾರಕ್ಕೆ ಅವಕಾಶಮಾಡುವುದಕ್ಕಿಂತಲೂ ರೋಗಿಷ್ಟ ಕುದುರೆಯನ್ನು ಸಾಯಿಸುವುದೇ ಮೇಲು. ಸಾಯಿಸಿದ ಪ್ರಾಣಿಯ ದೇಹವನ್ನು ಆಳವಾಗಿ ನೆಲದಲ್ಲಿ ಹೂಳಬೇಕು. ಅದಕ್ಕಿಂತಲೂ ಉತ್ತಮ ಉಪಾಯವೆಂದರೆ ಪ್ರಾಣಿಯ ದೇಹವನ್ನು ಸಂಪೂರ್ಣವಾಗಿ ಸುಡಬೇಕು.

ಕುದುರೆಯನ್ನು ಸಾಕಬಯಸುವವರು ಈ ರೋಗದ ಬಗ್ಗೆ ಲಕ್ಷ್ಯವಿರಿಸುವುದು ಅಗತ್ಯ. ಪ್ರಾಣಿಯನ್ನು ಆಗಾಗ್ಗೆ ಪಶುವೈದ್ಯರ ಅವಗಾಹನೆಗೆ ತರುತ್ತಿರಬೇಕು.

6. ಬೆಕ್ಕು ಪರಚಿಕೆರೋಗ

ಬೆಕ್ಕು ಪರಚಿದ ಅಥವಾ ಕಚ್ಚಿದ ಫಲವಾಗಿ ಸೀಮಿತ ಪ್ರದೇಶದಲ್ಲಿ ಹಾಲ್ರಸ ಗ್ರಂಥಿಗಳ ಉರಿಯೂತ ಗೋಚರಿಸಿ ರೋಗ ಉಂಟಾಗಬಹುದಾಗಿದೆ.

ಜಗತ್ತಿನ ಎಲ್ಲಕಡೆ ಕಾಣಸಿಕ್ಕಬಹುದಾದ ಈ ರೋಗವು ಹೆಚ್ಚಾಗಿ ಚಳಿಗಾಲದಲ್ಲಿ ಕಂಡುಬರುವುದು. ಅದರಲ್ಲೂ ದೊಡ್ಡವರಿಗಿಂತಲೂ ಮಕ್ಕಳಲ್ಲಿ ಈ ರೋಗವು ಗೋಚರಿಸುತ್ತದೆ. ಬೆಕ್ಕಿನ ಪಂಜದಿಂದ ಪರಚಿಸಿಕೊಂಡು ಇಲ್ಲವೆ ಹಲ್ಲಿನಿಂದ ಕಚ್ಚಿಸಿಕೊಂಡು ಗಾಯಹೊಂದಿದ ಇತಿಹಾಸವನ್ನು ಈ ರೋಗ ಹೊಂದಿದ ಐವತ್ತುನಾಲ್ಕು ಜನ ನೀಡುತ್ತಾರೆ. ಇತರರಲ್ಲಿ ಈ ರೋಗವು ಮುಳ್ಳು ಇಲ್ಲವೆ ಮರದ ಸಿಬಿರು ಚುಚ್ಚಿದ ಫಲವಾಗಿ ಇಲ್ಲವೆ ಲೋಹವಸ್ತು, ಮೂಳೆಗಳಿಂದಾದ ಚರ್ಮಗಾಯದ ಫಲವಾಗಿ ತೋರಿಬರಬಹುದು.

ಬೆಕ್ಕಿನ ಮೂಲಕ ಈ ಸೋಂಕು ಮನುಷ್ಯರಿಗೆ ಬರಬಹುದಾದರೂ ಬೆಕ್ಕು ಮಾತ್ರ ರೋಗದ ಯಾವುದೇ ಗುಣಲಕ್ಷಣಗಳನ್ನು ಪ್ರಕಟ ಪಡಿಸದಿರುವುದು ವಿಶೇಷತೆ. ಮೇಲಾಗಿ ಬೆಕ್ಕು ಪರಚಿಕೆಯ ರೋಧಜನಕ ಬಳಸಿದಾಗಲೂ ಯಾವ ಪ್ರತಿಕ್ರಿಯೆ ತೋರಿಬರುವುದಿಲ್ಲವಾದುದರಿಂದ ಈ ರೋಗದ ಸೋಂಕನ್ನು ಬೆಕ್ಕು ಬಹುಶಃ ತನ್ನ ಹಲ್ಲುಗಳ ಇಲ್ಲವೆ ಪಂಜದ ಮೂಲಕ ಕೊಂಡೊಯ್ಯುತ್ತದೆಂದು ತಿಳಿಯಲಾಗಿದೆ. ಈ ರೋಗಕ್ಕೆ ಕಾರಣೀಭೂತವಾದ ಜೀವಾಣು ಇಲ್ಲವೆ ವಿಷಾಣುವನ್ನು ಖಚಿತವಾಗಿ ತೋರ್ಪಡಿಸುವಲ್ಲಿ ಯಶಸ್ಸನ್ನು ಪಡೆದಿಲ್ಲ. ರೋಗಪೀಡಿತ ಹಾಲ್ರಸಗ್ರಂಥಿಯ ವಸ್ತು ವಿಶೇಷವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕದ ಮೂಲಕ ಪರೀಕ್ಷೆಗೊಳಪಡಿಸಿದಾಗ ವಿಷಾಣುವಸ್ತುಗಳಂತಹ ವಸ್ತುಗಳು ಗೋಚರಿಸಿರುವುದರಿಂದಾಗಿ ವಿಷಾಣುಗಳು ಈ ರೋಗಕ್ಕೆ ಕಾರಣವಾಗಿರಬೇಕೆಂದು ಗ್ರಹಿಸಲಾಗಿದೆ. ಗ್ರಂಥಿಗಳ ವಸ್ತುಗಳನ್ನು ತಳಿ ಮಾಡಿದಾಗ ಯಾವ ಜೀವಾಣುಗಳೂ ಬೆಳವಣಿಗೆಹೊಂದಿಲ್ಲ.

ಸಾಮಾನ್ಯವಾಗಿ ಈ ಸೋಂಕು ಒಳಸೇರುವ ಪ್ರದೇಶ ಕೈ, ಮುಂಗೈ ಮತ್ತು ಮುಖದ ಮೂಲಕ. ಅಲ್ಲಿ ಕೆಲವುಬಾರಿ ತರಚಿಕೆಯ ಫಲವಾಗಿ ಚರ್ಮ ಗಾದರೆಯಂತೆ ಕೆಂಪಾಗಬಹುದು; ಕೆಲವುಬಾರಿ ಅಲ್ಲಿ ಗುಳ್ಳೆಯೊಂದು ಉಂಟಾಗಿ ಒಡೆದು ಚಕ್ಕಳೆಗಟ್ಟಬಹುದು. ಅಲ್ಲಿ ಯಾವ ಕುರುಹೂ ಬಿಡದೆ ಅದು ಮಾಯವಾಗುತ್ತದೆ. ಇದಾದ ಕೆಲವು ದಿನ ಅಥವಾ ವಾರಗಳನಂತರ ಮೊಳಕೈಹಿಂದೆ, ಬಗಲು ಮತ್ತು ಕತ್ತಿನ ಹಾಲ್ರಸ

ಗ್ರಂಥಿಗಳು ದೊಡ್ಡವಾಗುತ್ತವೆ. ಕಾಲಿನಲ್ಲಿ ಪರಚಿಕೆಯುಂಟಾಗಿದ್ದರೆ ಹವಗಡಲೆಯುಂಟಾಗಬಹುದು. ಆ ಸಮಯದಲ್ಲಿ ಸಾಧಾರಣ ಮಟ್ಟದ ದೈಹಿಕ ಗುಣಲಕ್ಷಣಗಳಾಗಿ ಜ್ವರ, ತಲೆನೋವು, ಸುಸ್ತು ತೋರಿಬರುತ್ತದೆ. ಗಂಟುಗಳ ತೀವ್ರತೆಯು ಒಂದೇ ತೆರನಾಗಿರುವುದಿಲ್ಲ. ಕೆಲವು ಉರಿಯೂತ ಲಕ್ಷಣಗಳಿಂದ ತುಂಬಾ ದೊಡ್ಡದಾಗುತ್ತವೆ. ಇನ್ನು ಕೆಲವು ಕೀವು ತುಂಬಿಕೊಳ್ಳಬಹುದು. ಈ ಗಂಟುಗಳು ನಾಲ್ಕಾರು ವಾರಗಳ ಪರ್ಯಂತ ಉಳಿದು ಅನಂತರ ನಿಧಾನವಾಗಿ ಕರಗಿಹೋಗುತ್ತವೆ. ರೋಗ ಬಂದಾಗ ಬಿಳಿಕಣಗಳ ಸಂಖ್ಯೆ ಏರಿರುತ್ತದೆ. ರಕ್ತ ತಳಸೇರುವಿಕೆ ವೇಗಗೊಂಡಿರುತ್ತದೆ.



ಚಿತ್ರ 6. ಇಂಥ ಬೆಕ್ಕುಗಳೇ ಪರಚಿಕೆರೋಗಕ್ಕೆ ಕಾರಣ

ಕೆಲವುಬಾರಿ ಈ ರೋಗದ ತೊಡಕಾಗಿ ಮಿದುಳುರಿ ಉಂಟಾಗಬಹುದು. ಆಗ ಜ್ವರ, ಬಡಬಡಿಕೆ, ನರದೌರ್ಬಲ್ಯ ಉಂಟಾಗಿ, ಕೆಲವು ದಿನಗಳ ಪರ್ಯಂತ ಉಳಿದು ಮಾಯವಾಗುತ್ತವೆ.

ಈ ರೋಗ ಲಕ್ಷಣಗಳನ್ನು ಹೊಂದಿದವರೆಲ್ಲ ಅರ್ಧಕ್ಕಿಂತಲೂ ಹೆಚ್ಚು ರೋಗಗಳು ಬೆಕ್ಕಿನಿಂದ ಪರಚಿಕೆ ಹೊಂದಿದ್ದುದನ್ನಾಗಲೀ ಇಲ್ಲವೆ ಅದರ ಸಾಮೀಪ್ಯವನ್ನು ಹೊಂದಿದ್ದುದನ್ನಾಗಲೀ ಹೇಳುವರು. ಸ್ಥಳೀಯ ಹಾಲ್ರಸಗ್ರಂಥಿಗಳ ಉರಿಯೂತ ಈ ರೋಗದ ಮುಖ್ಯ ಲಕ್ಷಣವಾಗಿರುವುದರಿಂದ ಇತರ ಅನೇಕ ರೋಗಗಳಿಂದ ಬೆಕ್ಕು ಪರಚಿಕೆ ರೋಗವನ್ನು ಬೇರ್ಪಡಿಸುವುದು ಅನೇಕ ಬಾರಿ ಕಷ್ಟಕರವಾಗುತ್ತದೆ. ರೋಗಿಷ್ಠ ಗಂಟುಗಳಿಂದ ಹೊರತೆಗೆದ ರಸವನ್ನು ಸೋಂಕುಕಳೆದು ಚರ್ಮದಲ್ಲಿ ಚುಚ್ಚಿದಾಗ ಪ್ರತಿಕ್ರಿಯೆ ತೋರಿಬರಬಹುದು.

ಈ ರೋಗದ ಮುನ್ನೋಟ ಒಳ್ಳೆಯದು. ಅದು ಯಾವ ದುಷ್ಪರಿಣಾಮಗಳನ್ನು ಉಂಟುಮಾಡದೆ ಮಾಯುವಾಗುತ್ತದೆ. ಯಾವ ಜೀವಾಣುರೋಧಕಗಳೂ ಈ ರೋಗದ ಮೇಲೆ ಪ್ರಭಾವವನ್ನು ಬೀರುವುದಿಲ್ಲ. ರೋಗಬಂದಾಗ್ಗೆ ವಿಶ್ರಾಂತಿ ಪಡೆಯಬೇಕು. ಕೆಲವುಬಾರಿ ಹಾಲ್ರಸಗ್ರಂಥಿ ಕೀವಿನಿಂದ ತುಂಬಿದ್ದರೆ ಅದನ್ನು ಸೂಜಿಯಿಂದ ಹೀರಿ ತೆಗೆಯಬೇಕು.

7. ಹಾಲಿಂಡಿಗನ ಕೈಗಂಟುರೋಗ

ದಿನನಿತ್ಯ ಹಾಲುಕರೆಯುವವನಿಗೆ ಹಸುಗಳ ಕೆಚ್ಚಲು ಹಾಗೂ ತೊಟ್ಟುಗಳ ನೇರ ಹಾಗೂ ನಿಕಟಸಂಪರ್ಕ ಬರುತ್ತದೆ. ಹಾಲು ಕರೆಯುವವನಿಗೆ ಹಸುಗಳ ಕೆಚ್ಚಲಿನ ಹೊರ ಹಾಗೂ ಒಳಗಿನ ರೋಗಗಳ ಸೋಂಕು, ಅವನ ಕೈಯಲ್ಲಿನ ಗಾಯಗಳ ಮುಖಾಂತರ ತಗುಲಿ ಆತ ಪೀಡಿತನಾಗುತ್ತಾನೆ. ಇದಕ್ಕೆ **ಹಾಲಿಂಡಿಗನ ಕೈಗಂಟು ರೋಗ** ಎಂದು ಹೆಸರು.

ಹಾಲಿಂಡಿಗನ ಕೈಗಂಟು ಸೋಂಕು ಒಂದು ಬಗೆಯ ವಿಷಾಣುಗಳಿಂದ ಬರುವ ಚರ್ಮರೋಗ. ಇದು ಒಂದು ಬಗೆಯ ಸಿಡುಬು. ಸ್ವಾಭಾವಿಕವಾಗಿ ಇದು ಪ್ರಾಣಿಗಳ ಕೆಚ್ಚಲು ಮತ್ತು ತೊಟ್ಟುಗಳ ಮೇಲಿನ ಚರ್ಮದ ಮೇಲೆ ಸಿಡುಬಾಗಿ ಗೋಚರವಾಗುತ್ತದೆ. ಇದು ಮುಖ್ಯವಾಗಿ ಹಸುಗಳಲ್ಲಿ ಕಾಣಬರುವ ಸೋಂಕು. ಇವುಗಳಿಂದ ಇದು ಮನುಷ್ಯರಿಗೂ ಹರಡಲು ಸಾಧ್ಯ.

ರೋಗಕಾರಕಗಳು : ಹಾಲಿಂಡಿಗನ ಕೈಗಂಟುಸೋಂಕಿಗೆ ಕಾರಣ ವಿಷಾಣು. ಈ ವಿಷಾಣುಗಳು ಸಿಡುಬಿನ ವಿಷಾಣುಗಳಾದ **ಪಾಕ್ಸ್** ಗುಂಪಿನಲ್ಲೇ ಸೇರುತ್ತವೆ. ಇವು ಅತಿಸೂಕ್ಷ್ಮ. ಇವು ಚರ್ಮದ ಸಿಡುಬುಗಾಯಗಳಲ್ಲಿ ಸಮೃದ್ಧಿಯಾಗಿರುತ್ತವೆ. ಅಲ್ಲದೆ, ಧೂಳು ಮತ್ತು ಒಣಸ್ರಾವಗಳಲ್ಲಿ ಬಹಳಕಾಲ ಜೀವಿಸಿರಬಲ್ಲವು. ಈ ವಿಷಾಣುವೂ ದನಸಿಡುಬಿನ ವಿಷಾಣುವೂ ಒಂದೇ ಗುಂಪಿನಲ್ಲಿ ಸೇರಿದರೂ, ಇವುಗಳೆರಡರ ನಡುವೆ ವ್ಯತ್ಯಾಸವಿದೆ. ಇವೆರಡೂ ಬೇರೆ ಬೇರೆ ವಿಷಾಣುಗಳು. ಆದರೆ ಇವೆರಡರ ನಡುವೆ ನಿಕಟಸಂಬಂಧವಿದೆ.

ಪ್ರಾಣಿಗಳಲ್ಲಿ ಹಾಲಿಂಡಿಗನ ಕೈಗಂಟು ಸೋಂಕು : ಮನುಷ್ಯರಲ್ಲಿ ಹಾಲಿಂಡಿಗನ **ಕೈಗಂಟು ಸೋಂಕು** ಅಥವಾ **ಮಿಲ್ಕರ್ಸ್ ನಾಡ್ಯೂಲ್ಸ್** ಎಂದು ಕರೆಯುವ ಇದನ್ನೇ ಹಸುಗಳಲ್ಲಿ **ದನಸಿಡುಬು** ಎಂದು ಹೇಳುವುದು ರೂಢಿ. ಆದರೆ ಈ ಸೋಂಕು ವಾಸ್ತವವಾಗಿ ಬೇರೆಯದೇ ಆಗಿರುತ್ತದೆ. ದನಸಿಡುಬು ಹಾಗೂ ಇದರ ರೋಗಕಾರಕಗಳು ಬೇರೆ ಬೇರೆ.

ಹಾಲಿಂಡಿಗನ ಕೈಗಂಟು ಸೋಂಕು ವಿಶ್ವಾದ್ಯಂತ ಎಲ್ಲೆಲ್ಲೂ ಹೈನು ಹಸುಗಳ ಸಾಕಣೆ ಇರುವೆಡೆಯಲ್ಲೆಲ್ಲ ಹಸುಗಳಲ್ಲಿ ಸಾಮಾನ್ಯ. ಹಸುಗಳಲ್ಲಿ ಈ ಸೋಂಕಿನ ಸಂಭವ ಮತ್ತು ಇರುವಿಕೆಯ ಬಗ್ಗೆ ಬೇರೆ ಬೇರೆ ದೇಶಗಳಲ್ಲಿ ಹಲವು ಮಂದಿ ವರದಿ

ಮಾಡಿದ್ದಾರೆ. ಇದರಿಂದಾಗಿ ಹಸುಗಳಲ್ಲಿ ಸಾವಿನ ಸಂಭವಗಳಿಲ್ಲದಿದ್ದರೂ ಇದರಿಂದಾಗುವ ನಷ್ಟವನ್ನು ಕಡೆಗಣಿಸಲಾಗದು. ಇದು ಅಕ್ಕಪಕ್ಕದ ಹಸುಗಳಿಗೆ ಸುಲಭವಾಗಿ ಹರಡುತ್ತದೆ. ಇಂಥ ಹಸುಗಳು ಕೆಚ್ಚಲುಬಾವಿಗೆ ಈಡಾಗುತ್ತವೆ. ಇದರ ಪರಿಣಾಮ ಹಾಲಿನ ಉತ್ಪಾದನೆಯಲ್ಲಿ ಇಳಿಮುಖ. ಕೆಚ್ಚಲುಮೇಲಿನ ಗಾಯಗಳಿಂದಾಗಿ ಹಾಲು ಕರೆಯುವಾಗ ಹಸುಗಳಿಗೆ ಕಿರಿಕಿರಿ. ಹಾಲು ಕರೆಯುವವರಿಗೂ ಸೋಂಕು ಅಂಟಿ ಅವರಿಗೂ ಆತಂಕ.

ಪ್ರಾಣಿಗಳಲ್ಲಿ ರೋಗಸ್ವರೂಪಗಳು : ಪ್ರಾಣಿಗಳಲ್ಲಿ ಈ ಸೋಂಕು ಎರಡು ಸ್ವರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ.


1) ದುಂಡನೆಯ ಕುರುವಿನ ಸ್ವರೂಪ.

2) ಹಗರು(ಗಾದರಿ) ಸ್ವರೂಪ.

ದುಂಡಗಿನ ಕುರುಗಳು ಉಂಗುರಾಕಾರವಿರುತ್ತದೆ. ಇವು ಕೆಚ್ಚಲು ಮತ್ತು ತೊಟ್ಟುಗಳ ಚರ್ಮದ ಮೇಲೆ ಸಣ್ಣ ಸಣ್ಣ ಕಲೆ ಹಾಗೂ ಮಿಟಿದದ್ದುಗಳಾಗಿ ಆರಂಭವಾಗುತ್ತವೆ. ಅನಂತರ ಅವು ಕ್ರಮೇಣ ಬೆಳೆದು ಗುಳ್ಳೆತೆರನಾಗುತ್ತವೆ. ಈ ಗುಳ್ಳೆಗಳು ಕೆಲವೇ ದಿನಗಳಲ್ಲಿ ಸಿಪ್ಪೆಗಟ್ಟುತ್ತವೆ. ಮೊದಲು ಈ ಚರ್ಮಗಾಯಗಳು ಮಧ್ಯಭಾಗದಲ್ಲಿ ಗುಣಮುಖವಾಗಲು ಆರಂಭವಾಗುತ್ತದೆ. ಅದೇ ವೇಳೆಗೆ ಅವುಗಳ ಸುತ್ತಂಚು ಹರಡುತ್ತ ಹೋಗುತ್ತದೆ. ಈ ಸ್ಥಿತಿಯಲ್ಲಿ ನೋಡಿದಾಗ ಗಾಯಗಳು ಉಂಗುರ ಅಥವಾ ಲಾಳಾಕಾರದಲ್ಲಿ ಕಾಣಿಸುತ್ತವೆ. ಈ ಸೋಂಕುಗಾಯಗಳು ಕೆಲವುದಿನ ಅದೂ ವಾರಗಳವರೆಗೆ ಇರಬಹುದು. ಇವು ವಾಸಿಯಾದರೂ ತೊಟ್ಟುಗಳ ಮೇಲೆ ಗಾಯದ ಕಲೆಗಳು ಕೆಲವು ದಿನಗಳವರೆಗೆ ಉಳಿಯುತ್ತವೆ.


ಹಗರಿನ ರೂಪದ ಸೋಂಕು ದುಂಡಗಿನ ಕುರುಗಳ ರೂಪದ ಸೋಂಕಿನೊಂದಿಗೇ ಕಾಣಿಸಿಕೊಳ್ಳಬಹುದು. ಈ ಸ್ವರೂಪದಲ್ಲಿ ಮೃದುವಾದ ಹಗರು ಒಂದು ವಿಶೇಷ.

ಹಾಲಿಂಡಿಗನ ಕೈಗಂಟು ಸೋಂಕು : ಮನುಷ್ಯರಲ್ಲಿ ಕಂಡುಬರುವ ಈ ಚರ್ಮದ ಸೋಂಕನ್ನು 'ಮಿಲ್ಕರ್ಸ್‌ವಾರ್ಟ್' ; 'ವರಹುಲಿಸೋಂಕು' ಎಂದೂ ಕರೆಯುವರು. ಹಾಲುಕರೆಯುವವರು ಮಾತ್ರವಲ್ಲದೆ ಕಸಾಯಿ ಖಾನೆಗಳಲ್ಲಿ ಕೆಲಸ ಮಾಡುವ ಮಂದಿಗೂ ಈ ಸೋಂಕು ಹರಡುವ ಸಾಧ್ಯತೆಗಳುಂಟು. ಇವರು ಸೋಂಕು ಪ್ರಾಣಿಗಳೊಂದಿಗೆ ಕೆಲಸಮಾಡುತ್ತಿರುವ ಸಮಯದಲ್ಲಿ, ಅವುಗಳ ಕೆಚ್ಚಲು ಮತ್ತು ತೊಟ್ಟುಗಳ ಮೇಲಿನ ಸೋಂಕು ಗಾಯಗಳ ನೇರ ಸಂಪರ್ಕದಿಂದ, ಅಂಗೈ ಮತ್ತು ಮುಂದೋಳಿನ ಕೈಭಾಗಗಳಲ್ಲಿರುವ ಗಾಯಗಳ ಮೂಲಕ ಸೋಂಕನ್ನು ಪಡೆಯುವರು. ಹೀಗೆ



ಹಾಲಿಂಡಿಗನ ಕೈಗಂಟು ರೋಗ

ಚಿತ್ರ 7.



ಹಾಲಿಂಡಿಗನ ಕೈಗಂಟು ರೋಗ

ಪ್ರಾಣಿಗಳಿಂದ ಸೋಂಕು ಪಡೆದ ಜನರ ಕೈಗಳ ಮೇಲೆ 2–3 ರಿಂದ ಹಿಡಿದು 25–40 ಸಂಖ್ಯೆಯವರೆಗೆ ಸಣ್ಣ ಸಣ್ಣ ಗಂಟುಗಳು ಕಾಣಿಸಿಕೊಳ್ಳುತ್ತವೆ. ಕೈಗಳ ಮೇಲೆ ಮೊದಮೊದಲು ಈ ಸಣ್ಣ ಗಂಟುಗಳು ಮೊಲೆತೊಟ್ಟಿನಾಕಾರದಲ್ಲಿ ಆರಂಭವಾಗುತ್ತವೆ. ಇವು, ಸೋಂಕು ಪ್ರಾಣಿಗಳ ಸಂಪರ್ಕ ಪಡೆದ 5–7 ದಿನಗಳೊಳಗೆ ಕಾಣಿಸಿಕೊಳ್ಳುತ್ತವೆ. ಈ ಮೊಲೆತೊಟ್ಟಿನಾಕಾರದ ಸಣ್ಣ ಸಣ್ಣ ಚಾಚುಗಳ ಸುತ್ತ ಇರುವ ಚರ್ಮಭಾಗವು ಕೆಂಪಾಗಿರುತ್ತದೆ. ಕ್ರಮೇಣ ಇವು ದೊಡ್ಡದಾಗತೊಡಗುತ್ತವೆ. ಆ ನಂತರ ಇವು ಕಗ್ಗಂಟುಗಳ ರೂಪವನ್ನು ತಾಳುತ್ತವೆ. ಕೈಗಳ ಮೇಲೆ ಬಿಡಿ ಬಿಡಿಯಾಗಿ ಇರುತ್ತವೆ; ನೋವಿರುವುದಿಲ್ಲ; ಬಿಗಿಯಾಗಿ ಹಿಂಪುಟಿಕವಾಗಿ ಇರುತ್ತವೆ; ನೀಲಿಮಿಶ್ರಿತ ಕೆಂಪು ಬಣ್ಣ. ಇವು ಸುಮಾರು 2–3 ವಾರಗಳಲ್ಲಿ 1–2 ಸೆಮೀಗಳಷ್ಟು ಗಾತ್ರವಾಗುತ್ತವೆ. ಇವು ಕೀವುಗೂಡುವುದಿಲ್ಲ. ಈ ಸೋಂಕಿನಲ್ಲಿ ಕಿಗ್ಗಂಟಿನರೂಪದ ಅಥವಾ ಮೊಲೆತೊಟ್ಟಿನಾಕಾರದ ಹಂತವು ವಿಪರೀತವಾಗಿರುತ್ತದೆ. ಆದ್ದರಿಂದಲೇ ನರಹುಲಿಗಳೇ ಸಾಮಾನ್ಯ. ಈ ರೋಗಲಕ್ಷಣಗಳಿಂದ ಇದನ್ನು ದನದ ಸಿಡುಬಿನಿಂದ ಪ್ರತ್ಯೇಕಿಸಬಹುದು. ಈ ಕಿಗ್ಗಂಟಿನಿಂದಾಗಿ ಸಾಮಾನ್ಯವಾಗಿ ನೋವಿರುವುದಿಲ್ಲ. ಆದರೆ ಆಗಿಂದಾಗ್ಗೆ ಕೆರೆತವನ್ನುಂಟುಮಾಡುತ್ತವೆ. ಕಿಗ್ಗಂಟುಗಳು ಗಟ್ಟಿಯಾಗಿಯೂ, ಬಿಗಿಯಾಗಿಯೂ ಇರುತ್ತವೆ. ಕೆಲವು ವೇಳೆ ಇವು ನೀರ್ಗುಳ್ಳೆಗಳಂತೆ ಕಂಡುಬರುವುದುಂಟು. ಆದರೆ ಇವುಗಳನ್ನು ತೂತುಮಾಡಿ ನೋಡಿದಾಗ ಒಳಗೆ ಯಾವ ರಂಧ್ರವೂ ಕಂಡುಬರುವುದಿಲ್ಲ. ಗುಳ್ಳೆಯ ಒಳಗೆ ಬಹುಪಾಲಿಕೆಗಳಿಂದ ಕೂಡಿದ ಊತಕರಚನೆ ಇರುವುದು. ಈ ರಚನೆಯೇ ಕಿಗ್ಗಂಟುಗಳಿಗೆ ನೀರ್ಗುಳ್ಳೆಯ ಸ್ವರೂಪವನ್ನು ಕೊಟ್ಟಿರುವುದು.

ಈ ಸೋಂಕು ಗಾಯಗಳು ಆಗಿಂದಾಗ್ಗೆ ಕೆರೆತವನ್ನುಂಟುಮಾಡುತ್ತಿರುವುದರಿಂದ ಇತರ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುವುದು. ಇದು ಆವರಿಗೂ ಚಿಂತೆ; ನೋಡುವವರಿಗೂ ಅಸಹ್ಯ.

ಕಿಗ್ಗಂಟುಗಳು ಸಂಪೂರ್ಣವಾಗಿ ಬೆಳೆದನಂತರ ಅವು ಅರೆಗೋಳಾಕಾರವನ್ನು ತಾಳುತ್ತವೆ. ಅನಂತರ ಅವುಗಳ ಮಧ್ಯಭಾಗದಲ್ಲಿ ತಗ್ಗು ತಲೆದೋರುವುದು, ಕೆರೆದು ಕೆರೆದು ದೊಡ್ಡದು ಮಾಡಿಕೊಳ್ಳದಿದ್ದರೆ, ಅವು ಕ್ರಮೇಣ ಅವಷ್ಟಕ್ಕೆ ಆವೇ ವಾಸಿಯಾಗುತ್ತವೆ. ವಾಸಿಯಾಗಲು ಆರಂಭವಾದಂತೆ, ಅರೆಗೋಳಾಕಾರವಿರುವ ಇವು ಸಂಪೂರ್ಣವಾಗಿ ಚಪ್ಪಟೆಯಾಗುತ್ತ ಹೋಗುತ್ತವೆ. ಈ ಚಪ್ಪಟೆ ಗಾಯಗಳನ್ನು ಬೂದುಬಣ್ಣದ ಮೇಲ್ಪರೆಯ ಹೊದಿಕೆ ಮುಚ್ಚಿರುವುದು. ಇವು ಒಡೆದು, ಗಾಯದ ಮೇಲೆ ಮುಚ್ಚಿರುವ ಮೇಲ್ಪರೆಯು ಕಿತ್ತು ಬಂದು ಗಾಯದ ಒಳಗಿನ ರಚನವಸ್ತುವು ಗೋಚರವಾಗುವುದು. ಗಾಯದೊಳಗಿನ ಊತಕವು ಅಧಿಕ ರಕ್ತನಾಳಗಳಿಂದ ಕೂಡಿರು

ವುದು. ಗಾಯಗಳು ಸಂಪೂರ್ಣವಾಗಿ ವಾಸಿಯಾಗಲು 4-6 ವಾರಗಳಷ್ಟಾದರೂ ಬೇಕು. ಗಾಯದ ಕಲೆಗಳೂ ಅವನ್ನು ಕೆರೆದು ದೊಡ್ಡದುಮಾಡಿಕೊಳ್ಳದಿದ್ದರೆ ಎರಡು ವಾರಗಳಲ್ಲೇ ಯಾವ ತೊಂದರೆಯೂ ಇಲ್ಲದೆ ವಾಸಿಯಾಗುತ್ತವೆ. ಆದರೆ ಕೆಲವುವಾರದ ವೇಳೆಗೆ ಉರಿಯೂತಗೊಂಡು ಮೃದುವಾಗುತ್ತವೆ. ಜೊತೆಗೆ ಹಾಲ್ರಸ ನಾಳುರಿತ, ಗ್ರಂಥಿಯುರಿತ ಮತ್ತು ಜ್ವರ ಕಾಣಿಸಿಕೊಳ್ಳುವುದು. ಕೆಲವು ಸಂದರ್ಭಗಳಲ್ಲಿ ಸೋಂಕು ವಾಸಿಯಾದರೂ ಪುನಃ ಪುನಃ ತಲೆದೋರಬಹುದು.

8. ಲೆಪ್ಟೋಸ್ಪೈರಾ ರೋಗ

ಲೆಪ್ಟೋಸ್ಪೈರಾರೋಗ ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ರೋಗಗಳಲ್ಲಿ ಒಂದು. ಇದು ಲೆಪ್ಟೋಸ್ಪೈರಾ ಜೀವಾಣುಗಳಿಂದ ಬರುವ ಒಂದು ಸೋಂಕುರೋಗ. ಮುಖ್ಯವಾಗಿ ಇದು ಇಲಿ, ಹೆಗ್ಗಣ, ಮುಂತಾದ ನಂಶಕ ಪ್ರಾಣಿಗಳ ರೋಗ. ಅಲ್ಲದೆ ವಿವಿಧ ವನ್ಯಪ್ರಾಣಿಗಳಲ್ಲಿ, ಸಾಕುಪ್ರಾಣಿಗಳಲ್ಲಿ ಕಂಡುಬರುತ್ತದೆ. ಇವುಗಳೆಲ್ಲವೂ ಸೋಂಕಿನ ಮೂಲಗಳಾಗಿದ್ದು ಮನುಷ್ಯರಿಗೆ ರೋಗವನ್ನು ಹರಡುತ್ತವೆ. ಲೆಪ್ಟೋಸ್ಪೈರಾರೋಗವು ಸಾಕುಪ್ರಾಣಿಗಳ ಆರೋಗ್ಯದ ದೃಷ್ಟಿಯಿಂದಲೂ, ಪ್ರಾಣಿ ಸಂಪನ್ಮೂಲ ಆದಾಯದ ದೃಷ್ಟಿಯಿಂದಲೂ ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದಲೂ ಬಹುಮುಖ್ಯ.

ಮನುಷ್ಯರಲ್ಲಿ ಲೆಪ್ಟೋಸ್ಪೈರಾ : ಮನುಷ್ಯರ ಲೆಪ್ಟೋಸ್ಪೈರಾ ರೋಗಕ್ಕೆ ಮತ್ತೊಂದು ಹೆಸರು ವೈಲ್ಸ್. ಈ ಹೆಸರು ವಿಶ್ವಾದ್ಯಂತ ಸಾಮಾನ್ಯವಾಗಿ ಬಳಕೆಯಲ್ಲಿದೆ. ಜನರಲ್ಲಿ ಲೆಪ್ಟೋಸ್ಪೈರಾವನ್ನು ಗುರುತಿಸಿದ **ಅಡಾಲ್ಫ್ ವೈಲ್ಸ್** ವಿಜ್ಞಾನಿಯ ಹೆಸರಿನ ಜ್ಞಾಪಕಾರ್ಥವಾಗಿ ಜನರು ಈ ರೋಗಕ್ಕೆ ಕೊಟ್ಟಿರುವ ಹೆಸರು ಇದು. ಅಡಾಲ್ಫ್ ವೈಲ್ಸ್ ಹೈಡಲ್‌ಬರ್ಗ್‌ನಲ್ಲಿ ವೈದ್ಯಶಾಸ್ತ್ರದ ಪ್ರಾಧ್ಯಾಪಕನಾಗಿದ್ದನು. ಆತ ಪ್ರಪ್ರಥಮವಾಗಿ ಕ್ರಿ. ಶ. 1886ರಲ್ಲಿ ಮನುಷ್ಯರಲ್ಲಿ ಲೆಪ್ಟೋಸ್ಪೈರಾ ರೋಗದ ವರ್ಣನೆ ನೀಡಿ, ಇದು ಹೊಸದಾದ ಸೋಂಕುರೋಗ ಎಂದು ಪ್ರತಿಪಾದಿಸಿದನು. **ಗೋಲ್ಡ್‌ಸ್ಮಿತ್**‌ನು ಕ್ರಿ. ಶ. 1887ರಲ್ಲಿ ಮನುಷ್ಯರ ಕಾಮಾಲೆ ಸೋಂಕಿಗೆ ವೈಲ್ಸ್‌ರೋಗ ಎಂಬ ಹೆಸರು ಬಳಸಿದ್ದು ಇದೇ ಮೊಟ್ಟಮೊದಲು. ಅಂದಿನಿಂದ ಇಂದಿನವರೆಗೆ ಜನರ ಲೆಪ್ಟೋಸ್ಪೈರಾ ರೋಗಕ್ಕೆ ವೈಲ್ಸ್‌ರೋಗ ಎಂಬುದಾಗಿ ಉಳಿದಿದೆ.

ವೈಲ್ಸ್‌ನು ಲೆಪ್ಟೋಸ್ಪೈರಾ ರೋಗವನ್ನು ಕಂಡುಹಿಡಿದಾಗಿನಿಂದಲೂ ಅನೇಕ ಕಡೆಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆದಿವೆ, ನಡೆಯುತ್ತಿವೆ. ಅದರ ಬಗ್ಗೆ ಅನೇಕ ಮಂದಿ ವಿಜ್ಞಾನಿಗಳು ಸಂಶೋಧನೆ ನಡೆಸಿದ್ದಾರೆ. ಈ ದಿಸೆಯಲ್ಲಿ ಶ್ರಮಿಸಿದ ಇನಡಾ, ಅಯುಡೋ, ಮೊಗಚಿ ಇವರೇ ಮುಂತಾದವರನ್ನು ನೆನೆಯುಬಹುದು. ಇನವಾ, ಅಯುಡೋ ಹಾಗೂ ಅವರ ಸಂಗಡಿಗರು ಕ್ಯುಷು ಇಂಪೀರಿಯಲ್ ವಿಶ್ವವಿದ್ಯಾನಿಲಯದಲ್ಲಿ ಕ್ರಿ. ಶ. 1914 ರಲ್ಲಿ ಮೊಟ್ಟಮೊದಲಿಗೆ ವೈಲ್ಸ್‌ರೋಗದಿಂದ ನರಳುತ್ತಿರುವ ಮಂದಿಯಿಂದ ರಕ್ತತೆಗೆದು ಗಿನಿಪಿಗ್‌ಗಳಿಗೆ ಕೊಟ್ಟು ಅದರಿಂದ ಸತ್ತ ಪಿಗ್‌ಗಳ ಈಲಿಊತಕಗಳಲ್ಲಿ ಸುರುಳಿ ಜೀವಾಣುಗಳನ್ನು ಕಂಡರು ಮತ್ತು ಇವುಗಳನ್ನು

ಸ್ಪೈರೋಕೀಟ್ ಇಕ್ಟರೋ ಹಿಮರ್ಯಾಜಿಯೇ ಎಂದು ಹೆಸರಿಸಿದರು. ಈ ಜೀವಾಣುಗಳ ಹೆಸರೇ ಇಂದಿನ ಲೆಪ್ಟೋಸ್ಪೈರಾ ಇಕ್ಟರೋ ಹಿಮರಾಜಿಯೆ.

ನಮ್ಮ ದೇಶದಲ್ಲಿ ಪ್ರಥಮಬಾರಿಗೆ ಮನುಷ್ಯರಲ್ಲಿ ವೈಲ್ಸ್‌ರೋಗವನ್ನು ಗುರುತಿಸಿದ್ದು ಕ್ರಿ. ಶ. 1903 ರಲ್ಲಿ. ಈ ಕೀರ್ತಿ **ಡಾ|| ಚೌಧರಿಯವರಿಗೆ** ಸಲ್ಲುತ್ತದೆ. ಇವರು ಅಂಡಮಾನ್ ದ್ವೀಪಗಳಲ್ಲಿ ಪೋರ್ಟ್‌ಬ್ಲೈರ್ ಎಂಬಲ್ಲಿ ಮೊಟ್ಟಮೊದಲಿಗೆ ಮನುಷ್ಯರಲ್ಲಿ ವೈಲ್ಸ್‌ರೋಗವನ್ನು ಗುರುತಿಸಿದರು. ಇವರು ಸುಮಾರು ಹತ್ತು ವರ್ಷಗಳಲ್ಲಿ ಅಂದರೆ ಕ್ರಿ. ಶ. 1892-1903 ರವರೆಗೆ ಸುಮಾರು 588 ರೋಗಿಗಳ ವರದಿ ಮಾಡಿದರು. ಇವರಲ್ಲಿ ಸತ್ತವರ ಸಂಖ್ಯೆ 78 (13.2%). ಆ ನಂತರ ನಮ್ಮ ದೇಶದ ವಿವಿಧಭಾಗಗಳಲ್ಲಿ ಜನರಲ್ಲಿ ಹಾಗೂ ಪ್ರಾಣಿಗಳಲ್ಲಿ ಲೆಪ್ಟೋಸ್ಪೈರಾ ರೋಗದ ವರದಿಗಳು ಬಂದವು.

ರೋಗಕಾರಕಗಳು : ಲೆಪ್ಟೋಸ್ಪೈರಾ ಜೀವಾಣುಗಳು ವೈಲ್ಸ್‌ರೋಗದ ರೋಗಕಾರಕಗಳು. ಇವು ಅತಿಸೂಕ್ಷ್ಮ. ಇವು ಮೈಕ್ರಾನ್ ಅಥವಾ ಅದಕ್ಕಿಂತಲೂ ಕಡಮೆ ಅಳತೆ ದಪ್ಪ, 4-8 ಮೈಕ್ರಾನ್, ಕೆಲವು ವೇಳೆ 20-40 ಮೈಕ್ರಾನ್‌ಗಳವರೆಗೆ ಉದ್ದವೂ ಇರುತ್ತದೆ. ಇವುಗಳನ್ನು ಕಾಳಪರದೆ ಸೂಕ್ಷ್ಮದರ್ಶಿಯಿಂದಲೂ, ವಿಶಿಷ್ಟ ಸಿಲ್ವರ್ ಇಂಪ್ರೆಗ್ನೇಶನ್ ಬಣ್ಣಗಳಿಂದಲೂ ಸ್ಪಷ್ಟವಾಗಿಕಾಣಬಹುದು. ಇವು ತೆಳುವಾಗಿ ವಂಕಿವಂಕಿಯಾಗಿರುತ್ತವೆ.

ಲೆಪ್ಟೋಸ್ಪೈರಾ ಜೀವಾಣುಗಳಲ್ಲಿ ಅನೇಕ ಬಗೆಯ ರಕ್ತಸಾರವಿಧಗಳಿವೆ. ಈ ರಕ್ತಸಾರವಿಧಗಳು ಒಟ್ಟು 130ಕ್ಕಿಂತಲೂ ಮಿಗಿಲಾಗಿವೆ. ಇವುಗಳನ್ನು ಇಕ್ಟರೋ ಹಿಮರ‍್ಯಾಜಿಯೆ, ಕ್ಯಾನಿಕೋಲಾ, ಪ್ರೋಮೋನ ಹೀಗೆ ಒಟ್ಟು 18 ಸೀರೋ ಗುಂಪುಗಳಲ್ಲಿ ವಿಭಾಗಿಸಿವೆ. ಇವುಗಳಲ್ಲಿ ಬಹುಮಟ್ಟಿಗೆ ಜೀವಾಣುಗಳು ಮನುಷ್ಯರಲ್ಲಿ ಲೆಪ್ಟೋಸ್ಪೈರಾ ರೋಗವನ್ನುಂಟುಮಾಡುತ್ತವೆ. ಲೆಪ್ಟೋಸ್ಪೈರೋ ಇಕ್ಟರೋ ಹಿಮರ‍್ಯಾಜಿಯೆ ಜೀವಾಣುಗಳು ಜನರ ವೈಲ್ಸ್ ರೋಗದ ಮುಖ್ಯ ರೋಗಕಾರಕಗಳು. ಇವುಗಳ ಸ್ವಾಭಾವಿಕ ಸೋಂಕು ಕೋಶಾಗಾರಗಳು ಎಂದರೆ ಇಲಿ, ಹೆಗ್ಗಣ ಹಾಗೂ ಮತ್ತಿತರ ದಂಶಕಗಳು ಈ ರೋಗಾಣುಗಳು ಹಂದಿ, ದನ, ಕುದುರೆ, ಮೇಕೆ, ನಾಯಿ ಮುಂತಾದ ಸಾಕುಪ್ರಾಣಿಗಳಲ್ಲಿ ರೋಗವನ್ನುಂಟುಮಾಡುತ್ತವೆ. ಲೆಪ್ಟೋಸ್ಪೈರಾ ಕ್ಯಾನಿಕೋಲಾ ಜೀವಾಣುಗಳು ಸ್ವಾಭಾವಿಕವಾಗಿ ನಾಯಿಗಳಲ್ಲಿರುತ್ತವೆ. ನಾಯಿಗಳು ಈ ಜೀವಾಣುಗಳ ಸ್ವಾಭಾವಿಕ ಸೋಂಕುಕೋಶಾಗಾರಗಳು. ಇವು ಮನುಷ್ಯರಲ್ಲಿ ಕ್ಯಾನಿಕೋಲಾ ಜ್ವರವನ್ನುಂಟುಮಾಡುತ್ತವೆ. ಅಲ್ಲದೆ ಕುರಿ, ದನ, ಕುದುರೆ, ಹಂದಿ ಮುಂತಾದ ಸಾಕುಪ್ರಾಣಿಗಳಲ್ಲೂ ಲೆಪ್ಟೋಸ್ಪೈರಾ ರೋಗವನ್ನುಂಟುಮಾಡುತ್ತವೆ.

ಇತರ ಲೆಪ್ಟೋಸ್ಪೈರಾ ಜೀವಾಣುಗಳು ಹಂದಿ, ದನ, ಕುರಿ, ಕುದುರೆ ಮುಂತಾದ ಸಾಕುಪ್ರಾಣಿಗಳಲ್ಲೂ ಮನುಷ್ಯರಲ್ಲೂ ರೋಗವನ್ನುಂಟುಮಾಡುತ್ತವೆ.

ಸೋಂಕು ಕೋಶಾಗಾರಗಳು : ಪ್ರಾಥಮಿಕವಾಗಿ ಇಲಿ, ಹೆಗ್ಗಣ ಮುಂತಾದ ದಂಶಕಪ್ರಾಣಿಗಳು, ನಾಯಿಗಳಲ್ಲಿ ಲೆಪ್ಟೋಸ್ಪೈರಾ ರೋಗದ ಸೋಂಕು ಮನೆ ಮಾಡಿರುತ್ತದೆ. ಅಲ್ಲದೆ ಕಾಡುಪ್ರಾಣಿಗಳಾದ ನರಿ, ತೋಳ, ಕಾಡುಬೆಕ್ಕು, ಬಾವಲಿ ಮುಂತಾದವೂ ಸಾಕುಪ್ರಾಣಿಗಳಾದ ಹಂದಿ, ದನ, ಕುರಿ, ಮೇಕೆ ಮುಂತಾದುವೂ ಸೋಂಕಿನ ಮೂಲವಾಗಿರುತ್ತವೆ.

ಸೋಂಕು ಪಡೆಯುವ ಮಂದಿ : ಮನುಷ್ಯರಲ್ಲಿ ವೈಲ್ಸ್‌ರೋಗವು ಮುಖ್ಯವಾಗಿ ಒಂದು ಕಾಮಗಾರಿಕಾರೋಗ. ಜನರು ತಮ್ಮ ತಮ್ಮ ವೃತ್ತಿಭಾರದಿಂದ ವೈಲ್ಸ್‌ರೋಗಕ್ಕೆ ಗುರಿಯಾಗುವರು. ಪಶುಪಾಲಕರು, ಪಶುವೈದ್ಯರು, ಕುದುರೆ ಲಾಯಗಳಲ್ಲಿ ಕೆಲಸಮಾಡುವವರೂ, ದನದ ಫಾರ್ಮ್‌ಗಳಲ್ಲಿ ಕೆಲಸಮಾಡುವವರೂ, ಹಂದಿಹಿಂಡಿನಲ್ಲಿ ಕೆಲಸಮಾಡುವವರೂ, ಕಸಾಯಿಗಳೂ, ಮೀನು ಸಂಸ್ಕರಣಾ ಕೇಂದ್ರಗಳಲ್ಲಿ ಕೆಲಸ ಮಾಡುವವರೂ ಮತ್ತು ಇಲಿ, ಹೆಗ್ಗಣ ಮುಂತಾದುವುಗಳ ಕಾಟ ಹೆಚ್ಚಾಗಿರುವ ಸ್ಥಳಗಳಲ್ಲಿ ಕೆಲಸ ಮಾಡುವವರೂ ಇವರೇ ಮೊದಲಾದವರು ಈ ರೋಗಕ್ಕೆ ಬಲಿಯಾಗುವರು. ಇವರೇ ಅಲ್ಲದೆ, ಹೊಲಗದ್ದೆ, ತೋಟಗಳಲ್ಲಿ, ಚರಂಡಿಗಳಲ್ಲಿ ಕೆಲಸ ಮಾಡುವವರೂ ಈ ರೋಗಕ್ಕೆ ಈಡಾಗುವರು. ಜನರುಮೇಲಿನ ಒಂದಲ್ಲ ಒಂದು ಉದ್ಯಮದಲ್ಲಿ ತೊಡಗಿರವುದರಿಂದ, ಅವರು ಈ ರೋಗ ಪಡೆಯುವ ಸಂದರ್ಭಗಳು ಹಲವು ಬಗೆಯವು. ಮನುಷ್ಯರ ಲೆಪ್ಟೋಸ್ಪೈರೋಸಿಸ್ ರೋಗಕ್ಕೆ ವೈಲ್ಸ್‌ರೋಗ ಎಂಬ ಹೆಸರೇ ಅಲ್ಲದೆ ವೈದ್ಯರರೋಗ, ಕೆಮ್ಮೂತ್ರರೋಗ, ಮಣ್ಣುಜ್ವರ, ಹಂದಿ ಹಿಂಡಿನರೋಗ, ಗದ್ದೆಜ್ವರ, ಕಬ್ಬುಕಟಾವುಜ್ವರ ಎಂಬ ಇತರ ಹೆಸರುಗಳೂ ಇವೆ.

ರೋಗಪ್ರಸಾರ : ರೋಗಗ್ರಸ್ತ ಪ್ರಾಣಿಗಳು, ಸೋಂಕು ಹೊತ್ತಿರುವ ಕೋಶಾಗಾರ ಮತ್ತು ವಾಹಕ ಪ್ರಾಣಿಗಳು ತಮ್ಮ ಮೂತ್ರದಲ್ಲಿ ವಿಸರ್ಜಿಸುವ ರೋಗಾಣುಗಳಿಂದ, ಪರಿಸರವನ್ನು ಕಲುಶಿತಗೊಳಿಸುತ್ತವೆ. ನೀರುಕೊಳ, ಕೆರೆ ಕುಂಟೆ, ಈಜುಕೊಳ, ಕೊಟ್ಟಿಗೆ, ಹೊಲಗದ್ದೆ, ತೋಟ ಇವೇ ಮುಂತಾದ ಸ್ಥಳಗಳಲ್ಲಿ ಲೆಪ್ಟೋಸ್ಪೈರಾ ಜೀವಾಣುಗಳ ಸೋಂಕು ಹರಡಲು ಅನುಕೂಲವಾಗಿರುತ್ತವೆ. ಕೊಚ್ಚೆ, ಚರಂಡಿಗಳಲ್ಲಿ ಬಿರುಕುಗಳಲ್ಲಿ ವಾಸಿಸುವ ಇಲಿ ಹೆಗ್ಗಣ ಮುಂತಾದ ದಂಶಕ ಪ್ರಾಣಿಗಳು ಮೂತ್ರದಲ್ಲಿ ರೋಗಾಣುಗಳನ್ನು ವಿಸರ್ಜಿಸುವುದರಿಂದ ಆ ಸ್ಥಳಗಳಲ್ಲಿ ರೋಗಾಣು ಅತಿಯಾಗಿರಲು ಸಾಧ್ಯವಿರುತ್ತದೆ. ಈ ಎಲ್ಲ ಮೂಲಗಳಿಂದ ಜನರಿಗೆ ಸೋಂಕು ಉಂಟಾಗಲು ಅವಕಾಶವಿರುತ್ತದೆ. ರೋಗಾಣುಗಳು ಚರ್ಮ ಹಾಗೂ ಲೋಳ್ಪರೆಗಳ ಮೂಲಕ ಶರೀರವನ್ನು ಪ್ರವೇಶಿಸುತ್ತವೆ. ಬಹುಮಟ್ಟಿಗೆ ಚರ್ಮವೇ

ಮುಖ್ಯ ಸೋಂಕು ಪ್ರವೇಶಾಂಗ. ತರಚಿದ, ಸೀಳಿದ, ಕತ್ತರಿಸಿದ ಹಾಗೂ ಕಡಿತ ಗಾಯಗಳ ಮೂಲಕ ರೋಗಾಣುಗಳು ಶರೀರವನ್ನು ಪ್ರವೇಶಿಸುತ್ತವೆ. ಚರ್ಮ ಗಾಯಗಳಿಲ್ಲದಿದ್ದರೂ, ಚರ್ಮ ಒದ್ದೆಯಾಗಿದ್ದರೂ ಸಾಕು, ರೋಗಾಣುಗಳು ಶರೀರವನ್ನು ಪ್ರವೇಶಿಸಬಲ್ಲವು. ಕೊಟ್ಟಿಗೆಗಳಲ್ಲಿ ಕೆಲಸ ಮಾಡುವವರೂ, ಕೊಟ್ಟಿಗೆಗಳನ್ನು



ಚಿತ್ರ 8. ಲೆಪ್ಟೋಸ್ಪೈರಾ ರೋಗ

ತೊಳೆಯುವಾಗ, ಇಲ್ಲವೇ ಲೆಪ್ಟೋಸ್ಪೈರೋಸಿಸ್ ರೋಗದ ಕಾರಣದಿಂದಾಗಿ ಗರ್ಭಪಾತವಾದ ಪ್ರಾಣಿಗಳನ್ನು ತೊಳೆಯುವಾಗ ನೀರು ಕಣ್ಣಿಗೆ ಹಾರಿ ಸೋಂಕು ಪಡೆಯಬಹುದು. ಸೋಂಕು ಪ್ರಾಣಿಗಳು ಹಾಗೂ ಇಲಿ ಹೆಗ್ಗಣ ಮುಂತಾದುವು, ಮೂತ್ರದಿಂದ ಕಲುಷಿತವಾದ ಕೆರೆ, ಕುಂಟೆ ಹಾಗೂ ಈಜುಕೊಳಗಳಲ್ಲಿ ಈಜುವಾಗ ಇಲ್ಲವೇ ಕೈಕಾಲು ತೊಳೆಯುವಾಗ ಸೋಂಕು ಪಡೆಯಬಹುದು. ಇಲಿಗಳ ಕಡಿತದಿಂದಲೂ, ಹಾಗೂ ಆದೇತಾನೇ ಇಲಿಯನ್ನು ಕಚ್ಚಿದ ಪ್ರಾಣಿಯು ಜನರನ್ನು ಕಚ್ಚಿದಾಗಲೂ

ಸೋಂಕು ಹರಡುತ್ತದೆ. ಕಸಾಯಿಗಳು, ಪ್ರಾಣಿಗಳ ಭಾಗಗಳನ್ನು ಬಿಡಿಸುತ್ತಿರುವಾಗ ತಮ್ಮ ಶ್ಲೇಷ್ಮ ಗಾಯಗಳ ಮೂಲಕ ಸೋಂಕು ಪಡೆಯಬಹುದು.

ಪಶುವೈದ್ಯರು ಆಸ್ಪತ್ರೆಗೆ ಬರುವ ರೋಗಗ್ರಸ್ತ ಪ್ರಾಣಿಗಳ ಚಿಕಿತ್ಸೆ ಮಾಡುವಾಗಲೂ ಆಕಸ್ಮಿಕವಾಗಿ ರೋಗಗ್ರಸ್ತ ಪ್ರಾಣಿಗಳಿಂದ ರೋಗವನ್ನು ಪಡೆಯುವ ಸಾಧ್ಯತೆ ಇದೆ. ಪ್ರಯೋಗಾಲಯಗಳಲ್ಲಿ ಲೆಪ್ಟೋಸ್ಪೈರಾ ಜೀವಾಣುಗಳೊಂದಿಗೆ ಕೆಲಸ ಮಾಡುತ್ತಿರುವಾಗ ಆಕಸ್ಮಿಕವಾಗಿ ಉದಾಹರಣೆಗೆ, ಸಿರಿಂಜಿನ ಸೂಜಿಯು ಕಳಚಿ ಮೈಮೇಲೆ ಬಿದ್ದು ಚರ್ಮಕ್ಕೆ ಚುಚ್ಚಿಕೊಂಡೋ, ಇಲ್ಲವೇ ರೋಗಾಣುಗಳಿರುವ ಪ್ರನಾಳವು ಒಡೆದು ಅದರಲ್ಲಿರುವ ರೋಗಾಣುಗಳು ಕಣ್ಣು ಹಾಗೂ ಮೈಮೇಲೆ ಹಾರಿಯೋ ಅಥವಾ ಪರೀಕ್ಷೆಗಾಗಿ ಪಿಪೆಟ್ಟಿನ ಮೂಲಕ ಮೂತ್ರವನ್ನು ಪ್ರನಾಳದಲ್ಲಿ ಎಳೆದುಕೊಳ್ಳುವಾಗಲೂ, ಆಕಸ್ಮಿಕವಾಗಿ ಬಾಯಿಗೆ ಹೋಗುವುದರಿಂದಲೂ ಸಂಶೋಧಕರೂ ವೈಲ್ಸ್‌ರೋಗವನ್ನು ಪಡೆಯಬಹುದು.

ಇತರ ಎಲ್ಲ ಸಾಕುಪ್ರಾಣಿಗಳಿಗಿಂತಲೂ ಜನರಿಗೆ ಲೆಪ್ಟೋಸ್ಪೈರೋಸಿಸ್ ಹರಡುವುದರಲ್ಲಿ ನಾಯಿಗಳ ಪಾತ್ರ ಹೆಚ್ಚು. ಜನರು ನಾಯಿಗಳೊಂದಿಗೆ ಹೆಚ್ಚಿನ ಸಂಪರ್ಕ ಪಡೆದಿರುತ್ತಾರೆ. ರೋಗಗ್ರಸ್ತ ನಾಯಿಗಳು ಮೂತ್ರದಲ್ಲಿ ರೋಗಾಣುಗಳನ್ನು ವಿಸರ್ಜಿಸಿ ಅಂಗಳವನ್ನು ಕಲುಷಿತಗೊಳಿಸುತ್ತದೆ. ಅಲ್ಲದೆ ಕೆಲವು ನಾಯಿಗಳು ರೋಗದ ಯಾವ ಲಕ್ಷಣಗಳನ್ನು ತೋರ್ಪಡಿಸದೆ, ಆರೋಗ್ಯದಿಂದಿರುವಂತೆಯೇ ಕಂಡುಬಂದು, ಮೂತ್ರದಲ್ಲಿ ಮಾತ್ರ ರೋಗಾಣುಗಳನ್ನು ವಿಸರ್ಜಿಸುವುವು. ಮನೆಗಳಲ್ಲಿ ನಾಯಿಗಳ ಮೂತ್ರವನ್ನು ಒರಸುವಾಗ, ಇಲ್ಲವೇ ನಾಯಿಗಳನ್ನು ಕಟ್ಟಿರುವ ಸ್ಥಳಗಳನ್ನು ತೊಳೆಯುವಾಗ ಜನರು ಸೋಂಕು ಪಡೆಯುವರು.

ರೋಗಲಕ್ಷಣಗಳು : ವೈಲ್ಸ್‌ರೋಗದಿಂದ ನರಳುತ್ತಿರುವ ಜನರಲ್ಲಿ ಕಾಣುವ ರೋಗ ಲಕ್ಷಣಗಳು ವಿವಿಧ ತೆರನವು. ರೋಗಿಗಳಲ್ಲಿ ಇದ್ದಕ್ಕಿದ್ದಂತೆ ಜ್ವರ ಕಾಣಿಸಿಕೊಳ್ಳುವುದು. ರೋಗಿಗಳಿಗೆ 104° Fಗಳವರೆಗೆ ಜ್ವರ ಏರುವುದು. ಜೊತೆಗೆ ಸ್ನಾಯುಗಳ ನೋವು, ಹಸಿವಿಲ್ಲದಿರುವಿಕೆ, ನಿಶ್ಯಕ್ತಿ, ವಾಂತಿ, ಭೇದಿ, ಹೊಟ್ಟೆನೋವು, ಕೆಮ್ಮು, ಎದೆನೋವು, ಮುಂತಾದ ರೋಗಲಕ್ಷಣಗಳು ಕಾಣಿಸಿಕೊಳ್ಳುವುವು. ಕೆಮ್ಮಿದಾಗ ಕಫದಲ್ಲಿ ರಕ್ತ ಬೀಳುವುದು. ಕಣ್ಣು, ಬಾಯಿ, ನಾಲಗೆ ಹಳದಿಬಣ್ಣಕ್ಕೆ ತಿರುಗುವುದು. ಕಾಮಾಲೆಯ ಚಿಹ್ನೆಗಳು ಕಂಡುಬರುತ್ತವೆ. ಕಣ್ಣು ರಕ್ತವಿರುತ್ತದೆ. ಮೂತ್ರಪಿಂಡಗಳ ಉರಿಯೂತವು ಹೆಚ್ಚಾಗಿದ್ದು, ಅತಿಮೂತ್ರ, ಬಾಯಾರಿಕೆ, ಕೆಂಪು ಮೂತ್ರ-ಈ ರೋಗಲಕ್ಷಣಗಳು ಕಂಡುಬರುತ್ತವೆ. ಗರ್ಭಕೋಶದ ತೊಂದರೆಗಳಾದ ಗರ್ಭಪಾತ, ಗರ್ಭದಲ್ಲೆ ಪಿಂಡ ಸಾಯುವಿಕೆ, ಗರ್ಭನಿಲ್ಲದಿರುವಿಕೆ ಮುಂತಾದವೂ, ನರಸಂಬಂಧಿಯ ರೋಗಲಕ್ಷಣಗಳಾದ ಅರೆಪಾರ್ಶ್ವವಾಯು, ನೆಂದುಳುರಿತ, ತಲೆಸುತ್ತು,

ತಲೆನೋವು, ಮಯಕ ಮುಂತಾದ ರೋಗಲಕ್ಷಣಗಳೂ ಕಂಡುಬರುತ್ತವೆ. ರೋಗ ಉಲ್ಬಣಿಸಿದರೆ ಸಾವೂ ಸಂಭವಿಸಬಹುದು.

ಸಾಕುಪ್ರಾಣಿಗಳಲ್ಲಿ : ಸಾಕುಪ್ರಾಣಿಗಳಲ್ಲಿ ಲೆಪ್ಟೋಸ್ಪೈರೋಸಿಸ್ ಆರ್ಥಿಕವಾಗಿ ಒಂದು ಪ್ರಮುಖರೋಗ. ಸಾಕುಪ್ರಾಣಿಗಳಲ್ಲಿ ರೋಗದಿಂದಾಗಿ ಸಂಭವಿಸುವ ತೊಡಕು ಹಾಗೂ ನಷ್ಟಗಳು ಅಪಾರ. ರೋಗಗ್ರಸ್ತ ಹಸುಳೆಗಳಲ್ಲಿ ಶೇಕಡಾ 30ರಷ್ಟರ ವರೆಗೆ ಗರ್ಭಪಾತಗಳಾಗುತ್ತವೆ. ಹಾಲು ಉತ್ಪಾದನೆ ಬಹಳವಾಗಿ ಕಡಮೆಯಾಗುತ್ತದೆ. ರೋಗಗ್ರಸ್ತ ಪ್ರಾಣಿಗಳಲ್ಲಿ ಸಾವೂ ಸಂಭವಿಸುತ್ತದೆ. ದೊಡ್ಡಪ್ರಾಣಿಗಿಂತಲೂ ಕರುಗಳು ಸಾವಿಗೀಡಾಗುವುದು ಬಹು ಹೆಚ್ಚು. ಸಮೀಪದಲ್ಲಿ ಇಟ್ಟಿರುವ ಪ್ರಾಣಿಗಳಲ್ಲಿ ಜಾಡ್ಯವು ನೂರಕ್ಕೆ ನೂರರಷ್ಟು ಕಂಡುಬರುವ ಸಾಧ್ಯತೆ ಇದೆ. ರೋಗದಿಂದ ಚೇತರಿಸಿಕೊಂಡ ಪ್ರಾಣಿಗಳು, ಬಹು ಬಲಹೀನವಾಗುತ್ತವೆ. ಇದೇರೀತಿಯ ತೊಂದರೆ ಹಾಗೂ ನಷ್ಟಗಳು ಹಂದಿ, ಕುರಿ, ಮೇಕೆ ಮುಂತಾದ ಇತರ ಪ್ರಾಣಿಗಳಲ್ಲಿಯೂ ಕಂಡುಬರುತ್ತವೆ. ಈ ಎಲ್ಲ ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿ ಕಂಡುಬರುವ ರೋಗಲಕ್ಷಣಗಳೇ ಕಂಡುಬರುತ್ತವೆ.

ನಮ್ಮ ದೇಶದ ವಿವಿಧರಾಜ್ಯಗಳಲ್ಲಿ ವಿವಿಧ ಪ್ರಾಣಿಗಳಲ್ಲಿ ಈ ರೋಗದ ವರದಿಗಳಿವೆ. ನಮ್ಮದೇಶದಲ್ಲಿ ಈ ರೋಗದಿಂದಾಗಿ ಪ್ರಾಣಿಗಳಲ್ಲಿ ಸಂಭವಿಸುವ ಆರ್ಥಿಕ ನಷ್ಟಗಳ ಬಗ್ಗೆ ಲೆಕ್ಕಹಾಕಿಲ್ಲವಾದರೂ ವಿದೇಶಗಳಲ್ಲಿ ಇದರ ಬಗ್ಗೆ ಮಾಡಿರುವ ಗಣನೆ ನಮಗೊಂದು ಕಲ್ಪನೆ ನೀಡಬಹುದು. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ 1954ರಲ್ಲಿ ದನಗಳ ಲೆಪ್ಟೋಸ್ಪೈರೋಸಿಸ್ ಒಂದರಿಂದಾಗಿಯೇ ಆ ವರ್ಷ 112 ಕೋಟಿ ಡಾಲರುಗಳಷ್ಟು ನಷ್ಟವಾಗಿತ್ತು. ಅಲ್ಲದೆ ರೋಗಗ್ರಸ್ತ ಪ್ರಾಣಿಗಳು ಜನರಿಗೆ ರೋಗವನ್ನು ಹರಡುವ ಸೋಂಕುವಾಹಕಗಳಾಗುವುದು ಗಮನಾರ್ಹ.

ರೋಗನಿಯಂತ್ರಣ : ಜನರಲ್ಲಿ ಲೆಪ್ಟೋಸ್ಪೈರಾ ರೋಗನಿಯಂತ್ರಣೆ ಸ್ವಲ್ಪ ಮಟ್ಟಿಗೆ ಕಷ್ಟಸಾಧ್ಯ ಕೆಲಸವೇ ಎನ್ನಬಹುದು. ಇದಕ್ಕೆ ಕಾರಣ ಈ ರೋಗದ ಸಂಕೀರ್ಣಸ್ವಭಾವ. ಜನರ ಸ್ವಾಭಾವಿಕ ಜೀವನವು ಅವರನ್ನು ಇದರಿಂದ ಸಂಪೂರ್ಣವಾಗಿ ಪಾರುಮಾಡುವುದನ್ನು ಮತ್ತಷ್ಟು ಕ್ಲಿಷ್ಟವಾಗಿಸುತ್ತದೆ. ಆದರೂ ಕೆಲವು ಮುಂಜಾಗ್ರತಾಕ್ರಮಗಳನ್ನು ಅನುಸರಿಸುವುದರಿಂದ ಜನರನ್ನು ಆದಷ್ಟುಮಟ್ಟಿಗೆ ಈ ರೋಗದಿಂದ ತಪ್ಪಿಸಲು ಸಾಧ್ಯವಾದೀತು. ಜನರ ಲೆಪ್ಟೋಸ್ಪೈರೋಸಿಸ್‌ನ ನಿಯಂತ್ರಣವನ್ನು ಮುಖ್ಯವಾಗಿ ಈ ಕೆಳಗಿನ ಕೆಲವು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದರಿಂದ ಸಿದ್ಧಿಸಬಹುದು.

ಸಾಕುಪ್ರಾಣಿಗಳಲ್ಲಿ ರೋಗನಿಯಂತ್ರಣ : ಮನುಷ್ಯರ ಲೆಪ್ಟೋಸ್ಪೈರೋಸಿಸ್‌ಗೆ ಸಾಮಾನ್ಯ ಮೂಲವಾಗಿರುವ ಸಾಕುಪ್ರಾಣಿಗಳಲ್ಲಿ ಲೆಪ್ಟೋಸ್ಪೈರಾರೋಗವನ್ನು

ನಿಯಂತ್ರಿಸುವುದು ಅತಿಮುಖ್ಯ ಕಾರ್ಯ. ಕೊಟ್ಟಿಗೆಯಲ್ಲಿ ಕಟ್ಟಿರುವ ಪ್ರಾಣಿಗಳಿಗೆ ಇಲಿ, ಹೆಗ್ಗಣ ಮುಂತಾದ ದಂಶಕಗಳಿಂದಲೂ ಕಾಡುಪ್ರಾಣಿಗಳಿಂದಲೂ, ನಾಯಿಗಳಿಂದಲೂ ಸೋಂಕು ಹರಡದಂತೆ ಜಾಗರೂಕತೆ ವಹಿಸಬೇಕು. ಕೊಟ್ಟಿಗೆಗಳಲ್ಲಿ ಇಲಿ, ಹೆಗ್ಗಣಗಳ ಪ್ರವೇಶಕ್ಕೆ ಅವಕಾಶವಿರಬಾರದು. ಕೊಟ್ಟಿಗೆಗಳು ಯಾವಾಗಲೂ ಶುಚಿಯಾಗಿರಬೇಕು. ಪ್ರಾಣಿಗಳಿಗೆ ಸದಾ ಶುಚಿಯಾದ ನೀರನ್ನು ಒದಗಿಸಬೇಕು. ಕೊಟ್ಟಿಗೆಗಳನ್ನು ಆಗಿಂದಾಗ್ಗೆ ಸೋಂಕು ನಿವಾರಕ ಅಥವಾ ಶುಚಿಕಾರಕಗಳಿಂದ ತೊಳೆಯುತ್ತಿರಬೇಕು. ಆಗಿಂದಾಗ್ಗೆ ಪ್ರಾಣಿಗಳ ರಕ್ತಪರೀಕ್ಷೆಮಾಡಿಸಿ, ರೋಗಗ್ರಸ್ತ ಪ್ರಾಣಿಗಳನ್ನು ಇತರ ಆರೋಗ್ಯಕರ ಪ್ರಾಣಿಗಳಿಂದ ಬೇರ್ಪಡಿಸಿ ಅವುಗಳಿಗೆ ಚಿಕಿತ್ಸೆ ಕೊಡಿಸಬೇಕು. ಗರ್ಭಪಾತವಾದಾಗ, ಕಂದು, ಮಾಸ ಹಾಗೂ ಸ್ರಾವಗಳ ಮೇಲೆ ಸೋಂಕುನಾಶಕ ಔಷಧಿಗಳನ್ನು ಚಿಮುಕಿಸಿ, ಅವುಗಳನ್ನು ದೂರಸಾಗಿಸಿ ಹೂಳಬೇಕು, ಇಲ್ಲವೇ ಸುಡಬೇಕು. ಗರ್ಭಪಾತವಾದ ಪ್ರಾಣಿಯ ಸಮೀಪದಿಂದ ಆರೋಗ್ಯಕರ ಪ್ರಾಣಿಗಳನ್ನು ದೂರ ಸಾಗಿಸಬೇಕು. ಆ ಸ್ಥಳವನ್ನು ಸೋಂಕುನಾಶಕ ಔಷಧಗಳಿಂದ ಚೆನ್ನಾಗಿ ತೊಳೆಯಬೇಕು. ಈ ಕಾರ್ಯದಲ್ಲಿ ತೊಡಗಿರುವ ಜನರು ಕೈಕಾಲುಗಳಿಗೆ ರಕ್ಷಕಗಳನ್ನು ಧರಿಸಬೇಕು.

ಇಲಿ, ಹೆಗ್ಗಣ ನಿರ್ಮೂಲನೆ : ಬೋನುಗಳನ್ನು ಉಪಯೋಗಿಸಿ ಇಲ್ಲವೇ ವಿಷ ಹಾಗೂ ಹೊಗೆ ಹಾಕುವುದರಿಂದ ಇಲಿ ಹೆಗ್ಗಣಗಳನ್ನು ನಾಶಪಡಿಸಬಹುದು. ಕಟ್ಟಡಗಳಲ್ಲಿ ಇಲಿ ಹೆಗ್ಗಣಗಳು ವಾಸಿಸಲು, ಪ್ರವೇಶಿಸಲು ಅವಕಾಶಕೊಡಬಾರದು.

ನಾಯಿಗಳಲ್ಲಿ ರೋಗನಿಯಂತ್ರಣ: ಇತರ ಎಲ್ಲ ಸಾಕುಪ್ರಾಣಿಗಳಿಗಿಂತಲೂ ಜನರು ಹೆಚ್ಚಿನ ಸಂಪರ್ಕ ಪಡೆದಿರುವುದು ನಾಯಿಗಳೊಂದಿಗೆ. ಮನೆಯಲ್ಲಿ ಸಾಕಿರುವ ನಾಯಿಗಳನ್ನು ಆಗಿಂದಾಗ್ಗೆ ರಕ್ತ ಪರೀಕ್ಷೆಗೆ ಒಳಪಡಿಸುತ್ತಿರಬೇಕು. ರೋಗಗ್ರಸ್ತವೆಂದು ಕಂಡುಬಂದ ಪ್ರಾಣಿಗಳಿಗೆ ಚಿಕಿತ್ಸೆ ಕೊಡಿಸಬೇಕು. ಇಲ್ಲದಿದ್ದಲ್ಲಿ ಅದನ್ನು ಸಾಯಿಸಬೇಕು. ನಾಯಿಕಟ್ಟಿರುವ ಸ್ಥಳಗಳನ್ನು ಶುದ್ಧೀಕಾರಕಗಳನ್ನು ಒಳಸಿ ಚೆನ್ನಾಗಿತೊಳೆಯುತ್ತಿರಬೇಕು. ನಾಯಿಗಳು ಮನೆಯೊಳಗೆ ಮೂತ್ರ ವಿಸರ್ಜಿಸಿದರೆ ಅವನ್ನು ಸೋಂಕುನಿವಾರಕ ಔಷಧದಲ್ಲಿ ಅದ್ದಿದ ಬಟ್ಟೆಯಿಂದ ಒರೆಸಬೇಕು. ಬೀದಿನಾಯಿಗಳು ಸಿಕ್ಕಿದೆಡೆಯಲ್ಲೇ ಮೂತ್ರ ವಿಸರ್ಜನೆಮಾಡುತ್ತ ಸೋಂಕು ಕಲುಷಿತ ಮಾಡುತ್ತವೆ. ಇವು ಸಾಕುನಾಯಿಗಳಿಗೂ, ಇತರ ಸಾಕುಪ್ರಾಣಿಗಳಿಗೂ ಮನುಷ್ಯನಿಗೂ ಸೋಂಕನ್ನು ಹರಡುತ್ತವೆ. ಆದ್ದರಿಂದ ಬೀದಿನಾಯಿಗಳ ನಿರ್ಮೂಲನೆ ಒಂದು ಉತ್ತಮಕ್ರಮ.

ಜನರ ಜಾಗರೂಕತೆ: ಕಸಾಯಿಖಾನೆ, ಫಾರಂಗಳು ಹಾಗೂ ಕೊಟ್ಟಿಗೆಗಳಲ್ಲಿ ಒಳಚರಂಡಿ ಇವೇ ಮುಂತಾದ ಸೋಂಕಿನ ಆಗರವಾಗಿರಬಹುದಾದ ಸ್ಥಳಗಳಲ್ಲಿ

ಕೆಲಸಮಾಡುವವರು ಹೆಚ್ಚು ಜಾಗರೂಕತೆ ವಹಿಸಬೇಕು. ಕೈಕಾಲುಗಳ ಮೇಲಿನ ಗಾಯಗಳನ್ನು ಮುಚ್ಚಿರಬೇಕು. ಅದಕ್ಕಾಗಿ ಕೈಕಾಲುಗಳಿಗೆ ರಕ್ಷಕಗಳನ್ನು ಧರಿಸುವುದು ಉತ್ತಮ.

ಈಜುಕೊಳಗಳನ್ನು ಆಗಿಂದಾಗ್ಗೆ ನೀರು ಖಾಲಿಮಾಡಿ ಚೆನ್ನಾಗಿ ಉಜ್ಜಿ ಚೊಕ್ಕಟಮಾಡಿ ಹೊಸ ನೀರನ್ನು ತುಂಬಿಸುತ್ತಿರಬೇಕು. ನೀರನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷಿಸುತ್ತಿರಬೇಕು. ಸಿಕ್ಕಿದ ಕೆರೆ, ಕುಂಟೆಗಳಲ್ಲಿ ಈಜಬಾರದು.

9. ಕ್ಯೂಜ್ವರ

ಕ್ಯೂಜ್ವರ ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ, ಮೂಲತಃ ಪ್ರಾಣಿಗಳ ಒಂದು 'ರಿಕೆಟ್ಸಿಯಾ' ರೋಗ. ಇದರ ಪೂರ್ವಚರಿತ್ರೆ ಬಲು ಸ್ವಾರಸ್ಯಕರ. ಇದು ಮೊದಲಿಗೆ ಕಾಣಿಸಿಕೊಂಡಿದ್ದೂ, ವೈದ್ಯರು ಮತ್ತು ಸಂಶೋಧಕರನ್ನು ಆಕರ್ಷಿಸಿದ್ದೂ ಕ್ರಿ. ಶ. 1935ರಲ್ಲಿ. ಪ್ರಥಮಬಾರಿಗೆ ಕ್ರಿ. ಶ. 1935ರಲ್ಲಿ ಬ್ರಿಸ್‌ಬೇನಿನ (ಆಸ್ಟ್ರೇಲಿಯ)ಕಸಾಯಿಖಾನೆಯೊಂದರಲ್ಲಿ ಕೆಲಸಮಾಡುತ್ತಿದ್ದ ಮಂದಿಯಲ್ಲಿ ಇದು ಮೊದಲು ಕಾಣಿಸಿಕೊಂಡಿತು. ಅಪರಿಚಿತವಾದ ಈ ರೋಗವನ್ನು ಅರಿಯಲು ಕ್ವೀನ್ಸ್‌ಲ್ಯಾಂಡಿನ ಆರೋಗ್ಯ ಇಲಾಖೆಯ **ಬರ್ನೆಟ್** ಮತ್ತು ಇತರ ಕೆಲವುಮಂದಿ ಸಂಶೋಧನೆಗೆ ಇಳಿದರು. ಆದರೆ ಈ ರೋಗ ಅಪರಿಚಿತವಾಗಿಯೇ ಉಳಿಯಿತು. ಕೊನೆಗೆ ಅವರು ಸಮಸ್ಯೆಯಾಗಿಯೇ ಉಳಿದ ಈ ಅಪರಿಚಿತ ರೋಗವನ್ನೇ ಕ್ಯೂಜ್ವರ ಎಂದು ಕರೆದರು. **Q** ಎಂಬ ಅಕ್ಷರ ಇಲ್ಲಿ ಪ್ರಶ್ನಾರ್ಥಕವಾದ ಚಿಹ್ನೆಯ ಸೂಚಿ. ಹೆಸರು ಹಾಗೆಯೇ ಉಳಿಯಿತು. ಅದರ ಮೇಲೆ ಸಂಶೋಧನೆಗಳು ಮಾತ್ರ ಮುಂದುವರಿದವು. ಡೆರಿಕ್ ಕ್ರಿ. ಶ. 1937ರಲ್ಲಿ ಪ್ರಪ್ರಥಮವಾಗಿ ಇದು ಒಂದು ಬೇರೆಯೇ ರೋಗ ಎಂದು ವರ್ಣಿಸಿದ. ಅನಂತರದ ಎರಡನೆಯ ವರದಿ **ಹೆಸ್‌ಡಾರ್ಫರ್** ಮತ್ತು **ಡುಫಲೋ** ಅವರದು. ಇವರುಗಳು ಕ್ರಿ. ಶ 1941ರಲ್ಲಿ ಮೊಂಟಾನದಲ್ಲಿ ಸ್ವಾಭಾವಿಕ ರೋಗ ಪರಿಸ್ಥಿತಿಗಳನ್ನು ವರದಿಮಾಡಿದರು. ಅಂದಿನಿಂದ ಪ್ರಪಂಚದಲ್ಲಿ ವಿವಿಧಕಡೆಗಳಲ್ಲಿ ಎಲ್ಲೆಡೆಯಿಂದ ಹೊಸಹೊಸ ವರದಿಗಳು ಬರತೊಡಗಿದವು.

ನಮ್ಮ ದೇಶದಲ್ಲಿ ಮೊದಲಬಾರಿಗೆ **ಪಾಸ್ರಿಚ** ಕ್ರಿ. ಶ. 1941ರಲ್ಲಿ ಕ್ಯೂಜ್ವರ ಇರುವುದರ ಬಗ್ಗೆ ಶಂಕಿಸಿದ. ಕ್ರಿ. ಶ. 1953ರ ವೇಳೆಗೆ ನಮ್ಮ ದೇಶದಲ್ಲೂ ಕ್ಯೂಜ್ವರವಿರುವುದು ಸ್ಥಿರಪಟ್ಟಿತು. ಆಗಿನಿಂದ ನಮ್ಮ ದೇಶದಲ್ಲಿ ವಿವಿಧ ಕಡೆಗಳಿಂದ ಕ್ಯೂಜ್ವರದ ವರದಿಗಳು ಬರತೊಡಗಿವೆ. ದನ, ಕುರಿ, ಮೇಕೆ, ಎಮ್ಮೆ, ನಾಯಿ ಮುಂತಾದ ಪ್ರಾಣಿಗಳ ರಕ್ತವನ್ನು ಪರೀಕ್ಷಿಸಿ ರೋಗದ ಅಸ್ತಿತ್ವವನ್ನು ಕಂಡುಹಿಡಿಯಲಾಗಿದೆ.

ಕ್ಯೂಜ್ವರ, ಜನರಲ್ಲಿ ಒಂದು ಔದ್ಯಮಿಕರೋಗ. ಜನರು ಸ್ವಾಭಾವಿಕವಾಗಿಯೇ ತಂತಮ್ಮ ವೃತ್ತಿ, ಕೆಲಸಕಾರ್ಯಗಳಿಂದಲೇ ಇದನ್ನು ಪಡೆಯುತ್ತಾರೆ. ಡೈರಿಯಲ್ಲಿ ಕೆಲಸಮಾಡುವವರೂ, ಜಾನುವಾರುಗಳೊಂದಿಗೆ ಕೆಲಸಮಾಡುವವರೂ, ಕುರಿಕಾಯುವವರೂ, ಕುರಿಉಣ್ಣೆ ಕತ್ತರಿಸುವವರೂ, ಕಸಾಯಿಖಾನೆಗಳಲ್ಲಿ ಕೆಲಸಮಾಡುವವರೂ,


ಪ್ರಾಣಿವಸ್ತುಗಳನ್ನು ಸಂಸ್ಕರಿಸುವ ಉದ್ಯೋಗಗಳಲ್ಲಿ ತೊಡಗಿರುವವರೂ, ಪಶು ವೈದ್ಯರೂ, ಪ್ರಯೋಗಾಲಯಗಳಲ್ಲಿ ಕೆಲಸಮಾಡುವವರೂ ಪ್ರಾಣಿಗಳ ಕ್ಯೂಜ್ವರದ ಅಂಟಿಗೆ ಈಡಾಗುತ್ತಾರೆ. ಇವರು ಪ್ರಾಣಿಗಳ ಹಾಗೂ ಪ್ರಾಣಿವಸ್ತುಗಳ ಮೂಲಕ ಹೆಚ್ಚಾಗಿ ರೋಗಾಣುಗಳ ಸಂಪರ್ಕಕ್ಕೆ ಬರುವ ಅವಕಾಶವಿರುವುದು. ಇವರೇ ಅಲ್ಲದೆ, ಇತರರೂ ಸಹ ಸೋಂಕುಪ್ರಾಣಿಗಳ ಹಾಲು ಕುಡಿಯುವುದರಿಂದ ಕ್ಯೂಜ್ವರವನ್ನು ಪಡೆಯಬಹುದು. ಆದ್ದರಿಂದ ಜನಾರೋಗ್ಯದ ದೃಷ್ಟಿಯಿಂದ ಇದು ಬಹುಮುಖ್ಯವಾದ ರೋಗ.

ರೋಗಕಾರಕಗಳು : ಕ್ಯೂಜ್ವರವು ಕಾಕ್ಸಿಯೆಲ್ಲ ಬರ್ನೆಟ ಜೀವಾಣುಗಳಿಂದ ಬರುತ್ತದೆ. ಕ್ಯೂಜ್ವರದ ರೋಗಕಾರಕಗಳನ್ನು ಮೊದಲಿಗೆ ರಿಕೆಟ್ಸಿಯ ಗುಂಪಿನಲ್ಲಿ ಸೇರಿಸಿ, ಅವುಗಳಿಗೆ ರಿಕೆಟ್ಸಿಯ ಬರ್ನೆಟಿ ಎಂಬುದಾಗಿ ಹೆಸರಿಸಲಾಗಿತ್ತು. ಆದರೆ ಇದು ಇತರೇ ರಿಕೆಟ್ಸಿಯಾಗಳಿಂದ ಬಹುರೀತಿಯಲ್ಲಿ ವ್ಯತ್ಯಾಸವಾಗಿದೆ. ಆದುದರಿಂದ ಇದನ್ನು ಕಾಕ್ಸಿಯೆಲ್ಲ ಎಂಬ ಗುಂಪಿನಲ್ಲಿ ಸೇರಿಸಲಾಗಿದೆ. ಈ ರೋಗಕಾರಕವನ್ನು ಗುರುತಿಸಿದ ಕಾಕ್ಸ್ ಎಂಬಾತನ ಗೌರವಾರ್ಥ ಈ ಹೆಸರನ್ನು ಕೊಟ್ಟಿದೆ. ಈ ಜೀವಾಣುಗಳು ನೋಡಲು ಬಹುಸೂಕ್ಷ್ಮ. ಆದರೆ ಸಾಮಾನ್ಯವಾದ ಜೀವನಾಶಕ ವಸ್ತುಗಳಿಂದ ಸುಲಭವಾಗಿ ನಾಶಹೊಂದುವುದಿಲ್ಲ.

ಸೋಂಕು ಕೋಶಾಗಾರಗಳು : ಹೆಗ್ಗಣಗಳು ಕ್ಯೂಜ್ವರದ ಮುಖ್ಯ ಸೋಂಕು ಕೋಶಾಗಾರಗಳು. ಇವಲ್ಲದೆ, ಪೊದೆಗಳಲ್ಲಿರುವ ಕೆಲವು ಇತರೇ ವಂಶಕ ಪ್ರಾಣಿಗಳೂ ಕೂಡಾ ಕ್ಯೂಜ್ವರದ ಸೋಂಕು ಕೋಶಾಗಾರಗಳಾಗಿರುತ್ತವೆ. ಇವುಗಳಲ್ಲಿ ರೋಗವು ಸೌಮ್ಯರೀತಿಯಲ್ಲಿ ಗುಪ್ತವಾಗಿರುತ್ತದೆ. ಮನುಷ್ಯರಿಗೆ ಮುಖ್ಯವಾಗಿ ಸಂಪರ್ಕವಿರುವ ಸೋಂಕು ಕೋಶಾಗಾರಗಳೆಂದರೆ ದನ ಮತ್ತು ಕುರಿ.

ರೋಗ ಪ್ರಸಾರ : ಮನುಷ್ಯರು ಪ್ರಾಣಿಗಳಿಂದ ನೇರವಾಗಿಯೋ ಇಲ್ಲ ಪರೋಕ್ಷವಾಗಿಯೋ ರೋಗವನ್ನು ಪಡೆಯುತ್ತಾರೆ. ಸೋಂಕುಪ್ರಾಣಿಗಳು ತಮ್ಮ ಸ್ರಾವ ಹಾಗೂ ವಿಸರ್ಜನೆಗಳಲ್ಲಿ ಬಹುವಾಗಿ ರೋಗಾಣುಗಳನ್ನು ವಿಸರ್ಜಿಸುತ್ತ ಇರುತ್ತವೆ. ರೋಗಗ್ರಸ್ತ ಪ್ರಾಣಿಗಳು ಕರೆಯುವ ಹಾಲಿನಲ್ಲಿಯೂ ರೋಗಾಣುಗಳು ಕಂಡುಬರುತ್ತವೆ. ಸೋಂಕುಪ್ರಾಣಿಗಳು ಈಯುವ ಸಮಯಗಳಲ್ಲಿ, ಮಾಸು ಮತ್ತು ಗರ್ಭದ್ರವಗಳಲ್ಲಿ ರೋಗಾಣುಗಳು ಅಧಿಕ ಪ್ರಮಾಣದಲ್ಲಿ ತುಂಬಿರುತ್ತವೆ. ಇವುಗಳ ನೇರ ಸಂಪರ್ಕದಿಂದ ಡೈರಿಯಲ್ಲಿ ಕೆಲಸ ಮಾಡುತ್ತಿರುವ ಮಂದಿ ಇವನ್ನು ಪಡೆಯುವ ಸಂಭವವಿರುತ್ತದೆ. ಮುಖ್ಯವಾಗಿ ರೋಗಾಣು ಮಿಶ್ರಿತ ಗಾಳಿಯ ಸೇವನೆಯಿಂದಾಗಿ ಮನುಷ್ಯರಲ್ಲಿ ವ್ಯಾಧಿಯು ಕಂಡುಬರುತ್ತದೆ. ತರಚಿದ ಚರ್ಮ ಹಾಗೂ ಲೋಳ್ಪರೆಗಳ ಮೂಲಕ ರೋಗಾಣುಗಳು ಸುಲಭವಾಗಿ ಶರೀರವನ್ನು ಪ್ರವೇಶಿಸುತ್ತವೆ. ಸೋಂಕು ಕಲುಷಿತ ನೀರನ್ನು ಕುಡಿಯುವುದರಿಂದಲೂ ಜನರಿಗೆ ರೋಗ ಹರಡುವ ಸಾಧ್ಯತೆ

ಇದೆ. ರೋಗಾಣುಗಳು ಸುಲಭವಾಗಿ ನಾಶಹೊಂದುವುದಿಲ್ಲ; ಹೊರಪರಿಸರದಲ್ಲಿ ದೀರ್ಘಕಾಲ ಬದುಕಿರುತ್ತವೆ. ಸೋಂಕುಪ್ರಾಣಿಗಳ ಚರ್ಮ, ಕೊಟ್ಟಿಗೆಯಲ್ಲಿನ ಹುಲ್ಲು ಇವೇ ಮುಂತಾದವುಗಳಿಂದ ಸೋಂಕು ಹೆಚ್ಚಾಗಿ ಪ್ರಸಾರಗೊಳ್ಳುತ್ತದೆ.



ಚಿತ್ರ 9. ಕ್ಯೂ ಜ್ವರ ಪ್ರಸಾರದ ರೇಖಾಚಿತ್ರ

ಸೋಂಕುಪ್ರಾಣಿಗಳಿಂದ ವಿಸರ್ಜನೆಗೊಳ್ಳುತ್ತಿರುವ ರೋಗಾಣುಗಳು ಪರಿಸರದ ಗಾಳಿಯನ್ನು ಕಲುಷಿತಗೊಳಿಸುತ್ತವೆ. ಕೊಟ್ಟಿಗೆಗಳಲ್ಲಿ ಅಥವಾ ಪ್ರಾಣಿಗಳೊಂದಿಗೆ ಕೆಲಸ ಮಾಡುತ್ತಿರುವವರು, ಅಂತಹ ಗಾಳಿಯ ಸೇವನೆಯಿಂದ ಸೋಂಕು ಪಡೆಯುತ್ತಾರೆ. ರೋಗಗ್ರಸ್ತ ಪ್ರಾಣಿಗಳ ಹಾಲು ಹಾಗೂ ಮಾಂಸದ ಸೇವನೆಯಿಂದ ಜನರು ಕ್ಯೂಜ್ವರ ಸೋಂಕನ್ನು ಪಡೆಯುವ ಸಾಧ್ಯತೆ ಇದೆ.

ರೋಗಲಕ್ಷಣಗಳು : ಕ್ಯೂಜ್ವರದಿಂದ ನರಳುತ್ತಿರುವ ರೋಗಿಗಳಲ್ಲಿ ಹಲವಾರು ಬಗೆಯ ರೋಗ ಲಕ್ಷಣಗಳು ಪ್ರಕಟಗೊಳ್ಳುತ್ತವೆ. ಸೋಂಕು ಉಂಟಾದ ಸುಮಾರು 19 ದಿನಗಳಲ್ಲಿ ರೋಗಿಗಳಲ್ಲಿ ಜ್ವರ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಜ್ವರದ

ಜೊತೆಗೆ, ತಲೆನೋವು, ಚಳಿ, ಸುಸ್ತು, ಕೀಲುನೋವು, ಹಸಿವಿಲ್ಲದಿರುವಿಕೆ, ಕಣ್ಣು ನೋವು, ಕಣ್ಣಿಂದ ನೀರು ಸುರಿಯುತ್ತಿರುವಿಕೆ, ಎದೆನೋವು, ಕೆಮ್ಮು, ವಾಂತಿ, ಭೇದಿ ಇವೇ ಮುಂತಾದ ರೋಗಲಕ್ಷಣಗಳೂ ಕಾಣಿಸತೊಡಗುತ್ತವೆ. ರೋಗಿಗಳಲ್ಲಿ ಎಲ್ಲಕ್ಕಿಂತ ತಲೆನೋವು ಹೆಚ್ಚು ಪ್ರಧಾನವಾಗಿರುತ್ತದೆ. ತಲೆನೋವು ಸಾಮಾನ್ಯವಾಗಿ ಮೊದಲಿಗೆ ಹಣೆ ಹಾಗೂ ಹಿಂದಲೆ ಭಾಗಗಳಲ್ಲಿ ಆರಂಭವಾಗಿ ನೋವು ವಿಪರೀತವಾಗಿರುತ್ತದೆ. ಕ್ರಮೇಣ ಈ ಭಾಗಗಳಿಂದ ತಲೆಯ ಎಲ್ಲಕಡೆಗಳಲ್ಲೂ ನೋವು ಕಾಣಿಸಿಕೊಳ್ಳುತ್ತದೆ. ಜ್ವರ ಪ್ರಾರಂಭವಾದ ಎರಡು ಮೂರು ದಿನಗಳಲ್ಲಿ ಜ್ವರವು 39-40° C ಗಳಿಗೆ ಏರುತ್ತದೆ. ಅನಂತರ ಜ್ವರ ಕ್ರಮೇಣ ಇಳಿಯಬಹುದು, ಇಲ್ಲ ಇದೇ ಮಟ್ಟದಲ್ಲೇ ಮೂರು ವಾರಗಳವರೆಗೆ ಮುಂದುವರೆಯಬಹುದು. ಕೆಲವು ವೇಳೆ ರೋಗವು ಹೆಚ್ಚು ವಿಕೋಪಕ್ಕೆ ತಿರುಗಿ, ಸಾವು ಸಂಭವಿಸಬಹುದು. ಜ್ವರದ ಒಂದು ವೈಶಿಷ್ಟ್ಯವೆಂದರೆ ಬಿಟ್ಟುಬಿಟ್ಟು ಬರುವುದು. ರೋಗಿಗಳು ರಾತ್ರಿಯ ವೇಳೆಯಲ್ಲಿ ವಿಪರೀತವಾಗಿ ಬೆವರುತ್ತಾರೆ. ಅದರಲ್ಲೂ ವಿಶೇಷವಾಗಿ ರೋಗದಿಂದ ಚೇತರಿಸಿಕೊಳ್ಳುವ ಕಾಲದಲ್ಲಿ ಬೆವರಿಕೆ ಹೆಚ್ಚು.

ಕ್ಯೂಜ್ವರದ ರೋಗಿಗಳಲ್ಲಿ ಕಾಣಿಸಿಕೊಳ್ಳುವ ರೋಗಲಕ್ಷಣಗಳ ಆಧಾರದಮೇಲೆ ಕ್ಯೂಜ್ವರವನ್ನು ಈ ಕೆಳಗಿನ ವಿವಿಧಸ್ವರೂಪಗಳಲ್ಲಿ ಗುರುತಿಸಬಹುದು.

ನಂಜಿನ ಸ್ವರೂಪ : ಈ ಸ್ವರೂಪದಲ್ಲಿ ರೋಗಿಗಳಲ್ಲಿ ಸೋಂಕು ಹೆಚ್ಚು ತೀವ್ರರೂಪದಲ್ಲಿರುತ್ತದೆ. ರಕ್ತದಲ್ಲಿ ವಿಷಾಣುಗಳ ವೃದ್ಧಿಯಾಗಿ ರಕ್ತ ನಂಜಾಗುತ್ತದೆ. ವಿಪರೀತಜ್ವರ, ನಾಲಿಗೆ ಒಣಗುವಿಕೆ, ಮಾಂದ್ಯತೆ, ಇವೇ ಮುಂತಾದ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಈ ರೋಗಸ್ವರೂಪವು 4-6 ವಾರಗಳವರೆಗೆ ಇರುತ್ತದೆ.

ನರಸಂಬಂಧಿ ಸ್ವರೂಪ: ಈ ಸ್ವರೂಪದಲ್ಲಿ ನರಮಂಡಲಕ್ಕೆ ಸಂಬಂಧಿಸಿದ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಸ್ವರೂಪ ಬಹಳ ಕಾಲದವರೆಗೆ ಇರಬಹುದು ಮತ್ತು ಪುನಃ ಪುನಃ ಮರುಕಳಿಸುತ್ತಿರಬಹುದು. ಕೆಲವು ವೇಳೆ ಆಗಿಂದಾಗ್ಗೆ ಜ್ವರವೂ ಕೂಡಾ ಕಾಣಿಸಿ ಕೊಳ್ಳುತ್ತಿರುತ್ತದೆ. ಜೀವಾಣುಗಳು ಮಿದುಳು ಬೆನ್ನುಹುರಿಯ ದ್ರವದಲ್ಲಿ ಕಾಣಿಸಿಕೊಳ್ಳಬಹುದು.

ಹುಸಿಬ್ರುಸೆಲ್ಲರೋಗಸ್ವರೂಪ : ಈ ಸ್ವರೂಪದಲ್ಲಿ ಕಂಡು ಬರುವ ರೋಗ ಲಕ್ಷಣಗಳು ಬ್ರುಸೆಲ್ಲರೋಗ ಲಕ್ಷಣಗಳಂತೆಯೇ ಇರುತ್ತವೆ. ತರಂಗ ತರಂಗವಾಗಿ ಜ್ವರವು ಏರಿಳಿತದಲ್ಲಿ ಬಹಳಕಾಲದವರೆಗೆ ಕಾಣಿಸಿಕೊಳ್ಳುತ್ತಿರುತ್ತದೆ. ಬ್ರುಸೆಲ್ಲರೋಗದಲ್ಲಿ ಕಂಡುಬರುವಂತೆಯೇ ಕ್ಯೂಜ್ವರದ ಈ ಸ್ವರೂಪದಲ್ಲಿಯೂ ರೋಗಿಗಳಲ್ಲಿ ವಿಪರೀತವಾಗಿ ಬೆವರು ಸುರಿಯುತ್ತಿರುತ್ತದೆ.

ಸುಪ್ತ ಅಥವಾ ರೋಗ ಲಕ್ಷಣರಹಿತ ಸ್ವರೂಪ: ಈ ಸ್ವರೂಪದಲ್ಲಿ ರೋಗಿಗಳಲ್ಲಿ ರೋಗದ ಯಾವುದೇ ರೀತಿಯ ಲಕ್ಷಣಗಳು ಪ್ರಕಟಗೊಳ್ಳುವುದಿಲ್ಲ. ಇಂತಹ ರೋಗಿಗಳಲ್ಲಿ ರೋಗವನ್ನು ಪತ್ತೆ ಮಾಡುವುದು ಕಷ್ಟ. ಆದರೂ ಪ್ರಯೋಗಾಲಯದ ಪರೀಕ್ಷೆಗಳಿಂದ ರೋಗಿಗಳಲ್ಲಿ ರೋಗವನ್ನು ಪತ್ತೆಹಚ್ಚಬಹುದು. ಕ್ಯೂಜ್ವರದ ಈ ಸ್ವರೂಪವು ಒಂದು ಸ್ಥಳಿಕವ್ಯಾಧಿಯಾಗಿ ಜನ ಸಮುದಾಯದಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯ. ಈ ಸ್ವರೂಪದಲ್ಲಿ ಪುಪ್ಪುಸಉರಿತ, ಗುಂಡಿಗೆಯುರಿತ ಇವೇ ಮುಂತಾದ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಸ್ವರೂಪದ ರೋಗವು ಮರಣಾಂತಿಕವಾಗಿ ಪರಿಣಮಿಸಬಹುದು. ಒಂದು ವೇಳೆ ಗುಣಮುಖ ಕಂಡುಬಂದರೂ ವಾಸಿಯಾಗಲು ಬಹಳ ಕಾಲ ಹಿಡಿಯುತ್ತದೆ.

ತೀವ್ರ ಪುಪ್ಪುಸುರಿತ ಸ್ವರೂಪ: ಈ ರೋಗ ಸ್ವರೂಪದಲ್ಲಿ ಸೋಂಕು ತಗುಲಿದ ಪುಪ್ಪುಸ ಭಾಗಗಳಲ್ಲಿ ಅನೇಕ ಸಣ್ಣ ಸಣ್ಣ ಉರಿಯೂತ ಬಿಂದುಗಳೂ ನೀರುಬ್ಬಟೆಗಳೂ ಕಾಣಿಸಿಕೊಳ್ಳುತ್ತವೆ. ಇದು ಈ ಸ್ವರೂಪದ ಒಂದು ವಿಶಿಷ್ಟ ಲಕ್ಷಣ. ಅಧಿಕಜ್ವರ, ದಮ್ಮು, ಕೆಮ್ಮು, ಕೆಮ್ಮಿದಾಗ ಬಾಯಿಂದ ತಿಳಿಗೆಂಪಿನ ಕಫ ಹೊರಬರುವುದು ಇವು ರೋಗಿಗಳಲ್ಲಿ ಕಂಡುಬರುವ ರೋಗಲಕ್ಷಣಗಳು. ಕಫದಲ್ಲಿ ಅಧಿಕ ಪ್ರಮಾಣದಲ್ಲಿ ರೋಗಾಣುಗಳು ವಿಸರ್ಜನೆಗೊಳ್ಳಬಹುದು. ಕೆಲವು ವೇಳೆ ರೋಗದ ವಿಶಿಷ್ಟ ಲಕ್ಷಣಗಳು ಕಾಣಿಸಿಕೊಳ್ಳುವ ಮೊದಲೇ, ಕೆಲವೇ ದಿನಗಳಲ್ಲಿ ಸಾವು ಸಂಭವಿಸಬಹುದು. ಸೋಂಕು ಅಷ್ಟು ತೀವ್ರ ರೂಪಕ್ಕೆ ತಿರುಗದಿದ್ದಲ್ಲಿ ಖಾಯಿಲೆಯು ಎರಡು ಮೂರು ದಿನಗಳಲ್ಲೇ ವಾಸಿಯಾಗಬಹುದು, ಇಲ್ಲವೇ ರೋಗವು ಚೆನ್ನಾಗಿ ಬೇರೂರಿ ದೀರ್ಘಾವಧಿ ಸೋಂಕಾಗಿ ಆಗಿಂದಾಗ್ಗೆ ಮರುಕಳಿಸುತ್ತಿರಬಹುದು.

ರೋಗನಿಯಂತ್ರಣ : ಕ್ಯೂಜ್ವರದ ರೋಗ ನಿಯಂತ್ರಣಾಕಾರ್ಯದಲ್ಲಿ ವೈದ್ಯಕೀಯ ಹಾಗೂ ಪಶುವೈದ್ಯಕೀಯರ ಸಕ್ರಿಯಪಾತ್ರ ಅವಶ್ಯಕ. ಜನರ ಕ್ಯೂಜ್ವರಕ್ಕೆ ಪ್ರಾಣಿಗಳು ಮೂಲ ಕಾರಣವಾದುದರಿಂದ, ಮೊದಲು ಇವುಗಳಲ್ಲಿ ಈ ರೋಗವನ್ನು ನಿಯಂತ್ರಿಸುವುದು ಅವಶ್ಯಕ. ದನ, ಕುರಿ, ಇವು ಜನರ ಕ್ಯೂಜ್ವರ ಸೋಂಕಿನ ಮೂಲಗಳು. ಆದ್ದರಿಂದ ಆಗಿಂದಾಗ್ಗೆ ಎಲ್ಲ ಪ್ರಾಣಿಗಳ ರಕ್ತ ಪರೀಕ್ಷೆ ಮಾಡಿಸುತ್ತಿರಬೇಕು. ರೋಗದ ಅಥವಾ ಸಂಶಯಾತ್ಮಕ ಪ್ರಾಣಿಗಳ ಚಿಕಿತ್ಸೆ ನಡೆಸಬೇಕು. ಆರೋಗ್ಯಕರ ಪ್ರಾಣಿಗಳನ್ನು ರೋಗದ ಪ್ರಾಣಿಗಳಿಂದ ಬೇರ್ಪಡಿಸಬೇಕು. ಪ್ರಾಣಿಗಳ ಸಂಗಡ ಕೆಲಸಮಾಡುವವರು ರೋಗದ ಪ್ರಾಣಿಗಳಿಂದ ಆದಷ್ಟು ದೂರವಿದ್ದು ಹೆಚ್ಚು ಜಾಗರೂಕತೆ ವಹಿಸಬೇಕು. ಸೋಂಕು ಪ್ರಾಣಿಗಳನ್ನು ಕಟ್ಟಿರುವ ಸ್ಥಳಗಳನ್ನು ಸೋಂಕುನಿವಾರಕಗಳಿಂದ ಚೆನ್ನಾಗಿ ತೊಳೆಯಬೇಕು. ಆ ಮೊದಲು ಕೊಟ್ಟಿಗೆಯ ಆವರಣ, ತಳಹಾಸು, ಸಗಣಿ ಮುಂತಾದವುಗಳ ಮೇಲೆ ಸೋಂಕುನಿವಾರಕ ದ್ರಾವಕಗಳನ್ನು ಚಿಮುಕಿಸಬೇಕು. ಹಾಗೆ ತೊಳೆಯುವಾಗ, ನೀರುಹನಿಗಳು

ಕಣ್ಣಿಗೆ ಹಾರದಂತೆ ಜಾಗರೂಕತೆ ವಹಿಸಬೇಕು. ಸೋಂಕುಪ್ರಾಣಿಗಳು ಈದಾಗ, ಅಥವಾ ಅವುಗಳಲ್ಲಿ ಗರ್ಭಪಾತವಾದಾಗ, ಪಿಂಡಕರು, ಮಾಸು, ಯೋನಿಸ್ರಾವಗಳನ್ನು ದೂರ ಸಾಗಿಸಿ ಅವುಗಳನ್ನು ಆಳದ ಹಳ್ಳಗಳಲ್ಲಿ ಹೂಳಬೇಕು ಇಲ್ಲವೇ ಸುಡಬೇಕು. ಪ್ರಾಣಿಗಳು ಈದಸ್ಥಳಗಳನ್ನು ಪರಿಣಾಮಕಾರಿ ಸೋಂಕು ನಿವಾರಕಗಳಿಂದ ತೊಳೆಯುಬೇಕು. ಹಾಗೆಯೇ ಪ್ರಾಣಿಗಳ ಹಿಂಭಾಗಗಳನ್ನು ತೊಳೆಯುಬೇಕು. ತೊಳೆಯುವಾಗ ನೀರ ಹನಿಗಳು ಹಾರಿ ಕಣ್ಣುಗಳಿಗೆ ಬೀಳದಂತೆ ಜಾಗರೂಕತೆ ವಹಿಸಬೇಕು. ಕೈಕಾಲುಗಳ ಮೇಲಿನ ಗಾಯಗಳನ್ನು ಮುಚ್ಚಿರಬೇಕು.

ಹಸುಗಳು ಕರುಹಾಕಿದಾಗ, ಇಲ್ಲವೇ ಕರುಹಾಕಿದ ಸ್ವಲ್ಪ ಕಾಲಾನಂತರ (ಹಾಗೆಯೇ ಕುರಿ ಮತ್ತು ಮೇಕೆಗಳಲ್ಲೂ ಕೂಡ)ಅವುಗಳಲ್ಲಿ ಸುಪ್ತವಾಗಿದ್ದ ರೋಗವು ಈ ವೇಳೆಯಲ್ಲಿ ಪಟುಗೊಳಿಸಲ್ಪಟ್ಟು, ಆ ಪ್ರಾಣಿಗಳಲ್ಲಿರುವ ರೋಗಾಣುಗಳು ಹಾಲು, ಮೂತ್ರ ಮತ್ತು ಸಗಣಿಯಲ್ಲಿ ವಿಸರ್ಜಿತವಾಗ ತೊಡಗುತ್ತವೆ. ಆದ್ದರಿಂದ ರೋಗಗ್ರಸ್ತ ಪ್ರಾಣಿಗಳ ಹಾಲನ್ನು ಉಪಯೋಗಕ್ಕೆ ಬಳಸಕೂಡದು.

ಯಾವುದೇ ಒಂದು ಪ್ರದೇಶದಲ್ಲಿ ಪ್ರಾಣಿಗಳಲ್ಲಿ ಕ್ಯೂಜ್ವರದ ಇರುವಿಕೆ ಗೊತ್ತಾದ ಕೂಡಲೇ ಅಲ್ಲಿನ ಜನರೆಲ್ಲರ ರಕ್ತ ಪರೀಕ್ಷೆಯನ್ನು ಕೈಗೊಳ್ಳಬೇಕು. ಅಲ್ಲದೆ ಅಲ್ಲಿನ ಜನರನ್ನು 21 ದಿನಗಳವರೆಗೆ ಗಮನಿಸುತ್ತಿರಬೇಕು. ರೋಗದಿಂದ ನರಳುತ್ತಿರುವ ಅಥವಾ ಸಂಶಯಾತ್ಮಕ ರೋಗಿಗಳನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಬೇಕು. ಬರಿಯ ಪಾಶ್ಚೀಕರಣೆಯಿಂದ ಹಾಲಿನಲ್ಲಿರುವ ಕಾಕ್ಸಿಯೆಲ್ಲಾ ಬರ್ನೆಟ ಜೀವಾಣುಗಳು ನಾಶವಾಗುವುದಿಲ್ಲ. ಆದ್ದರಿಂದ ಪ್ರಾಣಿಗಳಲ್ಲಿ ಕ್ಯೂಜ್ವರದ ವರದಿಗಳಿರುವ ಪ್ರದೇಶಗಳಲ್ಲಿನ ಜನರು ಅಲ್ಲಿ ಉತ್ಪತ್ತಿಯಾದ ಹಾಲನ್ನು ಚೆನ್ನಾಗಿ ಕುದಿಸಿ, ಆರಿಸಿ ಕುಡಿಯಬೇಕು. ಮಾಂಸ ಮತ್ತು ಹಾಲಿನ ಸಂಸ್ಕರಣಾಕೇಂದ್ರಗಳಿಗೆ ವಿಶೇಷ ಗಮನ ಕೊಡಬೇಕು.

ಆಧಾರ ಗ್ರಂಥಗಳು

1. Alston, J. M and J. C Broom., **Leptospirosis in man and animals.** London : E & S. Livingstone Ltd., Edinburgh, 1958.

2. Beeson, P. B., and McDermott, W., **Text Book of Medicine.** Philadelphia : W. B. Saunders Co., 14th Edition, 1975.

3. *Hull, T. A.,* ***Diseases transmitted from animals to man.*** *(Fifth Edn.), Springfield, Illinois, U.S.A. Charles C. Thomas, 1963.*

4. Nagalotimath, S.J. and Joglekar, M. D., 1974, **Prevention of Brucellosisis Belgaum,** Bull Ind. Med. Assn. Bombay Branch., 11–457.

5. Nagington, 1966-7., **Milker's Nodules, Cow Pox and orf,** Veterinary Annual, 8th issue pp. 170-173.

6. Samuel Bedon., Downie, A. W., MacCallum, F.O. and C.H. Stuart-Harris, **Viral and Rickettsial diseases of man.** (Fourth Edn), London : Edward Arnold Ltd., 1967.

7. Sphinx, W. W, **The Nature of Brucellosis.** Minneapolis ; University of Minnesota, 1956.

8. Summer Institute on Veterinary Public Health. Izathnagar/ Mukteswar : 1970.

9. Wilcox, A. and Manson-Bahr, B., **Manson's Tropical Diseases.** London : Crowell Colliere Macmillan Publication, 1972.

ಪಾರಿಭಾಷಿಕ ಪದಕೋಶ

ಅನ್ನನಾಳ	Oesophagus
ಅವಳಿ ಸೀಳುವಿಕೆ	Binary fission
ಈಲಿ	Liver
ಉಣ್ಣೆಗಾರರ ರೋಗ	Wool sorte's disease
ಉರಿಯೂತ	Inflammation
ಉಲ್ಬದ್ರವ	Amniutic fluid
ಕಬ್ಬು ಕಟಾವುಜ್ವರ	Svgarcane cutter's fever
ಕಂದುಹಾಕು	Abortion
ಕಾಮಗಾರಿಕಾ ರೋಗ	Occupationd disease
ಕಿರುಫಲಕಗಳು	Platelets
ಕೀವುಗಾಲುವೆ (ನಾಳಿಹುಣ್ಣು)	Fistula
ಕುದುರೆಸಿಂಬಳ ರೋಗ	Glanders
ಕೆಂಪಾನುರಾಗಿಕ ಬಿಳ್ಕಣ	Oesinophils
ಕೆಮ್ಮೂತ್ರರೋಗ	Red water disease
ಗದ್ದೆಜ್ವರ	Ricefield fever
ರೋಗಾಣು	Bacteria
ತರಚಿಕೆ	Abrasion
ತೊರಳೆ	Spleen
ದನಸಿಡುಬು	Cow pox
ದನಿನಾಳ	Larynx
ನಂಜಿನ ಸ್ವರೂಪ	Septic form
ನಂಜುರೋಧಕ	Antiseptic
ನರಸಂಬಂಧಿ ಸ್ವರೂಪ	Nervous form
ನರಹುಲಿ ಸೋಂಕು	Warts
ನವಿಜಾಲ ಮೇಲ್ಪದರು	Reticuloendo-epithelium
ನಾಯಿಹುಚ್ಚು	Rabies
ನೀರಭಯ	Hydrophobia
ನೀರುಗಾಯ	Scratch
ನೆರಡಿಬೇನೆ	Anthrax
ನೆಲೆಗೊಂಡ ವಿಷಾಣು	Fixed virus
ಪುಪ್ಪುಸ ಉರಿತ	Phenmonia
ಬಾಯಹುಗಳು	Apthous stomatitis
ಬಾಯಂಗುಳು	Palate
ಬಿಳ್ಕಣಗಳು	White blood cells
ಬೀಜಕಣ	Spore
ಮಣ್ಣುಜ್ವರ	Mud fever
ಮಾಸ	Placenta
ಮಿದುಳು ಬೆನ್ನುಹುರಿಯದ್ರವ	Cerebrospinal fluid
ಮೆದುಮೂಳೆ	Cartilage
ಮೆದುಳುರಿ	Encephalites
ಮೇಲ್ಪದರಿನ ಕಣಗಳು	Epithelial
ರಕ್ತರಸ	Serum
ರಸ್ತೆ ವಿಷಾಣು	Street virus
ರೋಧಕ,	Antibody
ರೋಧಜನಕ	Antigen
ಲೋಳ್ಪರೆ	Mucus membrane
ವಿಷಮಜ್ವರ	Typhoid fever
ವಿಷಾಣು, ವಿಷಕಣ	Virus
ವೇಗನಾಡಿ	Tachycardia
ಸ್ಪರ್ಶಾತಿರೇಕತೆ	Hyperaesthesia
ಸಾರದ್ರವ್ಯ	Culture medium
ಸಿಡಿತ	Spason
ಸೋಂಕು	Infection
ಹಕ್ಕಳೆ, ಹಗರು	Scab
ಹಂದಿ ಹಿಂಡಿನರೋಗ	Swine herd disease
ಹಾಲ್ರಸಗ್ರಂಥಿಯುರಿತ	Lymphadenitis
ಹಾಲ್ರಸನಾಳಗಳು	Lymphatics
ಹಾಲಿಂಡಿಗನ ಕೈಗಂಟುರೋಗ	Milker's nodule
ಹಿಂಪುಟಿಕ	Elastic
ಹಿಮ್ಮಿದುಳು	Cerebellum

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾರಾಟಕ್ಕೆ ದೊರೆಯುವ ಪುಸ್ತಕಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು	(ಪ್ರತಿಗಳು ತೀರಿವೆ)	1-50
2.	ಪೀಡೆ ನಿರ್ವಹಣೆ	(”)	3-75
3.	ಕೀಟ ವಿಂಗಡಣೆ		12-00
4.	ಕೀಟ ಹತೋಟಿ	(ದ್ವಿತೀಯ ಮುದ್ರಣ)	10-90
5.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ—ಭಾಗ-1		5-00
6.	ತರಕಾರಿ ಬೇಸಾಯ	(ಪ್ರತಿಗಳು ತೀರಿವೆ)	10-00
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	(ಸಾದಾಪ್ರತಿ)	3-75
8.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	(ಸಾದಾಪ್ರತಿ)	12-00
		(ಕ್ಯಾಲಿಕೊ ಪ್ರತಿ)	15-00
9.	ರೈತರ ನೆಚ್ಚುಮೆಚ್ಚಿನ ಮರಗಳು	(ಸಾದಾಪ್ರತಿ)	12-00
		(ಕ್ಯಾಲಿಕೊ ಪ್ರತಿ)	15-00
10.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ-2	(ಸಾದಾಪ್ರತಿ)	9-00
		(ಕ್ಯಾಲಿಕೊ ಪ್ರತಿ)	12-00
11.	ಮೈಸೂರು ರಾಜ್ಯದಲ್ಲಿ ಕೃಷಿ	(ಪ್ರತಿಗಳು ತೀರಿವೆ)	10-00
12.	ಮಣ್ಣು ಮತ್ತು ನೀರು ನಿರ್ವಹಣೆ	(ಸಾದಾಪ್ರತಿ)	12-00
		(ಕ್ಯಾಲಿಕೊ ಪ್ರತಿ)	15-00
13.	ಮಣ್ಣು	(ಸಾದಾಪ್ರತಿ)	9-00
		(ಕ್ಯಾಲಿಕೊ ಪ್ರತಿ)	12-00
14.	ಕೃಷಿ ಸಹಕಾರ	(ಸಾದಾಪ್ರತಿ)	5-00
		(ಕ್ಯಾಲಿಕೊ ಪ್ರತಿ)	8-00
15.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	(ಸಾದಾಪ್ರತಿ)	12-00
		(ಕ್ಯಾಲಿಕೊ ಪ್ರತಿ)	15-00
16.	ಗೋಸಂಪತ್ತು	(ಸಾದಾಪ್ರತಿ)	5-00
		(ಕ್ಯಾಲಿಕೊ ಪ್ರತಿ)	8-00
17.	ಧಾನ್ಯದಾಸ್ತಾನು ತತ್ವ ಮತ್ತು ಪದ್ಧತಿಗಳು	(ಸಾದಾಪ್ರತಿ)	6-00
		(ಕ್ಯಾಲಿಕೊ ಪ್ರತಿ)	9-00
18.	ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	(ಸಾದಾಪ್ರತಿ)	14-00
		(ಕ್ಯಾಲಿಕೊ ಪ್ರತಿ)	17-00

19.	ಪಶುವೈದ್ಯಕೀಯ ವಿಜ್ಞಾನ	(ಸಾದಾಪ್ರತಿ)	6-00
		(ಕ್ಯಾಲಿಕೊ ಪ್ರತಿ)	9-00
20.	ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	(ಸಾದಾಪ್ರತಿ)	6-50
		(ಕ್ಯಾಲಿಕೊ ಪ್ರತಿ)	9-50
21.	ಟ್ರ್ಯಾಕ್ಟರುಗಳು ಹಾಗೂ ಅವುಗಳನ್ನು	(ಸಾದಾಪ್ರತಿ)	6-00
	ಸುಸ್ಥಿತಿಯಲ್ಲಿಡುವ ಕ್ರಮಗಳು	(ಕ್ಯಾಲಿಕೊ ಪ್ರತಿ)	10-00
22.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ-3	(ಸಾದಾಪ್ರತಿ)	8-00
		(ಕ್ಯಾಲಿಕೊ ಪ್ರತಿ)	13-00
23.	ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	(ಸಾದಾಪ್ರತಿ)	9-00
		(ಕ್ಯಾಲಿಕೊ ಪ್ರತಿ)	13-00
24.	ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ	(ಸಾದಾಪ್ರತಿ)	12-00
		(ಕ್ಯಾಲಿಕೊ ಪ್ರತಿ)	15-00
25.	ಸಸ್ಯವರ್ಗೀಕರಣ ಶಾಸ್ತ್ರ	(ಸಾದಾಪ್ರತಿ)	12-00
		(ಕ್ಯಾಲಿಕೊ ಪ್ರತಿ)	16-00
26.	ಪೌಷ್ಟಿಕ ಆಹಾರ	(ಸಾದಾಪ್ರತಿ)	7-00
		(ಕ್ಯಾಲಿಕೊ ಪ್ರತಿ)	11-00
27.	ಕಡಲ ವಿಜ್ಞಾನುಗಾಂಕೆ	(ಸಾದಾಪ್ರತಿ)	4-00
		(ಕ್ಯಾಲಿಕೊ ಪ್ರತಿ)	8-00
28.	ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		8-50
29.	ಕಬ್ಬಿನ ಬೆಳೆಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		3-50
30.	ಶಿಶುವಿಹಾರ	(ಸಾದಾಪ್ರತಿ)	7-50
		(ಕ್ಯಾಲಿಕೊ ಪ್ರತಿ)	10-50
31.	ಬೇಳೆಕಾಳು ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ		
		ಅವುಗಳ ಹತೋಟಿ	6-00
32.	ಕೃಷಿ ಎಂಜಿನಿಯರಿಂಗ್ ಪಠ್ಯ ಪುಸ್ತಕ ಸಮೀಕ್ಷಣೆ	(ಸಾದಾಪ್ರತಿ)	7-50
		(ಕ್ಯಾಲಿಕೊ ಪ್ರತಿ)	11-00
33.	ಇಲಿಗಳು ಹಾಗೂ ಅವುಗಳ ನಿಯಂತ್ರಣ	(ಸಾದಾಪ್ರತಿ)	7-50
		(ಕ್ಯಾಲಿಕೊ ಪ್ರತಿ)	11-50
34.	ತರಕಾರಿ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		10-00
35.	ಹಣ್ಣಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		13-00
36.	'ಕ್ಯಾನಿಂಗ್' ಆಹಾರ ಜೋಪಾಸನೆಯ	(ಸಾದಾಪ್ರತಿ)	13-00
	ಒಂದು ಆಧುನಿಕ ವಿಧಾನ	(ಕ್ಯಾಲಿಕೊ ಪ್ರತಿ)	17-00

37. ಅಲಂಕಾರ ಸಸ್ಯಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		8-50
38. ಜೀವಕೋಶ ಕ್ರಿಯಾಶಾಸ್ತ್ರ ಮತ್ತು ಜೀವ ರಸಾಯಶಾಸ್ತ್ರ	(ಸಾದಾಪ್ರತಿ)	16-00
	(ಕ್ಯಾಲಿಕೊ ಪ್ರತಿ)	20-00
39. ಎಲುಬು ಶಾಸ್ತ್ರ	(ಸಾದಾಪ್ರತಿ)	9-00
	(ಕ್ಯಾಲಿಕೊ ಪ್ರತಿ)	13-00
40. ಕಡಲೆಕಾಯಿ (ಶೇಂಗಾ)	(ಸಾದಾಪ್ರತಿ)	8-00
	(ಕ್ಯಾಲಿಕೊ ಪ್ರತಿ)	12-00
41. ಗಣಿತ ಶಾಸ್ತ್ರ ಪ್ರವೇಶಿಕೆ ಭಾಗ-1	(ಸಾದಾಪ್ರತಿ)	20-00
	(ಕ್ಯಾಲಿಕೊ ಪ್ರತಿ)	24-00
42. ಗಣಿತ ಶಾಸ್ತ್ರ ಪ್ರವೇಶಿಕೆ ಭಾಗ-2	(ಸಾದಾಪ್ರತಿ)	16-00
	(ಕ್ಯಾಲಿಕೊ ಪ್ರತಿ)	20-00
43. ತೆಂಗು, ಅಡಿಕೆ ಇತರ ಗರಿಮರಗಳ ಕೀಟಗಳು ಹಾಗೂ ಅವುಗಳ ಹತೋಟಿ		7-00
44. ಪ್ಲಾಂಟೇಶನ್ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		9-50
45. ಭಾರತದಲ್ಲಿ ಕೋಳಿಸಾಕಣೆ	(ಸಾದಾಪ್ರತಿ)	18-00
	(ಕ್ಯಾಲಿಕೊ ಪ್ರತಿ)	22-00
46. ಎಣ್ಣೆ ಬೀಜ(ಕಾಳು)ಗಳ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		6-00
47. ಹತ್ತಿ(ನೂಲು)ಹಾಗೂ ನಾರಿನ ಬೆಳೆಗಳಿಗೆ ಬೀಳುವ ಕೀಟಗಳು ಹಾಗೂ ಅವುಗಳ ಹತೋಟಿ		8-00
48. ಕಳ್ಳಿಸಾರು(ಭೂತಾಳೆ)ಗಿಡಗಳು	(ಸಾದಾಪ್ರತಿ)	4-00
	(ಕ್ಯಾಲಿಕೊ ಪ್ರತಿ)	8-00
49. ಭಾರತೀಯ ಗ್ರಾಮೀಣ ಯುವಕ ರೈತ ಸಂಘಗಳ ಸಂಘಟನೆ	(ಸಾದಾಪ್ರತಿ)	6-50
	(ಕ್ಯಾಲಿಕೊ ಪ್ರತಿ)	10-50
50. ಸಾಕುಪ್ರಾಣಿ ಮೂಲದ ಸೋಂಕುರೋಗಗಳು	(ಸಾದಾಪ್ರತಿ)	6-00
	(ಕ್ಯಾಲಿಕೊ ಪ್ರತಿ)	10-00